
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 27 ಜುಲೈ 03, 2005 ಬೆಲೆ ರೂ. 3.00

ಕಾಲ್‌ಸೆಂಟರ್‌ನ ನಡುರಾತ್ರಿ ಚೆಲುಗಳು





ಪೆಟ್ರೋಲ್ - ಡೀಸೆಲ್ ಬೆಲೆ ಏರಿಕೆ ಅನಿವಾರ್ಯವೇ ?



ಸಮ್ಮಿಶ್ರ ಸರ್ಕಾರದ ಒಂದು ವರುಷ

ಬಾಗೇಪಲ್ಲಿ : ಕಾಂಗ್ರೆಸ್‌ನ ಕೊಲೆ ಪಾತಕ ರಾಜಕೀಯ


ಶಿಡ್ಲಘಟ್ಟ : ಅತ್ಯಾಚಾರಿಗಳಿಗೆ ಪೊಲೀಸರೇ ರಕ್ಷಕರು

ಸಿನಿಮಾ



- ಮೆಕ್ಸಿಕೋ - ಬದಲಾವಣೆಯ ಬಿರುಗಾಳಿ
- ಕೊಲ್ಕತ್ತ - ಎಡರಂಗದ ಪ್ರಚಂಡ ಜಯ
- ಜಿನ್ನಾ - ಬಹಿರಂಗ - ಅಂತರಂಗ ?


ಯಾರಾದರೂ ಮೂವತ್ತು ನಲವತ್ತು ವರ್ಷಗಳ ಕೆಳಗೆ ಜಿನ್ನಾ ಅವರನ್ನು 'ಇಸ್ಲಾಂ ಧರ್ಮೋದ್ಧಾರಕ' ಎಂದು ಕರೆದಿದ್ದರೆ ಬೇರೆಲ್ಲರಿಗಿಂತ ಸ್ವತಃ ಜಿನ್ನಾಗೇ ಹೆಚ್ಚು ಅಚ್ಚರಿಯಾಗುತ್ತಿತ್ತೇನೊ? ಆ ದಿನಗಳಲ್ಲಿ ಯಾರಾದರೂ ಧರ್ಮದ ಬಗ್ಗೆ ಮಾತಾಡಿದರೆ ಜಿನ್ನಾ ಸಿನಿಕತನದ ನಗೆ ನಕ್ಕು ಸುಮ್ಮನಾಗುತ್ತಿದ್ದರು. ಧಾರ್ಮಿಕ ವಿದ್ವೇಷದ ಮಾತುಗಳನ್ನು ಅವರು ಖಂಡಿಸುತ್ತಿದ್ದರು. ಆದರೆ ಇಂತಹ ಜಿನ್ನಾರವರು ಮುಂದೆ ಏನಾದರು? ಪಾಕಿಸ್ತಾನದ ಜನಕ ಜಿನ್ನಾರವರನ್ನು ಹತ್ತಿರದಿಂದ ಕಂಡ ಖ್ಯಾತ ಪತ್ರಕರ್ತ ಬರ್ಕ್‌ವೈಟ್ 1948 ರ ಸುಮಾರಿನಲ್ಲಿ ಕಂಡ ವ್ಯಕ್ತಿತ್ವದ ಎಳೆಗಳ ಹಲವು. ಜಿನ್ನಾ ಕುರಿತ ಚರ್ಚೆ ನಡೆದಿರುವ ಈ ಸಂದರ್ಭದಲ್ಲಿ ನಿಮಗಾಗಿ.....



ಪಾಕಿಸ್ತಾನದ ಸೃಷ್ಟಿಕರ್ತ

ಜಿನ್ನಾ: ಬಹಿರಂಗ-ಅಂತರಂಗ

'Garden city of untouchables'ನಲ್ಲಿ ಗಾಂಧಿಯವರ ತಾತ್ಕಾಲಿಕ ಬಿಡಾರ ಆರಂಭವಾಗಿ ಒಂದು ವರ್ಷವಾಗಿತ್ತು. ಕಾಂಗ್ರೆಸ್ ಹಾಗೂ ಬ್ರಿಟಿಷ್ ಸಂಧಾನಕಾರರ ಮುಂದೆ ಮನಬಂದಂತೆ ಆಟವಾಡಿ ಜಿನ್ನಾ ತನ್ನ ಗುರಿಯನ್ನು ಸಾಧಿಸಿಯೂ ಒಂದು ವರ್ಷವಾಗಿತ್ತು. ಈ ಸಂದರ್ಭದಲ್ಲಿ ನಾನು ಕರಾಚಿಯಲ್ಲಿ ಜಿನ್ನಾ ಅವರನ್ನು ಅರಮನೆಯಂತಹ ಅವರ ಮನೆಯಲ್ಲಿ ಭೇಟಿ ಮಾಡಲು ಹೊರಟೆ.



ಪಾಕಿಸ್ತಾನ ಹುಟ್ಟಿಕೊಂಡು ಒಂದು ತಿಂಗಳಾಗಿತ್ತು. ಅದರ ರಾಜಧಾನಿಯಾಗಿ ಕರಾಚಿ ತ್ವರಿತವಾಗಿ ಬೆಳೆಯುತ್ತಿತ್ತು. ಈ ನಗರದ ನದಿ ತೀರದ ಮರಳು ದಂಡೆಯಲ್ಲಿ ಸಣ್ಣಪುಟ್ಟ ಅಧಿಕಾರಿಗಳಿಗೆ ವಸತಿ ಕಲ್ಪಿಸುವುದಕ್ಕಾಗಿ ಒಂದು ಬೃಹತ್ತಾದ ಟೆಂಟ್‌ಕಾಲೋನಿ ಎದ್ದಿತು. ಪಾಕಿಸ್ತಾನದ ಸರ್ಕಾರಿ ಅಧಿಕಾರಿಗಳಲ್ಲಿ ಪ್ರಮುಖನಾದವನು ಒಬ್ಬನೇ ಒಬ್ಬ. ಆತನೇ ಮಹಮ್ಮದಾಲಿ ಜಿನ್ನಾ. ಆದರೆ ಜಿನ್ನಾ ಇಂತಹ ಟೆಂಟಿನ ಆಶ್ರಯು ಪಡೆಯುವ ಅಗತ್ಯವಿರಲಿಲ್ಲ. ಬ್ರಿಟಿಷ್ ಅಧಿಕಾರಿಗಳು ಖಾಲಿ ಮಾಡಿದ ಅಮೃತಶಿಲೆ ಮತ್ತು ಮರಳುಗಲ್ಲಿನಿಂದ ನಿರ್ಮಿಸಿದ ದೊಡ್ಡ ಸರ್ಕಾರಿ ಬಂಗಲೆ ಅವರಿಗಾಗಿ ಕಾದಿತ್ತು. ಕ್ವೇದ್-ಇ-ಅಜಾಂ(ಜಿನ್ನಾ) ತಮ್ಮ ತಂಗಿ ಫಾತಿಮಾ ಅವರೊಂದಿಗೆ ಗೃಹಪ್ರವೇಶ ಮಾಡಿದ್ದರು. ಟೀಕಾಕಾರರು ಹೇಳುವಂತೆ ಜಿನ್ನಾ 'ಮೂರು ಕಿರೀಟ' ಹಾಕಿಕೊಂಡಿದ್ದರು. ಅವರು ತಮ್ಮನ್ನು ತಾವೇ ಗೌರ್ನರ್ ಜನರಲ್ ಮಾಡಿಕೊಂಡಿದ್ದರು. ಪಾಕಿಸ್ತಾನದ ಏಕೈಕ ರಾಜಕೀಯ ಪಕ್ಷವಾದ ಮುಸ್ಲಿಂಲೀಗ್‌ನ ಅಧ್ಯಕ್ಷತೆಯನ್ನು ತಮಗೇ ಉಳಿಸಿಕೊಂಡಿದ್ದರು ಮತ್ತು ದೇಶದ ಸಂವಿಧಾನವನ್ನು ರೂಪಿಸುವ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಗೂ ಅವರೇ ಅಧ್ಯಕ್ಷರು.

"ಇದು ಇಷ್ಟು ಬೇಗ ಸಿಗುತ್ತದೆ ಎಂದು ನಾವು ನಿರೀಕ್ಷಿಸಿರಲಿಲ್ಲ. ನಮ್ಮ ಜೀವಮಾನದಲ್ಲೇ ಇದು ಕೈಗೂಡುತ್ತದೆ ಅಂತ ಅಂದುಕೊಂಡಿರಲಿಲ್ಲ" ಫಾತಿಮಾ ಹೇಳಿದರು. ಇದನ್ನು ತಮ್ಮ ಕುಟುಂಬದ ಹೆಮ್ಮೆಯ ಸಾಧನೆ ಎಂಬಂತೆ ಫಾತಿಮಾ ಹೇಳಿದರೆ ಆಕೆಯ ಸೋದರನದು ಅತಿರೇಕದ ಪರಾಕಾಷ್ಠೆಯಾಗಿತ್ತು. ತಳದಲ್ಲಿ ಹುದುಗಿದಂತಿದ್ದ ಆತನ ಕಣ್ಣುಗಳು ಉನ್ಮಾದದಿಂದ ಕುಣಿಯುತ್ತಿದ್ದವು. ಮಿತಿಮೀರಿದ ಆನಂದೋದ್ರೇಕದ ಹೊಳೆ ಅವರ ನರನರಗಳಲ್ಲಿಯೂ ಹರಿಯುತ್ತಿರು ವುದು ಅವರ ನಡವಳಿಕೆಗಳಿಂದ ವ್ಯಕ್ತವಾಗುತ್ತಿತ್ತು. ಜಗತ್ತಿನ ಬಹುದೊಡ್ಡ ಇಸ್ಲಾಮಿಕ್ ರಾಷ್ಟ್ರವನ್ನು ಸೃಷ್ಟಿಸಿದ ಸಾಧನೆಗಾಗಿ ನಾನು ಅವರಿಗೆ ಕೆಲವೊಂದು ಮಾತುಗಳನ್ನು ಹೇಳಿದೆ.

"ಓ! ಇದು ಕೇವಲ ದೊಡ್ಡ ಇಸ್ಲಾಮಿಕ್ ರಾಷ್ಟ್ರ ಮಾತ್ರವಲ್ಲ. ಪಾಕಿಸ್ತಾನ ಇಡೀ ಜಗತ್ತಿನಲ್ಲಿ ಐದನೇ ಅತಿದೊಡ್ಡ ರಾಷ್ಟ್ರ!"ನಾನು ಇದನ್ನು ಸಾಧಿಸಿದೆ ಎಂಬ ಜಂಭ ಅವರ ಮಾತಿನಲ್ಲಿ ತುಳುಕುತ್ತಿತ್ತು. ಇದಕ್ಕೆ ಎಷ್ಟು ಮಾನವ ಜೀವಿಗಳ ಬಲಿಕೊಡಬಾಕಾಯಿತು ಎಂಬ ಯೋಚನೆಯೇ ಆತನ ತಲೆಯಲ್ಲಿ ಸುಳಿದಂತಿರಲಿಲ್ಲ. ಹೊಸದಾದ ಮುಸ್ಲಿಂ ಮಾತೃಭೂಮಿಯನ್ನು ಸೃಷ್ಟಿಸುವುದಕ್ಕಾಗಿ ಬಲಿಯಾದ ಮುಸ್ಲಿಮರ ಸಂಖ್ಯೆ ಇಡೀ ಎರಡನೇ ಮಹಾಯುದ್ಧದಲ್ಲಿ ಅಮೇರಿಕಾ ಕಳೆದುಕೊಂಡ ಮಾನವ ಜೀವಿಗಳ ಸಂಖ್ಯೆಗಿಂತ ಹೆಚ್ಚಾಗಿತ್ತು. ಪಾಕಿಸ್ತಾನದ 70 ದಶಲಕ್ಷ ಜನರಿಗಾಗಿ ಜಿನ್ನಾ ಏನಾದರೊಂದು ರಚನಾತ್ಮಕ ಯೋಜನೆ ಹಾಕಿಕೊಂಡಿರಬಹುದೆ! ಎಂಬ ಕುತೂಹಲದಿಂದ "ನೀವು ಎಂತಹ ಸಂವಿಧಾನ ಮಾಡ ಬೇಕೆಂದಿದ್ದೀರಿ ಎಂಬ ಪ್ರಶ್ನೆಯನ್ನು ಅವರಿಗೆ ಕೇಳಿದೆ. ಅದರಲ್ಲೇನು ವಿಶೇಷ, ಅದು ಜನತಂತ್ರದ ಸಂವಿಧಾನವಾಗಿರುತ್ತದೆ. ಇಸ್ಲಾಂ ಒಂದು ಪ್ರಜಾಸತ್ತಾತ್ಮಕ ರಾಜ್ಯ" ಎಂದರು. ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವ ಎಂಬ ಪದ ಬಹಳ ಸಡಿಲವಾಗಿ ಬಳಕೆಯಾಗುತ್ತದೆ. "ನಿಮ್ಮ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಎಂದರೆ ಏನು"ಎಂದು ಕೇಳಿದೆ.

"ಜನತಂತ್ರವನ್ನು ನಾವೇನೂ ಈಗ ಹೊಸದಾಗಿ ಕಲಿಯುತ್ತಿಲ್ಲ. ಅದು ನಮ್ಮ ರಕ್ತದಲ್ಲಿ ಇದೆ. ಬಡವರಿಗಾಗಿ ನಮ್ಮಲ್ಲಿ ಯಾವಾಗಲೂ ಒಂದು ವ್ಯವಸ್ಥೆ ಇದೆ. ಜಕತ್ ಅಂದರೆ ನಾವು ಬಡವರಿಗಾಗಿ ಮಾಡಬೇಕಾದ ಸೇವೆ"

ಜನತಂತ್ರಕ್ಕೂ ದಾನಧರ್ಮಕ್ಕೂ ಗಂಟುಹಾಕುತ್ತಿರುವ ಅವರ ಮಾತು ನನ್ನಲ್ಲಿ ಗೊಂದಲ ಉಂಟುಮಾಡಿತು. ಈ ಬಗ್ಗೆ ಇನ್ನಷ್ಟು ಸ್ಪಷ್ಟವಾಗಿ ಹೇಳಿ ಎಂದೆ.

"ಹದಿಮೂರನೇ ಶತಮಾನ ದಿಂದಲೂ ನಮ್ಮ ಇಸ್ಲಾಮಿಕ್ ತತ್ವಗಳೆಲ್ಲ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯವನ್ನು ಆಧರಿಸಿವೆ" ಅವರು ಹದಿಮೂರನೆ ಶತಮಾನದಿಂದ ಎಂದು ಹೇಳಿದ್ದು ಇನ್ನಷ್ಟು. ನನ್ನ ತಲೆ ಕೆಡಿಸಿತು. ಪಾಕಿಸ್ತಾನದಲ್ಲಿ ಸಾಮಾಜಿಕ ನ್ಯಾಯ ಎಂಬ ಮಾತಿನೊಂದಿಗೆ ಮಧ್ಯಕಾಲೀನ ಕೆಲವು ಅವಶೇಷಗಳು ಬೆರೆತಿದ್ದವು. ಉದಾಹರಣೆಗೆ ಫ್ಯೂಡಲ್ ಭೂವ್ಯವಸ್ಥೆಯ ಅವಶೇಷಗಳು. ಈ ಬಗ್ಗೆ ಹೊಸ ಸಂವಿಧಾನ ಏನು ಮಾಡುತ್ತದೆ? ಪೈಗಂಬರ್ ಮಹಮ್ಮದರ ಕಾಲದಿಂದಲೂ ಮುಸ್ಲೀಮರ ವ್ಯವಹಾರ, ನಡವಳಿಕೆಗಳನ್ನು ನಿಯಂತ್ರಿಸುತ್ತ ಬಂದಿರುವ ಕುರಾನನ್ನು ನಿರಂಕುಶ ಅಧಿಕಾರ ಅಥವಾ ಕಟ್ಟಾ ಸಮಾಜವಾದ ಎಂಬ ಅರ್ಥ ಬರುವ ಹಾಗೆ ಉದ್ದೇಶಪೂರ್ವಕವಾಗೇ ವ್ಯಾಖ್ಯಾನಿಸಲಾಗಿದೆ. ಈ ಭೂಮಿ ದೇವರಿಗೆ ಸೇರಿದ್ದು ಎಂದು ಕುರಾನ್ ಹೇಳುತ್ತದೆ. ಈ ಬಗ್ಗೆ ಸಂವಿಧಾನದಲ್ಲಿ ಸರಿಯಾದ ಸ್ಪಷ್ಟೀಕರಣ ನೀಡುವ ಅಗತ್ಯವಿದೆ. ಪಾಕಿಸ್ತಾನದಲ್ಲಿ ಬಹಳಷ್ಟು ಕೇಳಿ ಬರುತ್ತಿರುವ "ನಿಜವಾದ ಇಸ್ಲಾಮಿಕ್ ತತ್ವಗಳನ್ನು" ಹೊಸ ರಾಷ್ಟ್ರದ ಕಾನೂನುಗಳೊಂದಿಗೆ ತಾಳೆ ಹಾಕುವ ಕೆಲಸವಷ್ಟೆ ಲಾಯರ್ ಆಗಿರುವ ಜಿನ್ನಾ ಮಾಡಬಹುದು. ಆದರೆ ಜಿನ್ನಾ ಮಾತ್ರ ಈ ಭೂಮಿ ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ಸಿದ್ಧವಾಗಿದೆ. ಸಂವಿಧಾನ ಪ್ರಜಾಸತ್ತಾತ್ಮಕವಾಗಿರುತ್ತದೆ ಎಂದು ಹೇಳುತ್ತಾರೆ.

> **ಜನತಂತ್ರಕ್ಕೂ ದಾನಧರ್ಮಕ್ಕೂ ಗಂಟುಹಾಕುತ್ತಿರುವ ಅವರ ಮಾತು ನನ್ನಲ್ಲಿ ಗೊಂದಲ ಉಂಟುಮಾಡಿತು.**

ದೇಶದ ಕೈಗಾರಿಕಾ ಪ್ರಗತಿಯ ಬಗ್ಗೆ ನಿಮ್ಮ ಯೋಜನೆಗಳೇನು ಅಮೇರಿಕಾದಿಂದ ತಾಂತ್ರಿಕ ಅಥವಾ ಹಣಕಾಸಿನ ನೆರವನ್ನು ಪಡೆದುಕೊಳ್ಳುವ ಉದ್ದೇಶ ವೇನಾದರೂ ಇದೆಯೇ ಎಂಬ ಪ್ರಶ್ನೆಗೆ ಜಿನ್ನಾ ಹೇಳಿದರು: ಪಾಕಿಸ್ತಾನಕ್ಕೆ ಅಮೇರಿಕಾದ ಅವಶ್ಯಕತೆ ಇರುವುದಕ್ಕಿಂತಲೂ ಅಮೇರಿಕಾಗೆ ಪಾಕಿಸ್ತಾನದ ಅವಶ್ಯಕತೆ ಇದೆ. ಪಾಕಿಸ್ತಾನ ಈ ಜಗತ್ತಿನ ಕೇಂದ್ರ ಬಿಂದು. ಇಡೀ ಜಗತ್ತು ಈ ತಿರುಗಣೆಯ ಸುತ್ತ ತಿರುಗಬೇಕು ಎಂದು ತಮ್ಮ ತೋರುಬೆರಳನ್ನು ವೃತ್ತಾಕಾರ ವಾಗಿ ಸುತ್ತಿ ಹೇಳಿದರು. ಜಗತ್ತಿನ ಭವಿಷ್ಯ ಇದರ ನೆಲೆಯನ್ನೇ ಅವಲಂಬಿಸಿದೆ ಅನ್ನುತ್ತ ನನ್ನತ್ತ ಬಾಗಿ ಒಂದು ರಹಸ್ಯವನ್ನು ಹೇಳುವ ದನಿಯಲ್ಲಿ "ರಷಿಯಾ ನಮಗೆ ಬಹಳ ದೂರವೇನಿಲ್ಲ" ಎಂದರು.

ಈ ಮೂಲಕ ಅವರ ಇಂಗಿತ ಅರ್ಥವಾಯಿತು. ಈ ಕಾರಣದಿಂದಲೇ ಅವರು ಅಮೇರಿಕಾದ ಸ್ನೇಹಕ್ಕಾಗಿ ಹಾತೊರೆಯುತ್ತಿಲ್ಲ. ಈ ಹೊಸ ದೇಶದ, ರಸ್ತೆ ಸಂಪರ್ಕವಿಲ್ಲದ ಪರ್ವತಶ್ರೇಣಿಯ ಆಚೆ ಬೀದಿಯಲ್ಲಿ ಬೊಲ್ಶೆವಿಕ್ಕರ ರಾಜ್ಯವಿತ್ತು. ಕ್ವೇದ್-ಇ-ಅಜಾಂ, ತಮ್ಮ ದೇಶವು ಈ ಎರಡು ಸಬಲ ರಾಷ್ಟ್ರಗಳ ನಡುವಿನ ಬಫರ್‌ನಂತಿರಬೇಕು ಎಂದು ಆಲೋಚಿಸಿರಬಹುದು. ಜಗತ್ತಿನ ಇತರ ಭಾಗಗಳಲ್ಲಿ ಅಮೆರಿಕಾ ಮಿಲಿಟರಿ ಆಸಕ್ತಿ ಹೊಂದಿರುವ ವಿಷಯವನ್ನು ಅವರು ಒತ್ತಿ ಹೇಳಿದರು.

ಅಮೆರಿಕಾ ಎಚ್ಚೆತ್ತುಕೊಂಡಿದೆ. ಗ್ರೀಸ್ ಮತ್ತು ಟರ್ಕಿಗಳಿಗೆ ಬೆಂಬಲ ಒದಗಿಸುತ್ತಿರುವ ಆ ದೇಶ ಪಾಕಿಸ್ತಾನಕ್ಕೆ ಹಣ, ಶಸ್ತ್ರಾಸ್ತ್ರ ಒದಗಿಸಲು ಹೆಚ್ಚಿನ ಆಸಕ್ತಿ ವಹಿಸಬೇಕು. ಒಂದು ವೇಳೆ ರಷಿಯಾ ಈ ಕಡೆ ತಲೆಹಾಕಿದರೆ ಇಡೀ ಜಗತ್ತೇ ಅಲ್ಲೋಲ ಕಲ್ಲೋಲ....... ಎಂದರು ಜಿನ್ನಾ.

ಮುಂದಿನ ಕೆಲವು ವಾರಗಳಲ್ಲಿಯೇ ಕ್ವೇದ್-ಇ-ಅಜಾಂರ ಈ ಸಿದ್ಧಾಂತ ಪಾಕಿಸ್ತಾನದಾದ್ಯಂತ ಸರ್ಕಾರಿ ಅಧಿಕಾರಿಗಳ ಮೂಲಕ ಪ್ರತಿಧ್ವನಿವಾಗತೊಡಗಿತು. ನಮ್ಮ ಸೈನ್ಯವನ್ನು ಅಮೆರಿಕಾ ದೇಶವೇ ನಿರ್ಮಾಣ ಮಾಡಿಕೊಡುತ್ತದೆ. ರಷ್ಯ ಪ್ರವೇಶವನ್ನು ತಡೆಯುವುದಕ್ಕಾಗಿ ಖಂಡಿತವಾಗಿ ಅಮೆರಿಕಾ ನಮಗೆ ಸಾಲಗಳನ್ನು ಕೊಟ್ಟೇಕೊಡುತ್ತದೆ ಎಂದು ಅಧಿಕಾರಿಗಳು ಹೇಳತೊಡಗಿದ್ದರು. ರಷ್ಯ ಇತ್ತ ಕಡೆ ಬರುವ ಸೂಚನೆಗಳೇನಾದರೂ ಇವೆಯೇ ಎಂದು ಕೇಳಿದಾಗ ಮಾತ್ರ ಅವರ ಮುಖಗಳಲ್ಲಿ ಖಿನ್ನತೆ ಆವರಿಸುತ್ತಿತ್ತು. ರಷ್ಯಾ ಪಾಕಿಸ್ತಾನದತ್ತ ಆಸಕ್ತಿ ವಹಿಸುವ ಸೂಚನೆಗಳನ್ನೇನೂ ತೋರಿಸಿಲ್ಲ ಎಂದು ವ್ಯಥೆ ತುಂಬಿದ ದನಿಯಲ್ಲಿ ಹೇಳುತ್ತಿದ್ದರು. ಇಷ್ಟಾಗಿಯೂ ಅವರು ಅಮೆರಿಕಾದಿಂದ ಹಣಕಾಸು, ಒದಗುತ್ತದೆ ಎಂದು ದೃಢವಾಗಿ ಹೇಳುತ್ತಿದ್ದರು. ಅವರ ಉದ್ದೇಶ ಬೋಲ್ಶೆವಿಸಂ ವಿರುದ್ಧ ಜಗತ್ತನ್ನು ಎತ್ತಿ ಕಟ್ಟುವುದೋ ಅಥವಾ ಹೊಸದಾಗಿ ರಾಜಕೀಯ ಅಸ್ತಿತ್ವಗಳಿಸಿದ ಪಾಕಿಸ್ತಾನದ ಅನಿಶ್ಚಿತ ಸ್ಥಿತಿಗೆ ಭರವಸೆ ಮೂಡಿಸುವಂತೆ ಮಾಡುವುದೋ ಗೊತ್ತಾಗುತ್ತಿರಲಿಲ್ಲ. ನನಗನ್ನಿಸುವಂತೆ ಇದು ಈ ಮುಸ್ಲಿಂ ರಾಜ್ಯ ವಿಚಾರಗಳ ದಿವಾಳಿತನದ ದ್ಯೋತಕವಾಗಿತ್ತು. ಪುರಾತನ ಧಾರ್ಮಿಕ ಮತಾಂಧತೆಯ ಕೆಂಡದ ಮೇಲಿನ ಬೂದಿಯನ್ನೇ ಊದಿ ಊದಿ ಅದನ್ನು ಉರಿಯಾಗಿ ಮೇಲೆಬ್ಬಿಸುವ ಸನ್ನಾಹವನ್ನೂ ಅವರು ಮಾಡುತ್ತಿದ್ದರು.

ಪಾಕಿಸ್ತಾನಕ್ಕಾಗಿ ಹೋರಾಟ ಮಾಡುತ್ತಿದ್ದ ಸಂದರ್ಭದಲ್ಲಿ ಜಿನ್ನಾ ಪದೇ ಪದೇ ಬಳಸಿದ ತಂತ್ರ, ವಿರೋಧಿಗಳ ವಿರುದ್ಧ ವಿರೋಧಿಗಳನ್ನು ಎತ್ತಿಕಟ್ಟುವುದು. ಈಗ ಅವರು ಇದೇ ತಂತ್ರವನ್ನು ತಮ್ಮ ವಿದೇಶಾಂಗ ನೀತಿಗೂ ಅನ್ವಯಿಸಲು ಹೊರಟಿದ್ದರು. ಎರಡು ಮಹಾರಾಷ್ಟ್ರಗಳ ನಡುವಿನ ತಿಕ್ಕಾಟದ ಜೊತೆಗೆ ಪ್ಯಾಲೆಸ್ತೀನ್ ವಿಷಯವನ್ನೂ ಅವರು ಇದೇ ರೀತಿ ಬಳಸಿಕೊಳ್ಳತೊಡಗಿದ್ದರು. ಪಾಕಿಸ್ತಾನದ ಆಂತರಿಕ ಸಮಸ್ಯೆಗಳೇ ಸಾಕಷ್ಟಿದ್ದವು. ಇಷ್ಟಿದ್ದೂ ಅವರು ಜ್ಯೂಗಳ ವಶದಿಂದ

ಪುಟ 12 ಕ್ಕೆ

ಪ್ರಯಾಣ ದರ ಹೆಚ್ಚಳ : ಜೂನ್ 28 ರಂದು ರಾಜ್ಯದಾದ್ಯಂತ ಪ್ರತಿಭಟನೆಗಾಗಿ ಸಿಪಿಐ(ಎಂ) ನಿರ್ಧಾರ

ಪೆಟ್ರೋಲ್-ಡೀಸೆಲ್ ದರಗಳ ಹೆಚ್ಚಳವನ್ನೇ ನೆಪವಾಡಿಕೊಂಡು ಬಸ್ ಪ್ರಯಾಣದ ದರಗಳನ್ನು ವಿಪರೀತವಾಗಿ ಹೆಚ್ಚಿಸಿರುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸಭೆಯು ತೀವ್ರವಾಗಿ ಖಂಡಿಸಿದೆ.

ತೈಲ ಬೆಲೆಗಳ ಏರಿಕೆ, ಅಗತ್ಯ ವಸ್ತುಗಳ ಬೆಲೆಗಳು ಜೀವನ ನಿರ್ವಹಣ ವೆಚ್ಚಗಳ ಹೆಚ್ಚಳದಿಂದಾಗಿ ತತ್ತರಿಸುತ್ತಿರುವ ಜನಸಾಮಾನ್ಯರ ಮೇಲೆ ಈ ಪ್ರಯಾಣ ದರಗಳ ಹೆಚ್ಚಳ ಗಾಯದ ಮೇಲೆಬರೆ ಎಳೆದಂತಾಗಿದೆ ಎಂದು ಸಭೆಯು ಟೀಕಿಸಿದೆ. ಶೇ 3 ರಷ್ಟು ಹೆಚ್ಚಳವೆಂದು ಸರ್ಕಾರ ಹೇಳುತ್ತಿದ್ದರೂ ವಾಸ್ತವದಲ್ಲಿ ಅದು ಶೇ 25ನ್ನೂ ದಾಟುತ್ತಿದೆ.

ಇದೇ ಜೂನ್ 24 ಮತ್ತು 25 ರಂದು ಸೇರಿದ ಬೆಂಗಳೂರಿನಲ್ಲಿ ಸಭೆ ಸೇರಿದ ರಾಜ್ಯ ಸಮಿತಿಯು ಪ್ರಯಾಣ ದರ ಏರಿಕೆ ವಿರುದ್ಧ ಇದೇ ಜೂನ್ 28 ರಂದು ವ್ಯಾಪಕವಾಗಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಅಂದು ಪ್ರತಿಭಟನಾ ಮೆರವಣಿಗೆ, ರಸ್ತೆ ತಡೆ, ಮತ ಪ್ರದರ್ಶನ ನಡೆಸಲಾಗುವುದು.

ಕೇಂದ್ರ ಸರ್ಕಾರದ ತೈಲದ ಬೆಲೆ ಹೆಚ್ಚಳದ ವಿರುದ್ಧವಾಗಿ ಪ್ರತಿಭಟಿಸುತ್ತಿರುವ ಸಿಪಿಐ(ಎಂ) ಪಕ್ಷವು ಬೆಲೆ ಏರಿಕೆಯ ಹೊರೆಯನ್ನು ಜನಸಾಮಾನ್ಯರ ಮೇಲೆಹೊರಿಸಬಾರದು, ಪೆಟ್ರೋಲ್ ಬೆಲೆ ಏರಿಸುವ ಕೇಂದ್ರ ಸರ್ಕಾರದ ತೀರ್ಮಾನವನ್ನು ಪುನಃ ವಿಮರ್ಶಿಸಬೇಕೆಂದು ರಾಜ್ಯದ ಜನತೆಯ ಪರವಾಗಿ ರಾಜ್ಯ ಸರ್ಕಾರ ಒತ್ತಾಯಿಸಬೇಕು.

ಕಾಂಗ್ರೆಸ್ - ಜನತಾದಳ ಸಮ್ಮಿಶ್ರ ಸರ್ಕಾರದ ಒಂದು ವರ್ಷ

ಕಾಂಗ್ರೆಸ್ ಹಾಗೂ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರದ ಅಸ್ತಿತ್ವಕ್ಕೆ ಬಂದು ಒಂದು ವರ್ಷ ಸಂದಿದೆ (1 ವರ್ಷ 1 ತಿಂಗಳು)ಎಪ್ರಿಲ್ 20, 26 ರಂದು ನಡೆದ ಚುನಾವಣೆಗಳ ಮೂಲಕ ಕರ್ನಾಟಕದ ಜನತೆ ನೀಡಿದ್ದ ಆದೇಶವನ್ನು ಕರ್ನಾಟಕ ರಾಜ್ಯ ಸರ್ಕಾರ ಹೇಗೆ ಪಾಲಿಸಿದೆ ಎಂಬುದನ್ನು ವಿಮರ್ಶಿಸಿ ಜನತೆಯ ಮುಂದೆ ಇಡಬೇಕೆಂದು ಸರ್ಕಾರದ ಜನವಿರೋಧಿ ನೀತಿಗಳನ್ನು ಬದಲಿಸಲು ಜನಾಭಿಪ್ರಾಯ ರೂಪಿಸಬೇಕು.

ರಾಜ್ಯದಲ್ಲಿನ ಜನತ 14 ನೇ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರವನ್ನು ಜನ ಕಿತ್ತೆಸೆದರು. ಎಸ್.ಎಂ.ಕೃಷ್ಣ ಸರ್ಕಾರ ರೈತರ ಆತ್ಮಹತ್ಯೆ ಹಸಿವಿನ ಸಾವುಗಳಿಗೆ ಕಾರಣವಾದ ಕೃಷಿ ಬಿಕ್ಕಟ್ಟನ್ನು ಗ್ರಾಮೀಣಪ್ರದೇಶಗಳ ದುಸ್ಥಿತಿಯನ್ನು, ಬರಗಾಲದ ಸಂಕಟಗಳನ್ನು ಹಾಗೂ ರಾಜ್ಯದ್ಯಾಂತ ಉತ್ಪಾದಕ ಕೈಗಾರಿಕೆ (ಮ್ಯಾನುಫಾಕ್ಚರಿಂಗ್) ಗಳ, ಅಸಂಘಟಿತ ಕೈಗಾರಿಕೆಗಳ ಹಾಗೂ ಕಾರ್ಮಿಕರ ಪರಿಸ್ಥಿತಿಯನ್ನು ನಿರ್ಲಕ್ಷಿಸಿದ ಕಾರ ಣಕ್ಕಾಗಿ, ಬೆಂಗಳೂರಿನ ಹಾಗೂ ಐಟಿಬಿಟಿ ಕ್ಷೇತ್ರಗಳಿಗೆ ನೀಡಿದ ಏಕಮುಖೀ ಪ್ರಾಮುಖ್ಯತೆಯ ಪರಿಣಾಮವಾಗಿ, ಕಾರ್ಯಪಡೆಗಳ ಮೂಲಕ ಉದ್ಯಮಿಗಳೊಡನೆ ಬಹಿರಂಗ ಮೈತ್ರಿಗಾಗಿ ಸರ್ಕಾರದ ಸೇವೆಗಳನ್ನು ಕಡಿತಗೊಳಿಸಿದ್ದಕ್ಕಾಗಿ ಹಾಗೂ ಅವುಗಳ ದರಗಳನ್ನು ಹೆಚ್ಚಳಗೊಳಿಸಿದ್ದಕ್ಕಾಗಿ ಸೋಲನ್ನಪ್ಪಿತು. ಕೋಮುವಾದಿಗಳ ಉಪಟಳವನ್ನು ಎದುರಿಸುವಲ್ಲಿನ ನಿಷ್ಕ್ರೀಯತೆಯೂ ಜನರ ಅಸಮಧಾನಕ್ಕೆ ಕಾರಣವಾಯಿತು ಹಿಗಾಗಿ ಬಿಜೆಪಿ ಸರ್ಕಾರಕ್ಕೆ ರಾಜ್ಯದ ಚುಕ್ಕಾಣಿಯನ್ನು ನೀಡಲು ಜನತೆ ನಿರಾಕರಿಸಿದರು. ಹೀಗಾಗಿ ಕಾಂಗ್ರೆಸ್ - ಜನತಾದಳಗಳ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿತು.

ಅನಿವಾರ್ಯ

ಸಮ್ಮಿಶ್ರ ಸರ್ಕಾರದ ರಾಜ್ಯದಲ್ಲಿನ ರಾಜಕೀಯ ಪಕ್ಷಗಳಿಗೂ ಹಾಗೂ ಜನತೆಗೂ ಹೊಸ ಅನುಭವದ ಜೊತೆಗೆ ಚುನಾವಣೆಗಳಿಗೆ ಮೊದಲು ಯಾವುದೇ ರೀತಿಯ ಮೈತ್ರಿ ಹೊಂದಾಣಿಕೆಗಳ ಪ್ರಶ್ನೆಯೇ ಇಲ್ಲದೆ ಪರಸ್ಪರ ಖಾಡಾ ಖಂಡಿಯಾಗಿ ಸೆಣೆಸಾಡಿದ ಎರಡು ಪಕ್ಷಗಳು ಸಮ್ಮಿಶ್ರ ಸರ್ಕಾರ ರಚಿಸಬೇಕಾದ ಅನಿವಾರ್ಯತೆಯಾಯಿತು. ಹೀಗಾಗಿ ಆರಂಭದಲ್ಲಿಯೇ ವಾರಗಳಟ್ಟಲೆ ವಿಳಂಬವಾಗಿ ಕೇವಲ ಇಬ್ಬರು ಮಂತ್ರಿಗಳ ಸಂಪುಟ, ನಂತರ ಕೆಲವಾರಗಳ ನಂತರವೇ 12 ಜನ ಮಂತ್ರಿಗಳ ಸಂಪುಟ ಅಸ್ತಿತ್ವಕ್ಕೆ ಬಂದದ್ದು. ನಂತರ ಚುನಾವಣೆಗಳಾದ 8 ತಿಂಗಳ ನಂತರ ಸಂಪುಟವೊಂದು ಅಸ್ತಿತ್ವಕ್ಕೆ ಬಂದಿತು. ಹೀಗಾಗಿ ಒಂದು ವರ್ಷದ ಆಡಳಿತದಲ್ಲಿ 8 ತಿಂಗಳಲ್ಲಿ ಬಹಳ ಸಮಯ ಈ ವಾದ ವಿವಾದಗಳಿಗೆ ಮೀಸಲಾಯಿತು. ನಂತರ ಎರಡು ಪಕ್ಷಗಳ ನಡುವಣ ಭಿನ್ನಾಭಿಪ್ರಾಯ ಬೀದಿಗೆ ಬಂದಿದೆ. ಪರಸ್ಪರ ಮಣ್ಣೆರಚುವುದು ವಿವಾದಗಳು ಅನೇಕ ವಿಷಯಗಳ ಬಗ್ಗೆ ನಡೆದೇ ಇವೆ. ಈ ಪರಿಸ್ಥಿತಿಗೆ ಎರಡೂ ಪಕ್ಷಗಳೂ ಹೊಣೆಗಾರರಾಗಿವೆ. ಕಾಂಗ್ರೆಸ್ ಪಕ್ಷ ಖಾತೆಗಳ ಹಂಚಿಕೆಯಲ್ಲಿ ಹಿಂದಿನ ಸರ್ಕಾರ ನೇಮಿಸಿದ ಮಂಡಳಿ, ನಿಗಮಗಳ ಅಧ್ಯಕ್ಷರ ರಾಜಿನಾಮೆ ಪಡೆಯುವಲ್ಲಿ ಮತ್ತಿತರ ವಿಷಯಗಳಲ್ಲಿ ಜನತಾದಳಕ್ಕೆ ನೀಡಬೇಕಾದ ಸ್ಥಾನಗಳನ್ನು ನೀಡದೇ ನಿರಾಕರಿಸುತ್ತಿರುವುದು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ವಿವಾದಗಳಲ್ಲಿ ತೊಡಗುತ್ತಿರುವ ರೀತಿ ಒಂದೆಡೆಯಾದರೆ, ಜನತಾದಳ ಆಡಳಿತ ಪಕ್ಷವಾಗಿದ್ದುಕೊಂಡೇ ವಿರೋಧಪಕ್ಷದ ಜಾಗವನ್ನು ಆಕ್ರಮಿಸಲು ಮಾಡುತ್ತಿರುವ ಪ್ರಯತ್ನ ಸಮ್ಮಿಶ್ರ ಸರ್ಕಾರ ಆಡಳಿತದಿಂದ ಜನತೆಯಲ್ಲಿ ಉಂಟಾಗುವ

ಸಮ್ಮಿಶ್ರ ಸರ್ಕಾರವೆಂಬುದು ಕರ್ನಾಟಕದಲ್ಲಿ ಒಂದು ನೂತನ ಪ್ರಯೋಗ. ಈ ಸರ್ಕಾರ ರಚನೆಯಾಗಿ ಒಂದು ವರ್ಷ ಸಂದಿದೆ. ಈ ಅವಧಿಯನ್ನು ಜನಾದೇಶ ಪಾಲಿಸಲು ಬಳಸಲಾಗಿದೆಯೇ? ಈ ಸರ್ಕಾರದ ಭಾಗೀದಾರ ಪಕ್ಷಗಳ ಅಂತರಂಗವನ್ನು ಬಹಿರಂಗಕ್ಕಿಟ್ಟಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು

ನೀಡದಿರಲು ಹಾಗೂ ಜನಪರ ಕಾರ್ಯಕ್ರಮಗಳನ್ನು ಮಾತ್ರ ಬೆಂಬಲಿಸಲು ನಿರ್ಧರಿಸಿತು. ಚುನಾವಣೆಯಲ್ಲಿ ಜನತೆ ವ್ಯಕ್ತಪಡಿಸಿದ ಕೋಪವನ್ನು ಪರಿಗಣನೆಗೆ ತೆಗೆದುಕೊಂಡ ಕೆಲಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. 3 ರೂಗೆ 20 ಕೇ.ಜಿ ಅಕ್ಕಿ, ಸೀಮಿತ ರೂಪದಲ್ಲಿ ಬಡ್ಡಿಮನ್ನಾ, ಅಕ್ಷರದಾಸೋಹದ ವಿಸ್ತರಣೆ, ಹಳದಿ ಕಾರ್ಡ್‌ಗಳ ಸಂಖ್ಯೆಯನ್ನು 75 ಲಕ್ಷಕ್ಕೆ ಹೆಚ್ಚಿಸುವ ಘೋಷಣೆ, ಆರೋಗ್ಯವಿಮಾ ಯೋಜನೆಗಳಿಂದ ಯಶಸ್ವಿನಿಯ ವಿಸ್ತರಣೆ, ಸಂಜೀವಿನಿಯ ಘೋಷಣೆ, ಪ್ಲೇವಿನ್ ಲಾಟರಿ ರದ್ದು ಇಂತಹ ಕಾರ್ಯಕ್ರಮಗಳು ಜನತೆಗೆ ಅಲ್ಪಸ್ವಲ್ಪ ಪರಿಹಾರ ನೀಡಿವೆ. ಆರಂಭದಲ್ಲಿ

ಉದಾರೀಕರಣ, ಖಾಸಗೀಕರಣದ ಜಾಡಿನಲ್ಲಿಯೇ ಮುಂದುವರೆಯುತ್ತಿದೆ. ಜನರ ಜೀವನಕ್ಕೆ ಅನೇಕ ಸಂಕಟಗಳು ಎದುರಾಗಿವೆ.

ಕೈಗಾರಿಕೆಗಳ ಬೆಳವಣಿಗೆ ಬಗ್ಗೆ ಉದ್ಯೋಗ ನಿರ್ಮಾಣದ ಬಗ್ಗೆ ಯಾವ ಉತ್ತೇಜನ ನೀತಿಗಳೂ ಇಲ್ಲ. ಸಾಂಪ್ರದಾಯಿತ ಉದ್ದಿಮೆಗಳ ಸಂಕಷ್ಟಗಳ ಬಗ್ಗೆ ತೀವ್ರ ನಿರ್ಲಕ್ಷ್ಯ? ಮಾಲೀಕರಿಂದ ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆಗಳಿಗೆ ಯಾವ ಕಡಿವಾಣವೂ ಇಲ್ಲದಂತಾಗಿದೆ. ಕಾರ್ಮಿಕ ಕಾನೂನುಗಳ ಜಾರಿಯಲ್ಲಿ ಕಾರ್ಮಿಕ ಇಲಾಖೆಯ ಪಾತ್ರ, ಮಧ್ಯಪ್ರವೇಶಗಳು ಗೌಣವಾಗುತ್ತಿವೆ. ಪೋಲೀಸರ ಮಧ್ಯಪ್ರವೇಶ ಹೆಚ್ಚಾಗುತ್ತಿವೆ.

ಅತೃಪ್ತಿಯ ಪರಿಣಾಮ ತಮ್ಮ ಪಕ್ಷದ ಮೇಲಾಗಬಾರದು ಮತ್ತು ಅದರ ಲಾಭ ತಮಗೆ ಸಿಗಬೇಕೆಂದು ಮಾಡುತ್ತಿರುವ ತಂತ್ರ. ಜೊತೆಗೆ



ಕಾಂಗ್ರೆಸ್ ಪಕ್ಷ ಹಿಂದಿನ ಮುಖ್ಯಮಂತ್ರಿ ಸಚಿವರ ಮೇಲೆ ದೇವೇಗೌಡರು ತೀರಿಸಿಕೊಳ್ಳಬಯಸುತ್ತಿರುವ ವೈಯಕ್ತಿಕ ಸೇಡು ಇವುಗಳು ಸೇರಿವೆ. ಸರ್ಕಾರಕ್ಕೆ ಬೆಂಬಲ ನೀಡದಿರಲು ಹಾಗೂ ಜನಪರ ಕಾರ್ಯಕ್ರಮಗಳನ್ನು ಮಾತ್ರ ಬೆಂಬಲಿಸಲು ನಿರ್ಧರಿಸಿತು. ಹೀಗೆ ಎರಡೂ ಪಕ್ಷಗಳೂ ಜನತೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಹರಿಸದೇ ತಮ್ಮ ತಮ್ಮ ಅಧಿಕಾರದ ಕಿತ್ತಾಟದಲ್ಲಿ ತೊಡಗಿದ್ದಾರೆ ಎಂಬ ಅಭಿಪ್ರಾಯ ಜನತೆಯಲ್ಲಿ ಮೂಡುವಂತಾಗಿದೆ. ಇದು ಸರ್ಕಾರದ ಅಭದ್ರತೆಗೆ - ಜನರಲ್ಲಿಯೂ ಸರ್ಕಾರದ ಭದ್ರತೆ ಬಗ್ಗೆ ಸಂಶಯ ಬರುವಂತೆ ಮಾಡಿದೆ.

ಎರಡು ಪಕ್ಷಗಳ ನಡುವಣ ಭಿನ್ನಾಭಿಪ್ರಾಯ ಬೀದಿಗೆ ಬಂದಿದೆ. ಪರಸ್ಪರ ಮಣ್ಣೆರಚುವುದು ವಿವಾದಗಳು ಅನೇಕ ವಿಷಯಗಳ ಬಗ್ಗೆ ನಡೆದೇ ಇವೆ. ಈ ಪರಿಸ್ಥಿತಿಗಳ ಎರಡೂ ಪಕ್ಷಗಳೂ ಹೊಣೆಗಾರರಾಗಿವೆ.

ಜನಾದೇಶ - ಜಾರಿ?

ಸಮ್ಮಿಶ್ರ ಸರ್ಕಾರದ ಎರಡೂ ಪಕ್ಷಗಳೂ ಕೂಡ ಸರ್ಕಾರ ರಚನೆಯ ಎರಡು ತಿಂಗಳ ನಂತರ ಒಂದು ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿಕೊಂಡವು. ಎಸ್.ಎಂ.ಕೃಷ್ಣ ಸರ್ಕಾರದ ಸೋಲಿನ ಪ್ರಭಾವ ಈ ಕಾರ್ಯಕ್ರಮದಲ್ಲಿ ಮೂಡಿದೆ. ಪದೇ ಪದೇ ಹಿಂದುಳಿದವರ, ದಲಿತರ, ಅಲ್ಪಸಂಖ್ಯಾತರ, ಬಡಜನರ ಕಲ್ಯಾಣದ ಮಾತುಗಳು ಬಂದಿವೆ. ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಐಟಿ,ಬಿಟಿ ಬೆಂಗಳೂರು ಇವುಗಳನ್ನು ಪ್ರಮುಖವಾಗಿ ಪ್ರಸ್ತಾಪಿಸುವುದಕ್ಕೆ ಹೋಗಿಲ್ಲ. ಹಿಂದಿನ ಸರ್ಕಾರದ ಆರ್ಥಿಕ ನೀತಿಗಳು ವಿಶ್ವಬ್ಯಾಂಕ್ ಶರತ್ತುಗಳು, ಸರ್ಕಾರಿ ಸೇವೆಗಳ ಕಡಿತ ದರಗಳ ಏರಿಕೆ, ಖಾಸಗೀಕರಣ ಉದಾರೀಕರಣ ನೀತಿ ಇವುಗಳನ್ನು ಯಾವುದೇ ರೀತಿ ಬದಲಾಯಿಸುವ ಪ್ರಸ್ತಾಪವಿಲ್ಲ.

ಮೊದಲ ಬಜೆಟ್ ನಂತರ ಈ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಬಗ್ಗೆ ಸರ್ಕಾರವಾಗಲಿ, ಮಂತ್ರಿಗಳಾಗಲೀ, ಎರಡು ಪಕ್ಷಗಳಾಗಲೀ ನೆನಪೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಸರ್ಕಾರದ ಈ ಸ್ವರೂಪ ಹಾಗೂ ಕನಿಷ್ಠ ಕಾರ್ಯಕ್ರಮವನ್ನು ಪರಿಶೀಲಿಸಿದ ಸಿಪಿಐ(ಎಂ) ಈ ಸರ್ಕಾರಕ್ಕೆ ಬೆಂಬಲ

ಸರ್ಕಾರದ ಬಗ್ಗೆ ನಿರೀಕ್ಷೆ ಮೂಡಿಸಲು ಕಾರಣವಾಗಿವೆ.

ಈ ಸರ್ಕಾರದ ವಿಷಯದಲ್ಲಿ ಮತ್ತೊಂದು ಪ್ರಮುಖ ವಿಷಯವೆಂದರೆ ಎಸ್.ಎಂ.ಕೃಷ್ಣ ಸರ್ಕಾರದಲ್ಲಿದ್ದಂತೆ ಜಾಗತೀಕರಣ, ಉದಾರೀಕರಣದ ಬಗ್ಗೆ ಬೆಂಗಳೂರನ್ನು ಅಂತರರಾಷ್ಟ್ರೀಯ ಬಂಡವಾಳಿಗರ ಆಕರ್ಷಣ ಕೇಂದ್ರವನ್ನಾಗಿ ಮಾಡುವ ಅಬ್ಬರದ ಮಾತುಗಳು ಪ್ರಚಾರಗಳೂ ಇಲ್ಲ. ಕಾರ್ಯಪಡೆಗಳೆಂಬ ಹೆಸರಿನಲ್ಲಿ ಆಡಳಿತ ಯಂತ್ರವನ್ನು ಬಂಡವಾಳಶಾಹಿಗಳ ನೇರ ಪ್ರಭಾವಕ್ಕೆ, ಹಿಡಿತಕ್ಕೆ ಒಳಪಡಿಸುವ ಜನಪ್ರತಿನಿಧಿಗಳನ್ನು ಮಂತ್ರಿಗಳನ್ನು ಗೌಣಗೊಳಿಸುವ ಪ್ರಯತ್ನವಿಲ್ಲ. ಆಡಳಿತ ಯಂತ್ರ ಹಾಗೂ ಸರ್ಕಾರದ ನೀತಿಗಳ ಮೇಲೆ ತಮ್ಮ ಪ್ರಭಾವ ಬೀರುವ ಈ ಅವಕಾಶಗಳ ತಪ್ಪಿದ್ದಕ್ಕಾಗಿ ಬಂಡವಾಳಶಾಹಿಗಳು ಪ್ರತಿಭಟಿಸ ಬೇಕಾಯಿತು. ನಂತರ ಸರ್ಕಾರ ಅವರ ಒತ್ತಾಯಗಳನ್ನು ಮನ್ನಿಸುವಂತೆ ನಡೆದುಕೊಂಡಿದ್ದರೂ ಹಿಂದಿನಂತೆ ಬಹಿರಂಗವಾದ ನಾಚಿಕೆಗೆಟ್ಟ ಸಾಮೀಪ್ಯ ವಿಲ್ಲ. ಆದರೆ ಅದೇ ಸಮಯದಲ್ಲಿ ದೃಢವಾದ ರಾಜಕೀಯ ನಿರ್ಧಾರಗಳಿಲ್ಲದೇ ಸಮ್ಮಿಶ್ರ ಸರ್ಕಾರ ಎರಡೂ ಪಕ್ಷಗಳ ನಡುವಣ ಕಿತ್ತಾಟದ ಪರಿಣಾಮವಾಗಿ ಅಧಿಕಾರಶಾಹಿಯ ಪಾತ್ರ ಬಲವಾಗುತ್ತಿದೆ.

ಕೋಮುವಾದವನ್ನು ಎದುರಿಸುವುದರ ಬಗ್ಗೆ ದೃಢವಾದ ನಿಶ್ಚಿತವಾದ ನೀತಿಯಿಲ್ಲ. ಪಕ್ಷಗಳ ಮಟ್ಟದಲ್ಲಿಯಂತೂ ಕೋಮುವಾದದ ವಿರುದ್ಧದ ಹೋರಾಟ ಎರಡೂ ಪಕ್ಷಗಳ ಕಾರ್ಯಸೂಚಿಯಲ್ಲಿಯೂ ಇಲ್ಲ.

ಹಳೆಯ ಜಾಡು

ಆದರೆ ಸರ್ಕಾರದ ವೆಚ್ಚವನ್ನು ಕಡಿತಗೊಳಿಸುವ, ಆದಾಯವನ್ನು ಏರಿಸುವ ವಿಶ್ವಬ್ಯಾಂಕ್ ಶರತ್ತುಗಳನ್ನು ಈಡೇರಿಸುವ ತವಕದಲ್ಲಿ ಖಾಸಗೀಕರಣ, ಉದಾರೀಕರಣ ನೀತಿಗಳನ್ನು ಮುಂದುವರಿಸಿದೆ. ರಾಜ್ಯ ಸರ್ಕಾರದ ನೌಕರರ ತೀವ್ರ ಕಡಿತ, ಇಲಾಖೆಗಳ ರದ್ದತಿ, ಮಿಳಿತಗಳು, ವಿದ್ಯುತ್ ಖಾಸಗೀಕರಣ ಪ್ರಕ್ರಿಯೆಯನ್ನು ಮುಂದಿನ ಹಂತಕ್ಕೊಯ್ಯುವ ಕ್ರಮಗಳು, ಬರಗಾಲ ಪರಿಹಾರದ ನಿರ್ಲಕ್ಷ್ಯ? ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಕಲ್ಯಾಣ ವೆಚ್ಚಗಳಲ್ಲಿ ತೀವ್ರ ಕಡಿತ, ಶಿಕ್ಷಣ ಶುಲ್ಕಗಳ ಏರಿಕೆ, ಇತರೆ ದರಗಳ ಏರಿಕೆಗಳು ಮುಂದುವರೆದಿವೆ. ಖಾಸಗೀಕರಣ, ಉದಾರೀಕರಣಗಳ ಬಗ್ಗೆ ಕೇಂದ್ರ ಸರ್ಕಾರ ಹಾಕುತ್ತಿರುವ ಒತ್ತಡಗಳು, ನೀಡುತ್ತಿರುವ ಸೂಚನೆಗಳನ್ನು ಸರ್ಕಾರ ತಪ್ಪದೇ ಅನುಸರಿಸಲು ಪ್ರಯತ್ನಿಸುತ್ತಿದೆ. ಆಹಾರ ಭದ್ರತೆ ಕಾನೂನುಗಳ ಹೆಸರಿನಲ್ಲಿ ಪಡಿತರ ಚೀಟಿಗಳನ್ನು ತೆಗೆದುಹಾಕುವ, ಆಹಾರದ ಅಂಕಿ ಚೀಟಿಗಳನ್ನು ನೀಡುವ ಸೂಚನೆಗಳನ್ನು ನೀಡಿದೆ. ಕೂಲಿಗಾಗಿ ಕಾಳು ಯೋಜನೆಯಲ್ಲಿ ನಡೆಯುತ್ತಿರುವ ದುರುಪಯೋಗ ಭ್ರಷ್ಟಾಚಾರದ ಬಗ್ಗೆ ತೀವ್ರ ನಿರ್ಲಕ್ಷ್ಯ? (ಬೆಂಬಲ ಹೀಗೆ ಹಲವಾರು ಕ್ರಮಗಳನ್ನು ತ್ವರಿತವಾಗಿ ಜಾರಿಗೆ ತರುತ್ತಿದೆ. ಹೀಗೆ

ಕೋಮುವಾದ ವಿಷಯದಲ್ಲಿ ಬಾಬಾಬುಡನ್ ಗಿರಿಯಲ್ಲಿನ ಸಂಘಪರಿವಾರದ ಆಟಾಟೋಪಗಳಿಗೆ ಕಡಿವಾಣ ಹಾಕುವಂತೆ ಕೃಢನೀತಿಯನ್ನು ಅನುಸರಿಸಿದರೂ ಸಂಘಪರಿವಾರ ರಾಜ್ಯದ ವಿವಿಧ ಭಾಗಗಳಲ್ಲಿ ಅದರಲ್ಲಿಯೂ ಕರಾವಳಿ ಪ್ರದೇಶಲ್ಲಿ ಮಾಡುತ್ತಿರುವ ಗೂಂಡಾಗಿರಿಗಳಿಗೆ ಆಡಳಿತ ಯಂತ್ರ ಅವಕಾಶ ನೀಡುತ್ತಿರುವುದರ ಬಗ್ಗೆ ಸಹಕರಿಸುತ್ತಿರುವುದರ ಬಗ್ಗೆ ನಿರ್ಲಕ್ಷ್ಯ. ಕೋಮುವಾದವನ್ನು ಎದುರಿಸುವುದರ ಬಗ್ಗೆ ದೃಢವಾದ ನಿಶ್ಚಿತವಾದ ನೀತಿಯಿಲ್ಲ. ಪಕ್ಷಗಳ ಮಟ್ಟದಲ್ಲಿಯಂತೂ ಕೋಮುವಾದದ ವಿರುದ್ಧದ ಹೋರಾಟ ಎರಡೂ ಪಕ್ಷಗಳ ಕಾರ್ಯಸೂಚಿ ಯಲ್ಲಿಯೂ ಇಲ್ಲ. ಚುನಾವಣಾ ಪ್ರಚಾರದ ಸಂದರ್ಭದಲ್ಲಿಯೂ ಕೋಮು ವಾದವನ್ನು ಗುರಿ ಮಾಡಿ ಪ್ರಚಾರ ನಡೆಸಲಿಲ್ಲ. ಕಾಂಗ್ರೆಸ್ ಜನತಾದಳ ಎರಡೂ ಸೇರಿ ಕೋಮುವಾದವನ್ನು ಎದುರಿಸುವುದು ದೂರದ ಮಾತಾಯಿತು. ತಮ್ಮ ಜನವಿರೋಧಿ ನೀತಿಗಳಿಂದ ಹಾಗೂ ಕೋಮುವಾದದ ವಿರುದ್ಧ ಹೋರಾಟ ಸಾಗಿಸದಿರುವುದರಿಂದ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಸಹಾಯವಾಗುತ್ತದೆ. ಸರ್ಕಾರದ ಅಸ್ಥಿರತೆಯೂ ಅದಕ್ಕೆ ಸಹಾಯ ಮಾಡುತ್ತದೆ ಎಂಬ ಪ್ರಜ್ಞೆಯಿಲ್ಲ. ಜನತಾದಳದಿಂದಂತೂ ಆಗಾಗ್ಗೆ ನಾವು ಬಿಜೆಪಿಯ ಬೆಂಬಲ ಪಡೆಯಲೂ ಸಿದ್ಧ ಎನ್ನುವ ಮಾತುಗಳೂ ಬರುತ್ತಿವೆ. ಹೀಗೆ ಕೋಮುವಾದ ಅಪಾಯದಿಂದ ರಾಜ್ಯವನ್ನು ಪಾರು ಮಾಡಲು ಸರ್ಕಾರವನ್ನು ಹಾಗೂ ಆಡಳಿತ ನಡೆಸುತ್ತಿರುವ ಎರಡೂ ಪಕ್ಷಗಳನ್ನೂ ನೆಚ್ಚಲಾಗದು.

ನಕ್ಸಲ್‌ವಾದಿಗಳನ್ನು ಎದುರಿಸುವಲ್ಲಿಯೂ ಸ್ಪಷ್ಟತೆ, ದೃಢತೆ ಹಾಗೂ ತಂತ್ರಗಾರಿಕೆ ಇಲ್ಲದೆಯೇ ಸಮಸ್ಯೆ ತನ್ನ ಬಲಕ್ಕಿಂತ ಹೆಚ್ಚಾಗಿ ರಾಜ್ಯದಲ್ಲಿ ಬಿಂಬಿತವಾಗುವಂತಾಯಿತು. ಈಗ ವಿಶೇಷ ಕಾರ್ಯಪಡೆಗಳು ಕಾರ್ಯಾಚರಣೆಗಿಳಿದಿವೆ.

ಪರ್ಯಾಯ ನೀತಿಗಳಿಗಾಗಿ ಆಂದೋಲನ

ಇಂತಹ ಸಂದರ್ಭದಲ್ಲಿ ಸರ್ಕಾರದಲ್ಲಿ ಭಾಗೀದಾರರಾದ ಪಕ್ಷಗಳು ಒಪ್ಪಿಕೊಂಡ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿನ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವಂತೆ ಒತ್ತಾಯಿಸಬೇಕು. ಜನವಿರೋಧಿಯಾದ ಆರ್ಥಿಕ ನೀತಿಗಳ ವಿರುದ್ಧ ಹೋರಾಟಗಳನ್ನು ಸಾಗಿಸಲು ಸಿಪಿಐ(ಎಂ) ನಿರಂತರವಾಗಿ ಶ್ರಮಿಸುತ್ತದೆ. ಪರ್ಯಾಯ ನೀತಿಗಳನ್ನು ಮುಂದಿಡಬಯಸುತ್ತದೆ. ಕೋಮುವಾದ ಹಾಗೂ ಜಾಗತೀಕರಣ ನೀತಿಗಳನ್ನು ಎದುರಿಸುವ ಎಡ, ಪ್ರಗತಿಪರ ಶಕ್ತಿಗಳ ಐಕ್ಯತೆಯನ್ನು ರೂಪಿಸಲು ಬಲಪಡಿಸಲು ಶ್ರಮಿಸುತ್ತದೆ. ○

ಮಂಡ್ಯದಲ್ಲಿ ಸಾಕ್ಷರತಾ ಪ್ರೇರಕರ ಪ್ರತಿಭಟನೆ

ಬಾಕಿ ವೇತನ,ವಾರದ ರಜೆ, ಬೇಸಿಗೆರಜೆ ಮತ್ತು ವಿಮಾ ಸೌಲಭ್ಯ ಸೇರಿದಂತೆ ತಮ್ಮ ಇನ್ನಿತರ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಆಶ್ರಯದಲ್ಲಿ ರಾಜ್ಯ ಸಾಕ್ಷರತಾ ಪ್ರೇರಕ ಸಂಘದ ನೂರಾರು ಸಂಖ್ಯೆಯಪ್ರೇರಕ ಹಾಗೂ ಸಹ ಪ್ರೇರಕರು ಮೇ 22 ರಂದು ಮಂಡ್ಯದಲ್ಲಿ ಪ್ರತಿಭಟನಾ ಮೆರವಣಿಗೆ ಹಾಗೂ ಧರಣಿ ನಡೆಸಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್ ನಿಂದ ಪ್ರತಿಭಟನಾಕಾರರು ಮೆರವಣಿಗೆ ಹೊರಟು ಸಂಜಯ ವೃತ್ತದ ಮೂಲಕ ಜಿಲ್ಲಾಧಿಕಾರಿ ಕಛೇರಿತಲುಪಿ, ಅಲ್ಲಿ ಸುಮಾರು ಎರಡು ಗಂಟೆಗಳ ಕಾಲ ಧರಣಿ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ಜಿಲ್ಲಾಧ್ಯಕ್ಷ ಎನ್.ಎಲ್. ಭರತರಾಜ್, ಜಿಲ್ಲೆಯಲ್ಲಿ ಮುಂದುವರಿಕೆ ಶಿಕ್ಷಣ ಯೋಜನೆಯಡಿ ಆರಂಭಗೊಂಡಿರುವ 54 ನೋಡಲ್ ಕೇಂದ್ರಗಳು ಹಾಗೂ 580 ಮುಂದುರಿಕೆ ಶಿಕ್ಷಣ ಕೇಂದ್ರಗಳಲ್ಲಿ 1276 ಪ್ರೇರಕ ಹಾಗೂ ಸಹ ಪ್ರರೇಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರ ಇವರು ನಡೆಸುತ್ತಿರುವ ಕೇಂದ್ರಗಳಿಗೆ ಸಮರ್ಪಕವಾದ ಪತ್ರ, ಗ್ರಂಥಭಂಡಾರ, ಪಿಠೋಪಕರಣ ಮತ್ತು ಆಟೋಪಕರಣಗಳನ್ನು ಒದಗಿಸಿಲ್ಲ ಎಂದರು. ಸುಮಾರು 17 ತಿಂಗಳುಗಳಿಂದ ವೇತನ ನೀಡದೇ ಪ್ರೇರಕ-ಸಹ ಪ್ರೇರಕರು ಅತಂತ್ರ ಸ್ಥಿತಿಯಲ್ಲಿದ್ದಾರೆ ಎಂದ ಅವರು, ಈ ಕೂಡಲೇ ಸರ್ಕಾರ ವೇತನ ನೀಡಬೇಕೆಂದು ಒತ್ತಾಯಿಸಿದರು.

ಪ್ರೇರಕ-ಸಹಪ್ರೇರಕರು ಇಷ್ಟೆಲ್ಲಾ ಒತ್ತಡಗಳ ನಡುವೆ ಕೆಲಸ ನಿರ್ವಹಿಸುತ್ತಿದ್ದರೂ ಅವರಿಗೆ ವಾರದ ರಜೆಯಾಗಲೀ ಹಾಗೂ ಹೆಣ್ಣು ಮಕ್ಕಳಿಗೆ ಹೆರಿಗೆ ರಜೆಯನ್ನೂ ಸಹ ಸರ್ಕಾರ ನೀಡುತ್ತಿಲ್ಲ. ಈ ಯೋಜನೆಯನ್ನು ಸರಿಯಾದ ರೀತಿಲ್ಲಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಹಾಗೂ ಅಧಿಕಾರಶಾಹಿ ವಿಫಲ ವಾಗಿದೆ ಎಂದು ಆರೋಪಿಸಿದರು.



ಈ ಹಿಂದೆ 250 ರೂ. ಪತ್ರಿಕೆ ಹಣ ನೀಡುತ್ತಿದ್ದು ಅದು ಇತ್ತೀಚೆಗೆ 150 ರೂ.ಗಳಿಗೆ ಇಳಿಕೆಯಾಗಿದೆ. ಈಗ ಅದನ್ನೂ ಸಹ ಇವರು ನೀಡುತ್ತಿಲ್ಲ. ಈ ಕೂಡಲೇ ಬಾಕಿ ಇರುವ ಪೇಪರ್ ಬಿಲ್ ಹಾಗೂ ಪ್ರಯಾಣ ವೆಚ್ಚವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಪ್ರೇರಕರು ರಚಿಸುವ ನವಸಾಕ್ಷರರ ಸ್ವಸಹಾ ಸಂಘಗಳಿಗೂ ಸ್ತ್ರೀ ಶಕ್ತಿ ಸಂಘಗಳಿಗೆ ನೀಡುವಂತೆ ಸುತ್ತುನಿಧಿ ಮಾನಸಿಕ ಭತ್ಯೆ, ಗೌರವಧನ, ವಿಮಾ ಸೌಲಭ್ಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಯೋಜನೆಯ ಅವಧಿ 5 ವರ್ಷ ಪೂರ್ಣಗೊಳ್ಳುವ ಮುನ್ನ ಬಾಕಿ ಇರುವ ವೇತನ ನೀಡದ ಹೊರತು ಯಾವುದೇ ಕಾರಣಕ್ಕೂ ಕೇಂದ್ರಗಳನ್ನು ಗ್ರಾಮ ಪಂಚಾಯತಿಗೆ ವಹಿಸಬಾರದು ಎಂದು ಎಚ್ಚರಿಸಿದ ಅವರು, ಈ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಶೀಘ್ರವೇ ಈಡೇರಿಸದಿದ್ದರೆ ಬರುವ ಜುಲೈ 4 ರಂದು ಬೆಂಗಳೂರಿನ ಶಿಕ್ಷಣ ನಿರ್ದೇಶಕರ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಎಸ್ಎಫ್ಐ ಕಾರ್ಯದರ್ಶಿ ಟಿ.ಯಶವಂತ್ ಮಾತನಾಡಿ ಆಳುವ ಸರ್ಕಾರಗಳು ದೇಶದ ಸಮಸ್ಯೆಗಳಿಗೆ ಶಿಕ್ಷಣದ ಕೊರತೆಯೇ ಕಾರಣ ಎಂದು ಬಹಳ ಹಿಂದಿನಿಂದಲೂ ಹೇಳಿಕೊಂಡು ಬರುತ್ತಿವೆ. ಆದರೆ ಸಾಕ್ಷರತಾ ಪ್ರೇರಕರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿವೆ ಎಂದು ಟೀಕಿಸಿದರು. ಸಾಕ್ಷರತಾ ಆಂದೋಲನ ವನ್ನು ಬಲಪಡಿಸಲು ಒತ್ತಾಯಿಸಿದರು.

ಧರಣಿ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಸಿ.ಎನ್.ಸೀತಾರಂ ಮನವಿ ಪತ್ರ ಸ್ವೀಕರಿಸಿ ಮಾತನಾಡಿ, ಈ ಎಲ್ಲಾ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಜಿಲ್ಲೆಯಲ್ಲಿ ಕುಂಠಿತ ಗೊಂಡಿರುವ ಸಾಕ್ಷರತಾ ಆಂದೋಲನ ವನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ನಂತರ ಪ್ರತಿಭಟನಾಕಾರರು ಜಿಲ್ಲಾ ಸಾಕ್ಷರ ಸಮಿತಿ ಕಚೇರಿಗೆ ತೆರಳಿ ಅಲ್ಲಿಯೂ ಮನವಿ ಪತ್ರ ಸಲ್ಲಿಸಿದರು.

ಡಿವೈಎಫಐ ಮುಖಂಡರಾದ ದೊರೆಸ್ವಾಮಿ, ಹೊಂಬ್ಯಯ, ವೈ.ಎಂ. ಪ್ರೇಮಾ, ಎಸ್.ರಮೇಶ್, ಎಂ.ಎಚ್.ಗೀತಾ, ನಿರುಪಮ, ಸರಸ್ವತಿ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಎಪಿಎಂಸಿ ಮಾದರಿಯ ಕಾನೂನು 2003 ವಿರೋಧಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ

"ಎಪಿಎಂಸಿ ಮಾದರಿಯ ಕಾನೂನು 2003"ನ್ನು ವಿರೋಧಿಸಿ ವಿಜಾಪುರದಲ್ಲಿ ಎಪಿಎಂಸಿಯು ಸಂಪೂರ್ಣವಾಗಿ ತನ್ನ ವ್ಯಾಪಾರ ವಹಿವಾಟ ಸ್ಥಗಿತಗೊಳಿಸಿ ಬಂದ್ ಆಚರಿಸಿತು. ಲಾರಿಗಳು ರಸ್ತೆಗಳ ಮೇಲೆ ಸಾಲುಗಟ್ಟಿ ನಿಂತಿದ್ದವು. ಸದಾ ಗಿಜಿ ಗಿಜಿ ಎನ್ನುತ್ತಿದ್ದ ಎಪಿಎಂಸಿ ಮಾರುಕಟ್ಟೆ ಬಿಕೋ ಎನ್ನುತ್ತಿತ್ತು. ಕಾಯಿಪಲ್ಯ ತರಕಾರಿ ಮಾರುವ ಭಾಗವಾನರು ಈ ಬಂದ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ನೆಹರು ಮಾರುಕಟ್ಟೆಯ ಕಾಯಿಪಲ್ಲೆ ಬಜಾರ, ನಿಂಬೆಹಣ್ಣು ಚಿಕ್ಕು ಬಾಳೆ ಮುಂತಾದ ಹಣ್ಣಿನ ಮಾರುಕಟ್ಟೆಗಳು ಸಂಪೂರ್ಣ ಬಂದ್ ಆಚರಿಸಿದ್ದವು.

ಇಂಡಿ ರೋಡ ಎಪಿಎಂಸಿ ಮಾರುಕಟ್ಟೆಯಿಂದ ಬೃಹತ್ ಮೆರವಣಿಗೆ ಹೊರಡಿಸಲಾಯಿತು. ಮೆರವಣಿಗೆಯ ಮುಂದೆ ಹಲಿಗೆಗಳ ಬಡಿತ ತಾರಕಕ್ಕೆ ಏರಿದ್ದರೆ. ಗರಿಗರಿಯಾದ ನೀಟಾದ ನೀಲಿ ಹಾಕಿದ ಖಾದಿ, ಬಿಳಿ ಬಟ್ಟೆಗಳಾದ ದೋತ್ರ ನೆಹರು ಶರ್ಟ್ ತೊಟ್ಟು ಬಿರುಸು ಹೆಜ್ಜೆ ಹಾಕುತ್ತ ಸಾಗಿದ್ದ ಎಪಿಎಂಸಿ ವರ್ತಕರ ಸಮೂಹ, ಅವರ ಹಿಂದೆ ಎಪಿಎಂಸಿ ಗುಮಾಸ್ತರ ಸಂಘ, ಅವರ ಹಿಂದೆ ತೂಕದವರ ಸಂಘ, ಕಾಯಿಪಲ್ಲೆ ಮಾರುವಭಾಗವಾನರ ಸಂಘ, ತಳಕೇರುವವರ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ (ಪುಟ್ಟಣ್ಣಯ್ಯ), ರಾಜ್ಯ ರೈತ ಸಂಘ (ನಂಜುಂಡ ಸ್ವಾಮಿ), ಎಪಿಎಂಸಿ ಹಮಾಲರ ಸಂಘ, ಕೋರಿ ಚೌಕ ಲಾರಿ ಹಮಾಲ ಸಂಘ ಜನವಾದಿ ಮಹಿಳಾ ಸಂಘ, ಮುಂತಾದ ಸಮೂಹಗಳಿಂದ ಕೂಡಿದ್ದ ಮೆರವಣಿಗೆಯ ಹಿಂದೆ ಪ್ರಾಸಬದ್ಧವಾಗಿ ಘೋಷಣೆ ಕೂಗುತ್ತಾ ಸಾಗಿದ್ದ ಡಿವೈಎಫ್ಐನ ಯುವಕರು ಹಾಗೂ ಮಹಿಳೆಯರ ಗುಂಪು ಸಾರ್ವಜನಿಕರನ್ನು ಆಕರ್ಷಿಸಿತ್ತು. ನಗರದ ಕೂರಿಚೌಕ, ಸಿದ್ದೇಶ್ವರ ಗುಡಿ, ಸರಾಫ ಬಜಾರ, ಗಾಂಧಿ ಚೌಕ, ಬಸವೇಶ್ವರ ವೃತ್ತ, ಡಾ|| ಅಂಬೇಡ್ಕರ ವೃತ್ತಕ್ಕೆ ಹಾಯ್ದು ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಅರ್ಪಿಸಲಾಯಿತು. ನಂತರ ಮೆರವಣಿಗೆಕಾರರನ್ನು ಉದ್ದೇಶಿಸಿ, ಪ್ರಾಂತ ರೈತ ಸಂಘದ ಭೀಮಶಿ ಕಲಾದಗಿ, ರಾ.ರೈ.ಸಂಘ (ನಂಜುಂಡ ಸ್ವಾಮಿ) ಸಂಗಮೇಶ ಏಳಗಿ, ಡಾ|| ಕಂಠೀರವ ಕುಲ್ಲೊಳ್ಳಿ, ರಾ.ರೈ.ಸಂಘ (ಪುಟ್ಟಣ್ಣಯ್ಯ) ಬಿ.ಎಸ್.ಜೋಗೂರ, ವ್ಯಾಪಾರಸ್ಥರ ಸಂಘದ ಉಪಾಧ್ಯಕ್ಷ ಎಸ್.ಎಂ. ದಿಗ್ಗಾವಿ ಮುಂತಾದವರು ಮಾತನಾಡಿದರು.

ಎಪಿಎಂಸಿ ಹಮಾಲರ ಸಂಘದ ರಜ್ಜಾಕ ಶಾಲಗಾರ, ತೂಕದವರ ಸಂಘದ ಪಾಟೀಲ, ಪ್ರಾಂತ ರೈತ ಸಂಘದ ಅಣ್ಣಾರಾಯ ಈಳಗೇರ ರಾಚಪ್ಪ ಹಡಪದ ರಾಮಣ್ಣ ಶಿರಾಣೋಳ ಗುಮಾಸ್ತರ ಸಂಘದ ರುದ್ರಗೌಡ ಬಿರಾದಾರ, ವ್ಯಾಪಾರಸ್ಥರ ಸಂಘದ ಎಸ್.ಎಚ್.ದೇಸಾಯಿ ಸಿದ್ದಪ್ಪಣ್ಣ ಸಜ್ಜನ, ಎನ್.ಡಿ. ನ್ಯಾಯಗೊಂಡ, ಷಣ್ಮುಖಪ್ಪ ಗುದ್ದಿ, ಆಯಿಲ್ ಮಿಲ್ ಸಂಘದ ಅಧ್ಯಕ್ಷ ಸುಭಾಷ ಇಂಗ್ಳೇಶ್ವರ, ಕಿರಾಣ ವ್ಯಾಪಾರಸ್ಥರ ಸಂಘದ ಗಂಗಾಧರ ಉಕಮನಾಳ, ಜಿ.ಬಿ.ಕೋರಿ, ರಮೇಶ ಜೈನ, ಡಿವೈಎಫ್ಐನ ಬಸಲಿಂಗ ಕಪಾಲಿ, ಲಿಂಗರಾಜ ಬಿದರಕುಂದಿ, ರಾಜು ಕಳಗೊಂಡ, ಜನವಾದಿ ಮಹಿಳಾ ಸಂಘದ ಲಕ್ಷ್ಮಿ ಮೈಲಾರಿ, ಸುರೇಖಾ ರಜಪೂತ, ಜಯಾ ಪವಾರ, ಬಾಗೇವಾಡಿಯ ರಾಜೆಸಾಬ, ಕೋಲಾರ ಮುಂತಾದವರು ಭಾಗವಹಿಸಿದ್ದರು.

ಬಿ.ಎಸ್.ಎನ್.ಎಲ್. ತತ್ಕಾಲಿಕ ಕೆಲಸಗಾರರು ಸಂಘಟನೆಯತ್ತ

ಭಾರತ ಸಂಚಾರ ನಿಗಮ (ಬಿಎಸ್ಎನ್ಎಲ್) ಸಂಸ್ಥೆಯ ಖಾಯಂ ಅಲ್ಲದ ನೌಕರರ ಉಡುಪಿ ಜಿಲ್ಲಾಮಟ್ಟದ ಸಮಾವೇಶವು ಮೇ.29ರಂದು ಉಡುಪಿ ಕೃಷ್ಣಕೃಪಾ ಸಭಾಂಗಣದಲ್ಲಿ ನಡೆಯಿತು. ಕರ್ನಾಟಕ ರಾಜ್ಯ ಬಿ.ಎಸ್.ಎನ್.ಎಲ್ ನಾನ್ ಪರ್ಮನೆಂಟ್ ನೌಕರರ ಯೂನಿಯನ್ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂರವರು ಈ ಸಮಾವೇಶವನ್ನು ಉದ್ಘಾಟಿಸಿ ಭಾರತ ಸಂಚಾರ ನಿಗಮವು ದೂರಸಂಪರ್ಕ ಕ್ಷೇತ್ರದಲ್ಲಿ ದೇದಲ್ಲಿಯೇ ಪ್ರತಿಷ್ಠಿತ ಮತ್ತು ಅತಿ ದೊಡ್ಡ ಸಂಸ್ಥೆಯಾಗಿದೆ. ಕೇಂದ್ರ ಸರಕಾರದ ನೇರ ಹತೋಟಿಯಲ್ಲಿದ್ದು ಈ ಸಂಸ್ಥೆ ಸಂವಿಧಾನ ಹಾಗೂ ಕಾನೂನುಬದ್ಧ ಸವಲತ್ತುಗಳನ್ನು ತನ್ನ ನೌಕರರಿಗೆ ಜ್ಯಾರಿ ಮಾಡಬೇಕಾದ ಹೊಣೆಗಾರಿಕೆ ಇದ್ದರೂ, ಈ ನಿಗಮವು ಬೇನಾಮಿ ಮತ್ತು ತಾತ್ಕಾಲಿಕ ಕೆಲಸಗಾರರ ದೊಡ್ಡ ಪಡೆಯನ್ನೇ ಹೊಂದಿದೆ. ಈ ಸಂಸ್ಥೆಯಲ್ಲಿ ಸುಮಾರು 30ರಿಂದ 40 ಶೇಕಡಾ ಕೆಲಸಗಾರರು ಯಾವುದೇ ದಾಖಲೆಗಳಿಲ್ಲದೆ ದುಡಿಯುತ್ತಿದ್ದಾರೆ. ನಿಗಮದಲ್ಲಿ ಭದ್ರತಾ ಸಿಬ್ಬಂದಿಯವರು ಗುತ್ತಿಗೆದಾರರ ಮೂಲಕ ನೇಮಕಾತಿ ಹೊಂದುತ್ತಿದ್ದು, ಇತರ ವಿಭಾಗಗಳಾದ ಕಛೇರಿ ಕ್ಲರ್ಕ್, ಸ್ವಾಗತಕಾರರು, ಕಸ ಗುಡಿಸುವವರು, ಕೇಬಲ್ ಹಾಕುವವರು, ದುರಸ್ಥಿ ಮಾಡುವವರು ಪೂರ್ತಿಯಾಗಿ ಬೇನಾಮಿ ಹೆಸರಿನಲ್ಲಿ ದುಡಿಯುತ್ತಿದ್ದಾರೆ. ಆದರೆ ನಿಗಮದ ದಾಖಲೆ ಪ್ರಕಾರ ಈ ಸಂಸ್ಥೆಯಲ್ಲಿ ತಾತ್ಕಾಲಿಕ ಕೆಲಸಗಾರರೇ ಇಲ್ಲ. ಈ ಕ್ರಮದಲ್ಲಿ ಅಗಾಧ ಪ್ರಮಾಣದಲ್ಲಿ ಕೆಲಸಗಾರರಿಗೆ ವಂಚನೆ ಮಾಡುತ್ತಿದೆ. ಕಾರ್ಮಿಕರ ಈ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ರಾಜ್ಯಮಟ್ಟದಲ್ಲಿ ಸಿ.ಐ.ಟಿ.ಯು ಸಂಘಟನೆ ಈ ನೌಕರರನ್ನು ಸಂಘಟಿಸುತ್ತಿದೆ. ಎಲ್ಲ ತಾತ್ಕಾಲಿಕ ಕೆಲಸಗಾರರು ಸದಸ್ಯರಾಗಿ ಸಕ್ರಿಯವಾಗಿ ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಸಮಾವೇಶದಲ್ಲಿ ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿ ಅಧ್ಯಕ್ಷ ಬಿ.ಮಾಧವರವರು ಮಾತನಾಡಿ ಸಿ.ಐ.ಟಿ.ಯು. ದೇಶದಲ್ಲಿ ಅಸಂಘಟಿತ ಕಾರ್ಮಿಕ ಸಂಘಟನೆ ಮತ್ತು ಸವಲತ್ತುಗಳಿಗಾಗಿ ನಿರಂತರ ಹೋರಾಟ ನಡೆಸುತ್ತಿದೆ. ಜಾಗತೀಕರಣದ ಪ್ರಕ್ರಿಯೆಯ ಪರಿಣಾಮವಾಗಿ ಬಿ.ಎಸ್.ಎನ್.ಎಲ್.ನಲ್ಲಿ ಕೆಲಸಗಾರರ ಖಾಯಂ ನೇಮಕಾತಿಯನ್ನು ತಡೆಹಿಡಿದು, ಕೆಲಸದ ಹೊರೆಯಲ್ಲಿ ಅರ್ಧದಷ್ಟನ್ನು ತಾತ್ಕಾಲಿಕ ಮತ್ತು ಬೇನಾಮಿ ಕೆಲಸಗಾರರ ಮೂಲಕ ನಡೆಸಲಾಗುತ್ತಿದೆ. ಕಾರ್ಮಿಕರಿಗೆ ಭವಿಷ್ಯದಲ್ಲಿ ಯಾವುದೇ ಸವಲತ್ತುಗಳನ್ನು ನೀಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಈ ರೀತಿಯ ಕಾನೂನುವಿರೋಧಿ ಮತ್ತು ವಂಚನೆಯ ಕ್ರಮ ಕೈಗೊಳ್ಳಲಾಗುತ್ತಿದೆ. ಸಂಘಟನೆ ಆದಕೂಡಲೇ ಸಮಸ್ಯೆಗಳು ಬಗೆಹರಿಯುವುದಿಲ್ಲ. ಸಂಘದ ಮೂಲಕ ಕೆಲಸಗಾರರ ಶಕ್ತಿ ಕ್ರೋಢೀಕರಣಗೊಂಡು ನಿರಂತರ ಬಲಿಷ್ಠ ಹೋರಾಟ ನಡೆದರೆ ಮಾತ್ರ ಕಾನೂನುಬದ್ಧ ಸವಲತ್ತು ಪಡೆಯಲು ಸಾಧ್ಯ. ಕಾರ್ಮಿಕರು ದೃಢ, ಐಕ್ಯತೆಯಿಂದ ಮುಂದೆ ಸಾಗಲು ಕರೆ ನೀಡಿದರು.

ಸಮಾವೇಶದಲ್ಲಿ ಭಾಗವಹಿಸಿದ್ದ ಬಿ.ಎಸ್.ಎನ್.ಎಲ್ ನೌಕರರ ಸಂಘದ ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ ಕೆ.ರಾಮನ್‌ರವರು ಮಾತನಾಡಿ, ಈ ಕಾರ್ಮಿಕರ ಶೋಷಣೆ ಪ್ರಮಾಣ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿದೆ. ಕಾರ್ಮಿಕರ ಚಳುವಳಿ ಪ್ರಬಲವಾಗಿರುವ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಗುರುತುಚೀಟಿ, ಕೆಲಸದ ಭದ್ರತೆ ಜ್ಯಾರಿಯಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸವಲತ್ತುಗಳನ್ನು ಪಡೆಯಲು ಈ ನೌಕರರ ಸಂಘಟನೆ ಬಲಯುತವಾಗಿ ಬೆಳೆಯಲಿ. ಇದಕ್ಕೆ ಬೇಕಾದ ಎಲ್ಲಾ ರೀತಿಯ ಸಹಕಾರ, ಬೆಂಬಲ ನಮ್ಮ ಸಂಘವು ನೀಡುತ್ತದೆ ಎಂದು ಘೋಷಿಸಿದರು.

ಸಮಾವೇಶಕ್ಕೆ ಸಿ.ಐ.ಟಿ.ಯು ಉಡುಪಿ ಜಿಲ್ಲಾ ಅಧ್ಯಕ್ಷ ಕೆ.ಶಂಕರ ಸಂದೇಶ ನೀಡಿ, ಸಂಘಟನೆ ಬಲಪಡಿಸಲು ಕರೆ ನೀಡಿದರು.

ಈ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಬಿ.ಎಸ್.ಎನ್.ಎಲ್. ನಾನ್ ಪರ್ಮನೆಂಟ್ ಕೆಲಸಗಾರರ ಸಂಘದ ಉಡುಪಿ ಜಿಲ್ಲಾ ಘಟಕವನ್ನು ರಚನೆ ಮಾಡಲಾಯಿತು. ವಿಶ್ವನಾಥ ರೈ(ಅಧ್ಯಕ್ಷ), ಪಿ.ಅಪ್ಪಾಜಿ ಮತ್ತು ಸಂತೋಷ(ಉಪಾಧ್ಯಕ್ಷರು), ಗಣೇಶ ಶೆಟ್ಟಿಗಾರ (ಕಾರ್ಯದರ್ಶಿ), ಸಂತೋಷ ಪೂಜಾರಿ ಮತ್ತು ಮೋಹನ (ಸಹಕಾರ್ಯದರ್ಶಿಗಳು), ರವಿರಾಜು ಎಸ್.ಕುಮಾರ(ಕೋಶಾಧಿಕಾರಿ) ಇವರನ್ನು ಆಐಕೆ ಮಾಡಲಾಯಿತು.

ಈ ಸಮಾವೇಶದಲ್ಲಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆದು, ಎಲ್ಲಾ ಸಮಸ್ಯೆಗಳ ಬಗ್ಗೆ 17.6.2005 ರಂದು ಸಾಮೂಹಿಕ ಮನವಿಯನ್ನು ಬಿ.ಎಸ್.ಎನ್.ಎಲ್.ನ ಉಡುಪಿ ಪ್ರಾದೇಶಿಕ ಜನರಲ್ ಮ್ಯಾನೇಜರರಿಗೆ ಸಲ್ಲಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಮಾವೇಶದ ಅಧ್ಯಕ್ಷತೆಯನ್ನು ಪಿ.ಅಪ್ಪಾಜಿ ಯವರು ವಹಿಸಿ ಈ ಸಂಘದ ಹೋರಾಟ, ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕರೆ ನೀಡಿದರು. ಗಣೇಶ ಶೆಟ್ಟಿಗಾರರು ಸ್ವಾಗತಿಸಿದರು. ಪಿ.ವಿಶ್ವನಾಥ ರೈಯವರು ಧನ್ಯವಾದ ಸಲ್ಲಿಸಿದರು.

ಸಿಪಿಐ(ಎಂ) ಮತ್ತು ಎಡಪಕ್ಷಗಳ ತೀವ್ರವಾದ ವಿರೋಧವನ್ನು ಲೆಕ್ಕಿಸದೆ ಕೇಂದ್ರ ಯುಪಿಎ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಏರಿಸಿದೆ. ಅಂತರ ರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಏರಿಕೆ ಆಗಿರುವುದರಿಂದ ಈ ಏರಿಕೆ ಅನಿವಾರ್ಯ ಎಂದು ಸರ್ಕಾರ ವಾದಿಸುತ್ತಿದೆ. ಬೆಲೆ ಏರಿಕೆಗೆ ಬದಲಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸೂಚಿಸಿದ ಬದಲಿ ಕ್ರಮಗಳನ್ನು ತಿರಸ್ಕರಿಸಿರುವ ಕೇಂದ್ರ ಯುಪಿಎ ಸರ್ಕಾರವು ಈ ಭಾರಿ ಪೆಟ್ರೋಲ್-ಡೀಸೆಲ್ ದರ ಏರಿಕೆಯಿಂದ ಜನಸಾಮಾನ್ಯರ ಮೇಲೆ ದೊಡ್ಡ ಗದಾ ಪ್ರಹಾರವನ್ನೇ ನಡೆಸಿದೆ. ಈ ಏರಿಕೆ ಅನಿವಾರ್ಯವೆ?

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಅನಿವಾರ್ಯವೇ?

ಇಲ್ಲ. ಖಂಡಿತಾ ಇಲ್ಲ. ಪೆಟ್ರೋಲ್ ಡೀಸೆಲ್ ಬೆಲೆ ಏರಿಸುವುದು ಎಂದರೆ ಜನಸಾಮಾನ್ಯರಿಗೆ ಹೊರೆ ಮಾತ್ರವಲ್ಲ, ಎಲ್ಲಾ ವಸ್ತುಗಳ ಸಾಗಾಣಿಕೆ ವೆಚ್ಚವನ್ನು ಹೆಚ್ಚಿಸುವುದು ಎಂದರ್ಥ. ಇದರಿಂದಾಗಿ ಎಲ್ಲ ಅಗತ್ಯ ವಸ್ತುಗಳ ಬೆಲೆಯೂ ಗಗನಕ್ಕೇರಿ ಹಣದುಬ್ಬರ ಅಧಿಕವಾಗುತ್ತದೆ. ಆದರೆ ಸಂಬಳ - ವೇತನ - ಕೂಲಿ - ಆದಾಯ ಇದಕ್ಕೆ ತಕ್ಕಂತೆ ಏರದೇ ಕಾರ್ಮಿಕ - ನೌಕರರು - ರೈತರು - ಕೂಲಿಕಾರರು ತೊಂದರೆಗೆ ಒಳಗಾಗುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆ ಏರಿದರೂ ಸರ್ಕಾರ ಬೆಲೆ ಏರಿಕೆಯನ್ನು ತಡೆಗಟ್ಟಲು ಅವಕಾಶವಿದೆ.

ಪೆಟ್ರೋಲ್‌ನ ವಾಸ್ತವಿಕ ಬೆಲೆ ಒಂದು ಲೀಟರ್‌ಗೆ 19.00 ರೂ. ಮಾತ್ರ. ಡೀಸೆಲ್‌ನ ವಾಸ್ತವಿಕ ಬೆಲೆ ಲೀಟರ್‌ಗೆ 18.53 ರೂ. ಮಾತ್ರ. ಉಳಿದದ್ದೆಲ್ಲಾ ತೆರಿಗೆ.

ಸಿಪಿಐ(ಎಂ) ಎಡಪಕ್ಷಗಳು ಸೂಚಿಸಿದ ಬದಲು ನೀತಿ ಏನು ಹೇಳುತ್ತದೆ?

ಖಾಸಗಿ ಕಂಪನಿಗಳನ್ನು ಕೊಬ್ಬಿಸುವ ತೆರಿಗೆ ನೀತಿ ಬದಲಿಸಿ

ಈ ಹಿಂದೆ ಹಣಕಾಸು ಮಂತ್ರಿ ಚಿದಂಬರಂರವರು ಜನಸಾಮಾನ್ಯರಿಗೆ ಹೊರೆಯಾಗದಂತಹ ರೀತಿಯಲ್ಲಿ ತೆರಿಗೆ ನೀತಿಯಲ್ಲಿ ಬದಲಾವಣೆ ಮಾಡಿ 'ಟ್ಯಾಕ್ಸ್ ನ್ಯೂಟ್ರಲ್' ನೀತಿ ಅನುಸರಿಸಲಾಗುವುದು ಎಂಬ ಭರವಸೆ ನೀಡಿದ್ದರು.

ಆದರೆ ತಾವೇ ನೀಡಿದ ಭರವಸೆಗೆ ವಿರುದ್ಧವಾಗಿ ಬಜೆಟ್‌ನಲ್ಲಿ ಮತ್ತೆ ಪ್ರತಿ ಲೀಟರ್ ಪೆಟ್ರೋಲ್-ಡೀಸೆಲ್‌ಗೆ 50 ಪೈಸೆಯ 'ಹೆದ್ದಾರಿ ಸೆಸ್' ವಿಧಿಸಿದರು ಮಾತ್ರವಲ್ಲ, ಸರ್ಕಾರದ ತೆರಿಗೆ



ನೀತಿಯನ್ನು ತೈಲಕ್ಷೇತ್ರದ ಖಾಸಗಿ ಕಂಪನಿಗಳ ಲಾಭದ ಲೂಟಿಗೆ ಪೂರಕವಾಗಿ ತಿರುಚಿದರು. ಕಚ್ಚಾ ತೈಲವನ್ನು ಆಮದು ಮಾಡಿಕೊಂಡು ಸಂಸ್ಕರಿಸುವ ರಿಲೈಯನ್ಸ್‌ನಂತಹ ಖಾಸಗಿ ಕಂಪನಿಗಳ ಲಾಭದ ಕೊಳ್ಳೆಗೆ ಪೂರಕವಾಗಿ ಸರ್ಕಾರ ಆಮದು ಸುಂಕವನ್ನು ಕಡಿತಗೊಳಿಸಿತು.

ಆದರೆ ಸಾರ್ವಜನಿಕರ - ಸಮಾಜದ ಹಿತಾಸಕ್ತಿಯನ್ನು ಗಮನದಲ್ಲಿಟ್ಟಕೊಂಡು ತೈಲ ವಿತರಣೆಯ ಹೊಣೆ ನಿರ್ವಹಿಸುತ್ತಿರುವ ಸಾರ್ವಜನಿಕ ತೈಲ ಸಂಸ್ಥೆಗಳ ಮೇಲೆ ವಿಪರೀತ ತೆರಿಗೆಯನ್ನು ಹೇರಲಾಯಿತು.

ಖಾಸಗಿ ಕಂಪನಿಗಳ ಲಾಭದ ಕೊಳ್ಳೆಗೆ ತಡೆಹಾಕಿ

ಭಾರತ ಆಮದು ಮಾಡಿಕೊಳ್ಳುವ ಒಟ್ಟು ಪೆಟ್ರೋಲಿಯಂನಲ್ಲಿ ಕಚ್ಚಾ ತೈಲದ ಪ್ರಮಾಣವೇ ಶೇ.90. ಸಂಸ್ಕರಿತ ಪೆಟ್ರೋಲಿಯಂ ಉತ್ಪನ್ನ ಶೇ.10 ಮಾತ್ರ. ಸಂಸ್ಕರಣ ರಂಗದಲ್ಲಿ ರಿಲೆಯನ್ಸ್‌ನಂತಹ ಖಾಸಗಿ ಕಂಪನಿಗಳದ್ದೇ ಕಾರುಬಾರು. ಅಂದರೆ ಕಚ್ಚಾತೈಲ ಆಮದಿಗೆ ತೆರಿಗೆ ಕಡಿತ ಮಾಡುವ ಸರಕಾರದ ನೀತಿಯಿಂದ ಖಾಸಗಿ ಕಂಪನಿಗಳಿಗೆ ಲಾಭದ ಸುಗ್ಗಿ. ಸರ್ಕಾರದ ಹೊಸ ತೆರಿಗೆ ನೀತಿಯ ಪ್ರಯೋಜನ ಜನರಿಗೆ ಯಾವ ರೀತಿಯಲ್ಲೂ ತಲುಪಲಿಲ್ಲ. ಕಚ್ಚಾತೈಲ ಆಮದು ಸುಂಕವನ್ನು ದೊಡ್ಡ ಪ್ರಮಾಣದಲ್ಲಿ ಸರ್ಕಾರ ಕಡಿತಗೊಳಿಸಿದರೂ ಈ ಖಾಸಗಿ ಕಂಪನಿಗಳು ಸಂಸ್ಕರಣ ಶುಲ್ಕದಲ್ಲಿ ಮತ್ತೆ ದೊಡ್ಡ ಏರಿಕೆ ಮಾಡಿ 'ಸೂಪರ್' ಲಾಭವನ್ನು ಲೂಟಿ ಹೊಡೆಯುತ್ತಿವೆ. ಹಿಂದೆ ಬ್ಯಾರಲ್ ಒಂದಕ್ಕೆ 4ರಿಂದ 6 ಡಾಲರ್ ಸಂಸ್ಕರಣ ಶುಲ್ಕ ವಿಧಿಸುತ್ತಿದ್ದ ಈ ಖಾಸಗಿ ಕಂಪನಿಗಳು ಈಗ ತೆರಿಗೆ ಕಡಿತದ ನಂತರವೂ ಸಂಸ್ಕರಣ ಶುಲ್ಕ ಏರಿಸಿ ಪ್ರತಿ ಬ್ಯಾರಲ್‌ಗೆ ಈಗ 12 ಡಾಲರ್ ಶುಲ್ಕ ವಿಧಿಸುತ್ತಿದ್ದಾರೆ. ಹೇಗಿದೆ ಖಾಸಗಿ ಕುಳಗಳ ಲಾಭದ ಲೂಟಿ.

ತೈಲ ಬೆಲೆ ನಿಯಂತ್ರಣ ನಿಧಿ ಸ್ಥಾಪಿಸಿ

ಸರ್ಕಾರ ತೈಲದ ಮೇಲೆ ವಿಧಿಸಿರುವ ಸೆಸ್ (ಉಪಕರ) ಮೂಲಕ ಪ್ರತಿವರ್ಷ ಸುಮಾರು 5,400 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದೆ. ಅಂತರರಾಷ್ಟ್ರೀಯ ಕಚ್ಚಾತೈಲ ಮಾರುಕಟ್ಟೆಯಲ್ಲಿ ಆಗುವ ನಿರಂತರ ಬೆಲೆಗಳ ಏರಿಳಿತಗಳು ದೇಶದ ತೈಲ ಕ್ಷೇತ್ರದ ಮೇಲೆ ಹಾನಿಕಾರಕ ಪ್ರಭಾವ ಬೀರದಂತೆ ಈ ಹಣವನ್ನು ಬಳಸಿ 'ತೈಲಬೆಲೆ ನಿಯಂತ್ರಣ ನಿಧಿ' ಸ್ಥಾಪಿಸಬೇಕೆಂಬ ಎಡಪಕ್ಷಗಳ ಒತ್ತಾಯವನ್ನು ಸರ್ಕಾರ ಪರಿಗಣಿಸುತ್ತಿಲ್ಲ. ಇದರಿಂದಾಗಿ ತೀವ್ರ ಅನಿಶ್ಚಿತತೆಯಿಂದ ಕೂಡಿರುವ ಅಂತರ ರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಬೆಲೆ ಏರುಪೇರು ಆದಾಗಲೆಲ್ಲಾ ದೇಶದ ತೈಲ ಕ್ಷೇತ್ರವೂ ಅಲುಗಾಡಿ ಬೆಲೆ ಏರಿಕೆಯ ಮೂಲಕ ಜನರ ಮೇಲೆ ನಿರಂತರವಾಗಿ ಹೊರೆ ಹೇರಲಾಗುತ್ತದೆ.

ಆದರೆ ಸೆಸ್ ಮೂಲಕ ಸಂಗ್ರಹವಾಗುವ ಅಪಾರ ಮೊತ್ತದ ಹಣವನ್ನು ಸರ್ಕಾರ ಭಾರಿ ಶ್ರೀಮಂತರಿಗೆ ರಿಯಾಯತಿ ವಿನಾಯತಿ ನೀಡುವ ತನ್ನ ಆರ್ಥಿಕ ನೀತಿಯ ಅಗತ್ಯಕ್ಕೆ ದುರ್ಬಳಕೆ ಮಾಡುತ್ತಿದೆ.

ನಿರಂತರವಾಗಿ ಕುಸಿಯುತ್ತಿರುವ ಸರ್ಕಾರದ ಸಹಾಯಧನ

ಅಡಿಗೆ ಅನಿಲ ಮತ್ತು ಸೀಮೆಎಣ್ಣೆಗೆ ವಿಪರೀತ ಸಹಾಯಧನ ನೀಡುತ್ತಿರುವುದಾಗಿ ಸರ್ಕಾರ ಬೊಬ್ಬಿಡುತ್ತಿದೆ. ಕಡುಬಡವರು ಬಳಸುವ ಸೀಮೆಎಣ್ಣೆಗೆ ಜನಸಾಮಾನ್ಯರ ಅಗತ್ಯವಾದ ಅಡಿಗೆ ಅನಿಲಕ್ಕೆ ಸಹಾಯಧನ ನೀಡಬೇಕಾದ ಸಾಮಾಜಿಕ ಹೊಣೆಗಾರಿಕೆ ಸರ್ಕಾರದ್ದೆ ಆಗಿದೆ.

ಆದರೆ ಜಾಗತೀಕರಣ - ಖಾಸಗೀಕರಣ-ಉದಾರೀಕರಣದ ವಿನಾಶಕಾರಿ ಹಾದಿ ಹಿಡಿದಿರುವ ಸರ್ಕಾರಕ್ಕೆ ಸಾಮಾಜಿಕ ಹೊಣೆಗಾರಿಕೆಯು ಒಂದು ದೊಡ್ಡ ಹೊರೆಯಂತೆ ಕಾಣುತ್ತಿದೆ. ಭಾರಿ ಬಂಡವಾಳದಾರರಿಗೆ ಶ್ರೀಮಂತರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರಿ ಭಾರಿ ರಿಯಾಯಿತಿಗಳನ್ನು ನೀಡುವ ನೀತಿಗಳನ್ನು ಸಂಭ್ರಮೋತ್ಸಾಹಗಳಿಂದ ಜಾರಿಗೆ ತರುತ್ತಿರುವ ಸರ್ಕಾರ ಜನರ ಅಗತ್ಯಗಳಿಗೆ ನಿರಂತರವಾಗಿ ಸಹಾಯಧನ ಕಡಿತ ಮಾಡುತ್ತಿರುವುದು ಮಾತ್ರ ಎಗ್ಗಿಲ್ಲದೆ ಮುಂದುವರಿದಿದೆ.

ನಿರಂತರವಾಗಿ ಕುಸಿಯುತ್ತಿರುವ ಸರ್ಕಾರದ ಸಹಾಯಧನ

ಸೀಮೆಎಣ್ಣೆ - (ಪ್ರತಿಲೀಟರ್‌ಗೆ)

ಬಜೆಟ್	2002-03	2003-04	ಏ-ಡಿ-04
ಸಹಾಯಧನ	ರೂ.2.45	ರೂ.1.65	ರೂ.0.82
ಅಡುಗೆ ಅನಿಲ (ಪ್ರತಿ ಸಿಲಿಂಡರ್‌ಗೆ)			
ಬಜೆಟ್ ಸಹಾಯಧನ	67.75	45.18	22.58

ಸರ್ಕಾರದ ಈ ಬೊಬ್ಬೆಗೆ ಏನಾದರೂ



ಅರ್ಥವಿದೆಯೇ ಎಂಬುದನ್ನು ಜನತೆ ತೀರ್ಮಾನಿಸಬೇಕಿದೆ.

ಸಾರ್ವಜನಿಕ ತೈಲ ಕಂಪನಿಗಳಿಂದ ಸರ್ಕಾರದ ಆದಾಯ ನಿರಂತರವಾಗಿ ಏರುತ್ತಿದೆ-ಗಮನಿಸಿ.

ಒಂದೆಡೆ ಸರ್ಕಾರ ನೀಡುವ ಸಹಾಯಧನ ನಿರಂತರವಾಗಿ ಕುಸಿಯುತ್ತಿದ್ದರೆ ಮತ್ತೊಂದೆಡೆ ಸರ್ಕಾರಿ ಒಡೆತನದ ತೈಲ ಕಂಪನಿಗಳಿಂದ ಸರ್ಕಾರ ಗಳಿಸುತ್ತಿರುವ ಆದಾಯ ನಿರಂತರವಾಗಿ ಏರುತ್ತಿದೆ.

ಸಾರ್ವಜನಿಕ ತೈಲ ಕಂಪನಿಗಳಿಂದ ಸರ್ಕಾರ ಗಳಿಸಿದ ಆದಾಯ (ಕೋಟಿಗಳಲ್ಲಿ)

2001-2002	ರೂ.46,603
2002-2003	ರೂ.69,195

ತೈಲ ಸಂಶೋಧನೆ ಮತ್ತು ಸ್ವಾವಲಂಬಿ ತೈಲ ಕ್ಷೇತ್ರದ ಕಣ್ನೋಟ ಮತ್ತು ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ.

ತೈಲಕ್ಕಾಗಿ ವಿದೇಶದ ಮೇಲೆ ನಿರಂತರವಾಗಿ ಅವಲಂಬಿಸುವ ಬದಲು ಭಾರತದಲ್ಲಿ ತೈಲ ಕ್ಷೇತ್ರಗಳ ಸಂಶೋಧನೆಯಾಗಬೇಕು. ತೈಲ ಕ್ಷೇತ್ರಕ್ಕೆ ಸಂಬಂಧಿಸಿದ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಗೆ ಸರ್ಕಾರ ಗಮನ ನೀಡಬೇಕು. ಒಟ್ಟಾರೆ ತೈಲ ಉದ್ಯಮದಲ್ಲಿ ಭಾರತ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗುವಂತಹ ದೂರದೃಷ್ಟಿಯ ನೀತಿ ಬೇಕೆಂದು ಮೊದಲಿನಿಂದಲೂ ಎಡಪಕ್ಷಗಳು ಸರ್ಕಾರಗಳನ್ನು ಒತ್ತಾಯಿಸುತ್ತಾ ಬಂದಿವೆ. ಆದರೆ ಖಾಸಗಿ ಕಂಪನಿಗಳು ದೊಡ್ಡ ಬಂಡವಾಳಿಗರ ಹಿತಾಸಕ್ತಿ ಕಾಪಾಡಲು ಟೊಂಕಕಟ್ಟಿ ನಿಂತಿರುವ ನಮ್ಮ ಆಳುವ ಸರ್ಕಾರಗಳು ಈ ಯಾವುದೇ ವಿಚಾರಗಳ ಬಗ್ಗೆ ಗಮನವನ್ನು ನೀಡುತ್ತಿಲ್ಲ.

ಬಂಡವಾಳಿಗರಿಗಾಗಿ ಮಾಡಲಾದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ 'ರಫ್ತು ತೆರಿಗೆ ಕಡಿತ' ವಾಪಸ್ಸಾಗಲಿ

ಕೇಂದ್ರ ಯುಪಿಎ ಸರ್ಕಾರವು ಭಾರತದಿಂದ ವಿದೇಶಗಳಿಗೆ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಫ್ತು ತೆರಿಗೆಯನ್ನು ಕಡಿತ ಮಾಡಿದೆ. ಇದರಿಂದಾಗಿ ಸರ್ಕಾರಕ್ಕೆ ಪ್ರತಿವರ್ಷ 1200 ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇಂತಹ ಎಲ್ಲ ನಷ್ಟದ ಹೊರೆಯನ್ನು ಜನರ ತಲೆಯ ಮೇಲೆಯೇ ಹೊರಿಸಲಾಗುತ್ತದೆ.

ಸರ್ಕಾರದ ಅಪಪ್ರಚಾರವನ್ನು ಧಿಕ್ಕರಿಸಿ ಪ್ರಯಾಣ ದರ ಏರಿಕೆ - ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ಆಂದೋಲನಕ್ಕೆ ಮುಂದಾಗಿ

ಲಾಭಕೋರ ಖಾಸಗಿ ಕಂಪನಿಗಳ ಪರವಾಗಿ ವರ್ತಿಸುತ್ತಿರುವ ಸರ್ಕಾರ ತಪ್ಪು ಮಾಹಿತಿ ಮತ್ತು ಅಪಪ್ರಚಾರದ ಮೂಲಕ ಜನರನ್ನು ವಂಚಿಸಲು ಪ್ರಯತ್ನಿಸುತ್ತಿದೆ. ಇಂತಹ ವಂಚನೆಗೆ ಬಲಿಯಾಗದೆ ಜನತೆ ಜನಪರವಾದ ಮತ್ತು ಶಾಶ್ವತವಾದ ತೈಲ ನೀತಿಗಾಗಿ ತೀವ್ರವಾದ ಆಂದೋಲನಕ್ಕೆ ಮುಂದಾಗಬೇಕಾದದ್ದು ಇಂದಿನ ತುರ್ತು ಅಗತ್ಯವಾಗಿದೆ ಮತ್ತು ಬೆಲೆ ಏರಿಕೆಯನ್ನು ಹಿಮ್ಮೆಟ್ಟಿಸಬೇಕಿದೆ.

ಬಿಜೆಪಿ ಮತ್ತು ಎನ್.ಡಿ.ಎಗಳ ಬೂಟಾಟಿಕೆಯೂ ಬಯಲಾಗಿದೆ

ಬಿಜೆಪಿ ಮತ್ತು ಎನ್.ಡಿ.ಎ.ಗಳು ಯುಪಿಎ ಸರ್ಕಾರದ ತೈಲಬೆಲೆ ಏರಿಕೆಯನ್ನು ವಿರೋಧಿಸುವ ಕಪಟ ನಾಟಕವನ್ನಾಡುತ್ತಿವೆ. ಇದೇ ಎನ್.ಡಿ.ಎ. ಸರ್ಕಾರ ಅಧಿಕಾರದಲ್ಲಿದ್ದಾಗಲೂ ನಿರಂತರವಾಗಿ ಪೆಟ್ರೋಲ್-ಡಿಸೇಲ್ ಬೆಲೆಗಳನ್ನು ಏರಿಸಲಾಯಿತು. ಮಾತ್ರವಲ್ಲ ಸೀಮೆಎಣ್ಣೆ - ಅಡಿಗೆ ಅನಿಲದ ಬೆಲೆಯನ್ನು ವಿಪರೀತವಾಗಿ ಏರಿಸಲಾಯಿತು. (ಎಡಪಕ್ಷಗಳ ಒತ್ತಾಯದಿಂದ ಈಗ ಹಾಗಾಗಿಲ್ಲ.)

ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಗಲೂ ಜನಪರ ಪರ್ಯಾಯ ನೀತಿಗಳನ್ನು ಸೂಚಿಸಿ ಚಳುವಳಿ ನಡೆಸಿದ್ದವು. ಆದರೆ ಇಂತಹ ಜನಪರ ಪರ್ಯಾಯ ನೀತಿಗಳನ್ನು ಧಿಕ್ಕರಿಸಿ ಇದೇ ಜಾಗತೀಕರಣ, ಖಾಸಗೀಕರಣ ಮತ್ತು ಬೆಲೆ ಏರಿಕೆ ನೀತಿಯನ್ನೇ ಅನುಸರಿಸಿದ ಬಿಜೆಪಿ ಮತ್ತು ಎನ್‌ಡಿಎಗಳನ್ನು ಜನತೆ ಕಳೆದ ಚುನಾವಣೆಯಲ್ಲಿ ಧೂಳಿಪಟ ಮಾಡಿ ತಕ್ಕ ಪಾಠ ಕಲಿಸಿದ್ದಾರೆ. ಬಿಜೆಪಿ-ಎನ್‌ಡಿಎಗಳ ಬೂಟಾಟಿಕೆ - ಕಪಟ ನಾಟಕ ಜನರ ಮುಂದೆ ಬಯಲಾಗಿದೆ.

ವಿಮಾನಯಾನ ಹಗುರ; ಬಡವರ ಪ್ರಯಾಣ ಬಲು ಭಾರ

ಜನಸಾಮಾನ್ಯರಿಗೆ ಅಗತ್ಯವಾದ ಪೆಟ್ರೋಲ್ ಡೀಸೆಲ್ ದರಗಳನ್ನು ನಿರಂತರವಾಗಿ ಏರಿಸುತ್ತಿರುವ ಸರ್ಕಾರ ಮತ್ತೊಂದೆಡೆ ವಿಮಾನಗಳಿಗೆ ಅಗತ್ಯವಾದ ಇಂಧನದ ಬೆಲೆಯನ್ನು ಕಡಿತಗೊಳಿಸುತ್ತಿದೆ.

ವಿಮಾನ ಕಂಪನಿಗಳ - 'ವಿಮಾನಯಾನಿಗಳ ಪ್ರಯಾಣ ಹಗುರ, ಬಡವರ ಪ್ರಯಾಣ ಬಲುಭಾರ' ಎಂಬಂತೆ ಮಾಡಿರುವ ಸರ್ಕಾರದ ನೀತಿಯು ಸ್ಪಷ್ಟವಾಗಿ ಸರ್ಕಾರ ಯಾರ ಪರವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ತೈಲ ಕಂಪನಿಗಳಿಗೆ ನಷ್ಟವಾಗುತ್ತಿಲ್ಲ. ಲಾಭದ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ ಅಷ್ಟೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲಗಳ ಬೆಲೆ ಏರಿಕೆಯಿಂದಾಗಿ ಸಾರ್ವಜನಿಕ ತೈಲ ಕಂಪನಿಗಳಿಗೆ ನಷ್ಟವಾಗುತ್ತಿರುವ ಕಾರಣದಿಂದ ಬೆಲೆ ಏರಿಕೆಗೆ ಈ ಸಂಸ್ಥೆಗಳು ಒತ್ತಾಯ ಮಾಡಿದವು ಎಂದು ಬಿಂಬಿಸಲಾಗುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಆಗಿರುವುದರಿಂದ ಈ ತೈಲ ಕಂಪನಿಗಳಿಗೆ ನಷ್ಟವೇನೂ ಆಗುತ್ತಿರಲಿಲ್ಲ. ಉತ್ತಮ ಲಾಭಗಳಿಸುತ್ತಿದ್ದ ಈ ಕಂಪನಿಗಳ ಲಾಭದ ಪ್ರಮಾಣದಲ್ಲಿ ಸ್ವಲ್ಪ ಕಡಿತವಾಗಿತ್ತು ಅಷ್ಟೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿದಂತೆಲ್ಲಾ ನೇರವಾಗಿ ಅದನ್ನು ಜನರ ಮೇಲೆ ವರ್ಗಾಯಿಸಬೇಕೆನ್ನುವುದು ಬಂಡವಾಳಶಾಹಿ ವ್ಯವಸ್ಥೆಯ ಒಂದು ಕ್ರೂರ ನೀತಿಯಾಗಿದೆ. ಇಂತಹ ಜನವಿರೋಧಿ ವಾದವನ್ನು ಒಪ್ಪುವುದು ಸಾಧ್ಯವಿಲ್ಲ. ಎನ್.ಡಿ.ಎ ಸರ್ಕಾರದ ಅದೇ ವಿನಾಶಕಾರಿ ನೀತಿಯ ದಾರಿಯಲ್ಲೆ ಸಾಗಲು ಯುಪಿಎ ಸರ್ಕಾರವೂ ಪ್ರಯತ್ನಿಸುತ್ತಿದೆ.

ಜನರ ರಾಜಕೀಯ ಜಾಗೃತಿ - ತೀವ್ರವಾದ ಪ್ರತಿಭಟನಾ ಆಂದೋಲನಗಳಿಂದ ಮಾತ್ರವೇ ಇಂತಹ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ

- ಆರ್.ರಾಮಕೃಷ್ಣ

ಕಾಲ್‌ಸೆಂಟರ್ ಈಗ ಎಲ್ಲರಿಗೂ ಚಿರಪರಿಚಿತ. ಇದು ಜಾಗತೀಕರಣ ತಂದ ಹೊಸ ಉದ್ಯಮವೇ? ಅಥವಾ ಇದ್ದಬದ್ದ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ 'ನಡುರಾತ್ರಿ ಕೂಲಿ' ಆಧರಿಸಿದ ಇನ್ನೊಂದು ಶೋಷಕ ಕ್ಷೇತ್ರವೇ? ಬಿಪಿಓ-ಐಟಿಇಎಸ್ ಎಂದೂ ಕರೆಯಲಾಗುವ ಈ ಉದ್ಯಮದ ಲಕ್ಷಣಗಳೇನು? ವಿಶೇಷತೆಗಳೇನು? ಸಾಧ್ಯತೆ-ಸವಾಲುಗಳೇನು? ಈ ಉದ್ಯಮ ನಮ್ಮ ಬೆಳವಣಿಗೆಯಲ್ಲಿ ಯಾವ ಪಾತ್ರ ವಹಿಸುತ್ತದೆ? ಎಷ್ಟರ ಮಟ್ಟಿಗೆ ಇದಕ್ಕೆ ಆದ್ಯತೆ ನೀಡಬೇಕು. ಉದ್ಯಮದ ಒಂದು ಸಮಗ್ರ ಪರಿಚಯಾತ್ಮಕ ವಿಶ್ಲೇಷಣೆ ಇಲ್ಲಿದೆ.

ಶರತ್‌ಚಂದ್ರ


ಜಾಗತೀಕರಣ ತಂದ ಹೊಸ ಉದ್ಯಮ ಅಥವಾ ಕ

ನಡುರಾತ್ರಿ ಕೂಲಿ

ನಡುರಾತ್ರಿಯ ನಂತರ ಸುಮೊ, ಕ್ವಾಲಿಸ್‌ಗಳು ಗದ್ದಲ ಎಬ್ಬಿಸುತ್ತಾ, ಮನೆ ಮುಂದೆ ನಿಲ್ಲುತ್ತವೆ. ಪಾಪ್ ಸಂಗೀತದ ಏರುಧ್ವನಿಯ ಆಲಾಪನೆ ಬೇರೆ. ವ್ಯಾನ್ ಇಳಿದು ಮನೆಗೆ ಸೇರಿದವರ ನಗು - ಆರಚಾಟ-ಕಿರಿಚಾಟ ಎಚ್ಚರರಾದ ನೆರೆಹೊರೆಯವರು 'ಥೂ, ಈ ಕಾಲ್ ಸೆಂಟರ್ ಮನೆ ಹಾಳಾಗ....' ಎಂದು ಶಪಿಸುತ್ತಾ ಪುನಃ ನಿದ್ದೆ ಮಾಡಲು ಪ್ರಯತ್ನಿಸುತ್ತಾರೆ. ಇದು ಬೆಂಗಳೂರಿನ ಬಡಾವಣೆಗಳಲ್ಲಿ ಸರ್ವೇ ಸಾಮಾನ್ಯ ದೃಶ್ಯ. ಬೆಂಗಳೂರು ನಗರ ಮತ್ತು ಸುತ್ತಮುತ್ತ ಒಂದೂವರೆ ಲಕ್ಷ ಜನರಿಗೆ ಉದ್ಯೋಗ ಕೊಡುವ ಕಾಲ್ ಸೆಂಟರ್‌ಗಳು, 'ಮಾಹಿತಿ ತಂತ್ರಜ್ಞಾನ ಆಧಾರಿತ ಸೇವಾಕ್ಷೇತ್ರ' (ITES-Information Technology enabled Service)ಎಂದು ಕರೆಯಲಾಗುವ ಹೊಸ 'ಉದ್ಯಮ'ದ ದೊಡ್ಡ ವಿಭಾಗ. ಸಾಕಷ್ಟು ವಿವಾದಿತವಾಗಿರುವ ಈ ಕ್ಷೇತ್ರದ ಸಂಕ್ಷಿಪ್ತ ಪರಿಚಯ ಇದು.

ಕಾಲ್‌ಸೆಂಟರ್ 'ಉದ್ಯಮ'

ಕಾಲ್‌ಸೆಂಟರ್ ಒಂದು ಕಂಪನಿಯ ಮಾರಾಟದ ನಂತರದ ಮತ್ತು ಮಾರಾಟದ ಮೊದಲಿನ ಪ್ರಶ್ನೆ - ಸಮಸ್ಯೆ - ದೂರುಗಳನ್ನು ಸ್ವೀಕರಿಸುವ ವಿಭಾಗ. ಗ್ರಾಹಕರ ಜತೆ ಸಂಬಂಧದಲ್ಲಿ ಮೊದಲ ಕೊಂಡಿ. ಗ್ರಾಹಕರ ಜತೆ ಸಂಪರ್ಕ ಬಿಂದು. (ವಿವರಗಳಿಗೆ 'ಕಾಲ್ ಸೆಂಟರ್ ಎಂದರೇನು?' ಬಾಕ್ಸ್ ನೋಡಿ) ಗ್ರಾಹಕ ಸಾಮಗ್ರಿಗಳು, ಸೇವೆಗಳು ವ್ಯಾಪಕವಾಗಿ ಹೆಚ್ಚುತ್ತಿರುವುದರಿಂದ ಕಾಲ್ ಸೆಂಟರ್ ಉದ್ಯೋಗಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ಈ ಉದ್ಯೋಗಿಗಳು ಗ್ರಾಹಕರ ಜತೆ ಸೌಜನ್ಯದಿಂದ ಮಾತಾಡಿ, ಅವರ ಸಮಸ್ಯೆ ಅರ್ಥ ಮಾಡಿಕೊಳ್ಳುವುದನ್ನು ಬಿಟ್ಟರೆ (ಕಂಪನಿಯ ಉತ್ಪನ್ನದ ಬಗ್ಗೆ ವಿಶೇಷ ಮಾಹಿತಿ ಸೇರಿಸಿ) ಬೇರೆ ಯಾವುದೇ ವಿಶೇಷ ಜಾಣ್ಮೆ - ಆಕರ್ಷಣೆ ಅಗತ್ಯವಿಲ್ಲ. ಕಾಲ್ ಸೆಂಟರ್‌ಗಳು ಗ್ರಾಹಕರಿಗೆ ಹತ್ತಿರವಿರುವ (ಸ್ಥಳೀಯ ಅಥವಾ ಉಚಿತ ಕರೆ ಮಾಡುವ ಸೌಲಭ್ಯವಿರುವ) ಕೇಂದ್ರಗಳಾಗಿದ್ದು, ಸಾಮಾನ್ಯವಾಗಿ ಕಂಪನಿಯ ಕಾರ್ಖಾನೆ ಅಥವ ಇತರ ಕೇಂದ್ರಗಳ ಹತ್ತಿರ ಇರಬೇಕಾಗಿಲ್ಲ. ತಮ್ಮ ವಹಿವಾಟಿನ ಖರ್ಚನ್ನು ಕಡಿಮೆ ಮಾಡುತ್ತಾ, ಲಾಭ ಹೆಚ್ಚು ಮಾಡುತ್ತಾ ಹೋಗುವ ಗುಂಗಿನಲ್ಲಿರುವ ಅಮೇರಿಕ-ಯುರೋಪುಗಳ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಈ ಉದ್ಯೋಗಗಳನ್ನು ಕಡಿಮೆ - ವೆಚ್ಚದ ಮೂರನೇ ಜಗತ್ತಿನ ದೇಶಗಳಲ್ಲಿ ಯಾಕೆ ಮಾಡಬಾರದು ಎಂದು ಹಲವು ವರ್ಷಗಳಿಂದ ಯೋಚಿಸುತ್ತಿವೆ. ಒಂದು ದಶಕದ ಹಿಂದೆಯೇ ಆರಂಭವಾದ ಈ ಲಹರಿ ಈಗ ಒಂದು ದೊಡ್ಡ 'ಉದ್ಯಮ'ವಾಗಿದೆ. ಟೆಲಿಕಾಂ, ಇಂಟರ್‌ನೆಟ್ ಸಂಪರ್ಕ ಕ್ಷೇತ್ರದಲ್ಲಿ ಆಗಿರುವ ದೊಡ್ಡ ಕ್ರಾಂತಿ, ಇಂಡಿಯಾ - ಮೂರನೇ ಜಗತ್ತಿನ ದೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಣ ಪಡೆದ ನಿರುದ್ಯೋಗಿಗಳ ಪಡೆಯ ಲಭ್ಯತೆ - ಇವೆರಡು ಈ ಯೋಚನಾ ಲಹರಿಗೆ ಕುಮ್ಮಕ್ಕು ಕೊಟ್ಟಿವೆ.



ಮುಖ್ಯವಾಗಿ ಜನರಲ್ ಎಲೆಕ್ಟ್ರಿಕ್, ಅಮೆರಿಕನ್ ಎಕ್ಸ್‌ಪ್ರೆಸ್ ನಂತರ ಅಮೆರಿಕನ್ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಇದನ್ನು ಆರಂಭಿಸಿದವು. ಈಗ ಇದುದೊಡ್ಡ ಸ್ವತಂತ್ರ 'ಉದ್ಯಮ'ವಾಗಿದೆ. ಅಮೇರಿಕನ್ ಕಂಪನಿಗಳಿಗೆ ಮುಖ್ಯವಾಗಿ ಅಮೆರಿಕನ್ ಗ್ರಾಹಕರ ಜತೆ ವ್ಯವಹರಿಸುವ ಕಾಲ್‌ಸೆಂಟರ್‌ಗಳು ಬೇಕಾಗಿದ್ದು, ಇಂಗ್ಲೀಷ್ ಮಾತನಾಡಬಲ್ಲ ಶಿಕ್ಷಿತ ಯುವಕ-ಯುವತಿಯರು ದೊಡ್ಡ ಸಂಖ್ಯೆಯಲ್ಲಿರುವ ಭಾರತ ಸ್ವಾಭಾವಿಕ ತಾಣವಾಯಿತು. 90ರ ದಶಕದಲ್ಲಿ ಟೆಲಿಕಾಂ, ಇಂಟರ್‌ನೆಟ್ ವ್ಯವಸ್ಥೆ ವ್ಯಾಪಕವಾಗಿ ಲಭ್ಯವಾಗಿ, ಸೇವೆ ಉತ್ತಮಗೊಂಡಿದ್ದು ಇದಕ್ಕೆ ಕುಮ್ಮಕ್ಕು ಕೊಟ್ಟಿದೆ.

ಬಿಪಿಒ-ಐಟಿಇಎಸ್(BPO-ITES)ಎಂದರೇನು?

ಕಾಲ್‌ಸೆಂಟರ್‌ನಂತೆ ಕಂಪನಿಯ ಮುಖ್ಯ ಕೆಲಸ (ಉದಾಹರಣೆಗೆ ಮೂಲ ಉತ್ಪನ್ನದ ವಿನ್ಯಾಸ, ತಯಾರಿ, ಮಾರಾಟ) ಅಲ್ಲದ ಇತರ ಎಲ್ಲಾ ಕೆಲಸ ಮಾಡುವ ಸಹಾಯಕ - ವಿಭಾಗಗಳನ್ನು ಕಡಿಮೆ - ಖರ್ಚಿನ ದೇಶಗಳಿಗೆ ಕಳಿಸುವುದು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಒಂದು 'ಟ್ರೆಂಡ್' ಆಗಿಬಿಟ್ಟಿದೆ. ಇಂತಹ ವಿಭಾಗಗಳೆಂದರೆ ಕಾಲ್‌ಸೆಂಟರ್, ಸಿಬ್ಬಂದಿ (ಪರ್ಸನೆಲ್ ಅಥವಾ ಎಚ್‌ಆರ್) ವ್ಯವಹಾರ, ಇಡಿಎ(ಕಂಪನಿಯ ಅಂಕಿ-ಸಂಖ್ಯೆಗಳನ್ನು ಕಂಪ್ಯೂಟರ್ ಬಳಸಿ ಪರಿಷ್ಕರಿಸುವುದು, ನಾನಾ ವರದಿಗಳನ್ನು ತಯಾರಿಸುವುದು), ಖರೀದಿ, ಬಿಲ್ಲಿಂಗ್, ಕಂಪ್ಯೂಟರ್ ಸಂಪರ್ಕಜಾಲ ಉಸ್ತುವಾರಿ, ಪಿಟ್‌ಸೈಟ್ ಉಸ್ತುವಾರಿ, ಕಾನೂನು ವ್ಯವಹಾರ, ಮಾರುಕಟ್ಟೆ, ಇತ್ಯಾದಿ. ಇಂತಹ ವಿಭಾಗಗಳು ಎಲ್ಲಾ ಕಂಪನಿಗಳಲ್ಲೂ ಇದ್ದು ಅವುಗಳನ್ನು ನಡೆಸಲು ಬೇಕಾದ ಜಾಣ್ಮೆ - ಪರಿಣತಿಗೂ ಕಂಪನಿಯ ಮೂಲಭೂತ ವ್ಯವಹಾರ-ವಹಿವಾಟು- ಉತ್ಪನ್ನಕ್ಕೂ ಏನೇನೂ ಸಂಬಂಧವಿಲ್ಲ. ಉದಾಹರಣೆ ಯಾವುದೇ ಕಂಪನಿಯ ಸಿಬ್ಬಂದಿ ವಿಭಾಗಕ್ಕೆ, ಖರೀದಿ ವಿಭಾಗದ ಉದ್ಯೋಗಿ ಮಾಡುವ ಕೆಲಸ ಎಲ್ಲಿದ್ದರೂ ಒಂದೇ, ಇಂತಹ ಉದ್ಯೋಗಗಳನ್ನು ಬೇರೆಡೆ (ವೇತನ ಕಡಿಮೆ ಇರುವಲ್ಲಿ) ಮಾಡುವುದು ಟೆಲಿಕಾಂ ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಕ್ಷೇತ್ರಗಳಲ್ಲಿ ಮೆರೆದ ಪ್ರಗತಿಯಿಂದ ಈಗ ಸಾಧ್ಯವಾಗಿದೆ. ಹಲವು ಕಂಪನಿಗಳ ಈ ಎಲ್ಲಾ ವಿಭಾಗಗಳ ಕೆಲಸಗಳೂ ಹೊರಗೆ ಕಳಿಸಲ್ಪಟ್ಟಾಗ ಒಂದು ಸ್ವತಂತ್ರ ಉದ್ಯಮವಾಗಿ ಬಿಡುವ ಸಾಧ್ಯತೆ ಇದೆ ಆಗಿದೆ. ಇದನ್ನೇ ಬಿಪಿಒ(BPO-Business Process Outsourcing) ಅಂದರೆ - ಕಂಪನಿಯ ವಹಿವಾಟಿನ ಮೂಲಭೂತ ವಿಭಾಗ ಬಿಟ್ಟು ಇತರ ವಿಭಾಗಗಳನ್ನು ಕಂಪನಿಯ ಹೊರಗೆ ಕಾಂಟ್ರಾಕ್ಟು ಕೊಟ್ಟು ಮಾಡಿಸುವುದು - ಎನ್ನುತ್ತಾರೆ. ಇದನ್ನೇ ಐ.ಟಿ.ಇ.ಎಸ್.(ITES-Information Technology enabled Service) ಅಂದರೆ- ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು ಎಂದೂ ಕರೆಯುತ್ತಾರೆ. ಇವೆರಡಕ್ಕೂ ಸ್ವಲ್ಪ ವ್ಯತ್ಯಾಸ ಇದೆ. ಬಿಪಿಒದ ವಿವರಣೆಗೆ ಒಗ್ಗದ ಕೆಲವು ಸೇವೆಗಳು ಹೊರಗೆ ಹೋಗುತ್ತಿವೆ. ಉದಾಹರಣೆಗೆ 'ಕಾರ್ಟೂನ್ ಫಿಲಂ'ಗಳನ್ನು ಮಾಡುವುದು ಇಲ್ಲಿ ಇಂತಹ ಕಂಪನಿಗಳ ಮೂಲಭೂತ ಭಾಗವಾದ ಕಾರ್ಟೂನ್ ವಿನ್ಯಾಸ, ಫಿಲಂನ ಹಿಂದಿನ ಕಥೆ ಎಲ್ಲಾ ಭಾರತದಲ್ಲೇ ಸಿದ್ಧವಾಗುತ್ತಿದೆ. ಡಿಸ್ನಿ, ಕಾರ್ಟೂನ್ ನೆಟ್‌ವರ್ಕ್ - ಮುಂತಾದ ಕಂಪನಿಗಳ ಸ್ಪೆಶಲ್ ಎಫೆಕ್ಟ್, ಎನಿಮೇಶನ್ ಕಾರ್ಟೂನ್ ಭಾರತದಲ್ಲಿ ಸಿದ್ಧವಾಗುತ್ತಿದೆ. ಅದೇ ರೀತಿ ಕೆಲವು ಆರ್ಥಿಕ - ಮಾರುಕಟ್ಟೆ ಸಂಶೋಧನೆ - ವಿಶ್ಲೇಷಣೆ ಮುಖ್ಯ ವಹಿವಾಟುಗಾರರು ಮೊರ್ಗನ್ ಸ್ಟಾನ್ಲಿ, ಗಾರ್ಟ್‌ನರ್, ನಂತಹ ಕಂಪನಿಗಳು ತಮ್ಮ ಮುಖ್ಯ ವಿಭಾಗ ಮಾರುಕಟ್ಟೆ ಸಂಶೋಧನೆ - ವಿಶ್ಲೇಷಣೆಗಳನ್ನೇ ಭಾರತದಲ್ಲಿ ಮಾಡಲು ಆರಂಭಿಸಿವೆ. ಜಾಗತಿಕ ಮಾರುಕಟ್ಟೆ - ಆರ್ಥಿಕ - ಶೇರು ಬಜಾರ್ ಬಗ್ಗೆ ಅಂಕಿ ಸಂಖ್ಯೆ ಸಂಗ್ರಹ, ವಿಶ್ಲೇಷಣೆ ಮುಖ್ಯ ಭಾಗವಾಗಿ ಈ ವಹಿವಾಟು ಎಲ್ಲಿ ಮಾಡಿದರೂ ಒಂದೇ. ಆದರೆ ಈ ಎಲ್ಲಾ ಉದ್ಯೋಗಗಳಿಗೂ ವಿಶೇಷ ಪರಿಣತಿ ಬೇಕು. ಇದು ಈಗ ಭಾರತದಲ್ಲಿ ಲಭ್ಯವಿರುವುದು. ಇಂತಹ ಕೆಲಸವನ್ನು ಭಾರತದಲ್ಲಿ ಮಾಡುವುದು ಸಾಧ್ಯವಾಗಿದೆ. ಇದೆ ರೀತಿ ಮುಸ್ತಕಗಳ ಕಂಪೋಸಿಂಗ್-ಪ್ರಿಂಟಿಂಗ್‌ನಂತಹ ಉದ್ಯಮಗಳೂ ಆರಂಭ'ವಾಗಿವೆ. ಇವೆಲ್ಲವನ್ನು ತೋರಿಸಿ ಐಟಿಇಎಸ್ 'ಉದ್ಯಮ' ಎನ್ನುತ್ತಾರೆ. ಇದು ನಿಜವಾಗಿಯೂ ಒಂದು ಸೇವಾ (ಸರ್ವೀಸಸ್) ಕ್ಷೇತ್ರ. ಆದರೆ

'ರಾತ್ರಿ ಪಾಳಿ ತರುವ ಹೊ

ರಾತ್ರಿ ಪಾಳಿ ತರುವ ಹೊಸ ರೋಗಕ್ಕೆ ಹೊ
ಅಂದರೆ Burn-Out-Stress Syndrom. ಅಂದ
ಉದ್ಯೋಗಗಳಲ್ಲಿ ಸಾಮಾನ್ಯ. ಸತತ ಸುಸ್ತು, ನಿದ್ದೆ ಬ
- ಈ ರೋಗದ ಲಕ್ಷಣಗಳು. ಹೊಟ್ಟೆ, ಜೀರ್ಣ
ದೇಹವನ್ನು ಅದರ ಪ್ರಾಕೃತಿಕ ಒತ್ತಡದ ಮೇಲೆ ದಾ
ಬಡಿತದ ಮೇಲೂ ಪರಿಣಾಮ ಆಗುವವರೂ ಇದ್ದ
ಮುಂತಾದ ಗಂಭೀರ ಸಮಸ್ಯೆಗಳಿಗೆ ಕಾರಣವಾಗು
ಸ್ವಭಾವ, ಎಲ್ಲದರಲ್ಲಿ ಆಸಕ್ತಿ ಕಳೆದುಕೊಳ್ಳುವುದು.
ಸೆಂಟರ್‌ಗಳಲ್ಲಿ ಡಾಕ್ಟರುಗಳನ್ನು ಈ ಸಮಸ್ಯೆ
'ತಾತ್ಕಾಲಿಕವಾಗಿ ಸಹಿಸಲು' ಡಾಕ್ಟರು ಶುಶ್ರೂಷೆ ಕ
ರಾತ್ರಿ ಪಾಳಿ ಇದ್ದರೆ ಈ 'ಬಾಸ್' ಅನಿವಾರ್ಯವ

ಕಾಲ್‌ಸೆಂಟರ್ ಎಂದರೇನು

ಯಾವುದೇ ಉತ್ಪನ್ನದ ಉತ್ಪಾದನೆ, ಮಾರಾಟದಲ್ಲಿ ತೊಡಗಿರುವ ಕಂಪನಿಯ ಗ್ರಾಹಕರು ಆ ಉತ್ಪನ್ನಗಳಲ್ಲಿ ಸಮಸ್ಯೆ ಬಂದಾಗ, ಅದನ್ನು ಪರಿಹರಿಸಲು ಫೋನು ಮಾಡಿದಾಗ ಅದನ್ನು ಸ್ವೀಕರಿಸುವ ಕೇಂದ್ರ. ಸಮಸ್ಯೆ ಕೊಡುತ್ತಿರುವ 'ಉತ್ಪನ್ನ' ಸ್ಟಿರಿಯೋ, ಮೊಬೈಲ್ ಫೋನ್, ಕ್ಯಾಮರಾ ಇರಬಹುದು. ಅಥವಾ ಸೇವೆಗಳಾದ ಬ್ಯಾಂಕ್, ಇನ್ಶೂರೆನ್ಸ್, ಕ್ರೆಡಿಟ್ ಕಾರ್ಡ್, ವಿದ್ಯುತ್ ಫೋನು ಬಿಲ್ಲು, ತೆರಬೇಕಾದ ತೆರಿಗೆಗಳು ಇತ್ಯಾದಿ ಇರಬಹುದು. ಕಂಪನಿಯ ಉತ್ಪನ್ನಗಳ ಮಾರಾಟದ ಸಂಖ್ಯೆ (ಲಕ್ಷಾಂತರ ಸಾವಿರಾರು)ಗೆ ಅನುಗುಣವಾಗಿ ಕಾಲ್‌ಸೆಂಟರ್‌ನಲ್ಲಿ ಎಷ್ಟು ಜನ ಫೋನು ಸ್ವೀಕರಿಸುವವರು ಬೇಕು ಎಂದು ನಿರ್ಧಾರವಾಗುತ್ತದೆ. ಗ್ರಾಹಕರು ದೂರು / ಪ್ರಶ್ನೆಗಳನ್ನು ಸ್ವೀಕರಿಸಿ ಸರಳವಾದ ಪ್ರಶ್ನೆಯಾದರೆ ಅದಕ್ಕೆ ತತ್‌ಕ್ಷಣ ಪರಿಹಾರ ಹೇಳುವುದು, ಇಲ್ಲವೆ ಪರಿಹಾರ ತಿಳಿಸುವ ದಿನ - ಸಮಯ ಹೇಳುವುದು ಕಾಲ್ ಸೆಂಟರ್‌ನ ಕೆಲಸ. ಆ ಮೇಲೆ ಈ ದೂರು ಪರಿಹಾರಕ್ಕೆ ಕಂಪನಿಯ ಸಂಬಂಧಪಟ್ಟ ವಿಭಾಗಕ್ಕೆ ರವಾನಿಸುವುದು. ಪರಿಹಾರ ಸಂಬಂಧಪಟ್ಟ 'ಉತ್ಪನ್ನ'ದ ರಿಪೇರಿ ಬಿಡಿಭಾಗ ಕಳಿಸುವುದು, 'ಗ್ಯಾರಂಟಿ' ಅವಧಿಯ ಬಳಿಕ ಇದ್ದರೆ ಹೊಸ 'ಉತ್ಪನ್ನ' ಕೊಡುವುದು ಫೋನ್ ಬಿಲ್ಲು ತಪ್ಪಾಗಿದ್ದರೆ ಸರಿಪಡಿಸಿ 'ಹೆಚ್ಚಿನ ಹಣ' ವಾಪಸು ಮಾಡುವುದು - ಇತ್ಯಾದಿ. ಉತ್ಪನ್ನದ ಬಗ್ಗೆ ಮಾಹಿತಿ, ಸರಿಯಾದ ಮಾಡೆಲ್ ಆರಿಸಲು ಸಹಾಯ - ಮುಂತಾದ ಮಾರಾಟದ - ಮೊದಲಿನ ಸಮಸ್ಯೆಗಳನ್ನು ಕಂಪನಿಗಳ ಕಾಲ್‌ಸೆಂಟರ್‌ಗಳು ಸ್ವೀಕರಿಸುತ್ತವೆ. ಉತ್ಪನ್ನಗಳ ಮಾರಾಟಕ್ಕೆ ಕರೆ ಮಾಡುವುದೂ (ಈ ಕಾರು ಕೊಳ್ಳಿ, ಆ ಇನ್ಶೂರೆನ್ಸ್ ಕೊಳ್ಳಿ, ಮನೆ ಸಾಲ ಕೊಳ್ಳಿ ಇತ್ಯಾದಿ) ಕಾಲ್ ಸೆಂಟರ್‌ಗಳ ಕಾರ್ಯ ವ್ಯಾಪ್ತಿಗೆ ಬರುತ್ತದೆ.



…ಉದ್ಯಮ'ದ ದರ್ಜೆ ಗಳಿಸಿ ಬಿಟ್ಟಿದೆ. ಬಿಪಿಒ, ಐಟಿಇಎಸ್, ಕ್ಷೇತ್ರದ ಒಂದು ಭಾಗವೆನ್ನಬಹುದು. ಕಾಲ್‌ಸೆಂಟರ್ ಬಿಪಿಒ ನ ಒಂದು ವಿಭಾಗ. ಐಟಿಇಎಸ್ ಈ ಇಡೀ ಕ್ಷೇತ್ರಕ್ಕೆ ಇಟ್ಟಿರುವ ಹೆಸರು.

ಬಿಪಿಒ-ಐಟಿಇಎಸ್ ಉದ್ಯಮ

90ರ ದಶಕದಲ್ಲಿ ಆರಂಭವಾದ ಈ 'ಉದ್ಯಮ' ಈ ದಶಕದಲ್ಲಿ ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ 'ರಫ್ತು ಉದ್ಯಮ'ವಾಗಿ ಬಿಟ್ಟಿದೆ. 2004-05ರ ಸಾಲಿಗೆ ಐಟಿಇಎಸ್ ಕ್ಷೇತ್ರದ ಒಟ್ಟು ವಹಿವಾಟು ಸುಮಾರು 22 ಸಾವಿರ ಕೋಟಿ ರೂ. ಕಳೆದ ಐದು ವರ್ಷಗಳಲ್ಲಿ ಸರಾಸರಿ ಶೇಕಡಾ 55 ರಷ್ಟು ವಾರ್ಷಿಕವಾಗಿ ಬೆಳೆಯುತ್ತಿದೆ. ಉದ್ಯೋಗ ನಿರ್ಮಾಣದಲ್ಲೂ ಈ 'ಉದ್ಯಮ' ವಿಕ್ರಮ ಸಾಧಿಸಿದೆ. ಈಗ ಮೂರುವರೆ ಲಕ್ಷ ಉದ್ಯೋಗ ಹೊಂದಿರುವ ಉದ್ಯಮ ಕಳೆದ ವರ್ಷ ಸುಮಾರು ಒಂದು ಕಾಲು ಲಕ್ಷ ಹೊಸ ಉದ್ಯೋಗ ಸೃಷ್ಟಿಸಿತು. ಇದು ವೇಗವಾಗಿ ಬೆಳೆಯುವ ಇತರ ಕ್ಷೇತ್ರಗಳಲ್ಲಿ ಸಾಫ್ಟ್‌ವೇರ್ ಮತ್ತು ಟೆಲಿಕಾಂ ಸೇವೆ ಕೈಗಾರಿಕೆಗಳ ಎರಡು - ಮೂರು ಪಟ್ಟು. ಈ ಅಂಕೆ ಸಂಖ್ಯೆಗಳು ಇಡೀ ಐಟಿ ಉದ್ಯಮದ್ದಲ್ಲ. ಸಾಫ್ಟ್‌ವೇರ್ ಸೇವೆಗಳನ್ನು ಒಳಗೊಂಡಿಲ್ಲ ಎಂದು ಗಮನಿಸಬೇಕು. ಐದು ವರ್ಷಗಳ ಹಿಂದೆ ಐಟಿಇಎಸ್ ಕ್ಷೇತ್ರ ಒಟ್ಟು

…ಸೆಂಟರ್‌ನ
…ಳು

ಐಟಿ ವಹಿವಾಟಿನ ಸುಮಾರು ಶೇಕಡಾ 15 ಭಾಗ ಮಾತ್ರ ಇದ್ದರೆ, ಈ ವರ್ಷ ಶೇಕಡಾ 30 ದಾಟಿದೆ. ಅಂದರೆ ಕಳೆದ ಐದು ವರ್ಷಗಳಲ್ಲಿ ಒಟ್ಟು ಐಟಿ-ಬಿಟಿ ಉದ್ಯಮದ ಭಾಗವನ್ನು ಇಮ್ಮಡಿಗಿಂತ ಹೆಚ್ಚು ಮಾಡಿಕೊಂಡಿದೆ.

…ಗ - ಬಾಸ್' (BOSS)

…ಲಾಗಿದೆ - 'ಬಾಸ್' ಅಂತ. ಬಾಸ್ …ವ ಒತ್ತಡ!. ಇದು ಕಾಲ್ ಸೆಂಟರ್‌ನ …ಹದ ಚಕ್ರದಲ್ಲಿ ಪೂರ್ವ ಏರುಪೇರು …ಸಹ ಸರ್ವೇ ಸಾಮಾನ್ಯ. ಇದು …ಂದ ಆಗುವ ಪರಿಣಾಮ. ಹೃದಯ …ರಲ್ಲಿ ಇವೆಲ್ಲಾ ತೀವ್ರ. ಗರ್ಭಕೋಶ …ಂದ ಮಾನಸಿಕ ಕಿರಿಕಿರಿ, ಸಿಡಿಮಿಡಿ …- ಸಹ ಆಗುತ್ತವೆ. ಎಲ್ಲಾ ಕಾಲ್ …ಮುಸಿದ್ದಾರೆ. ಆದರೆ ಈ ಸಮಸ್ಯೆಗೆ …ಆದರೆ ಮೂಲ ಕಾರಣವಾದ ಸತತ …ಗಳನ್ನು ಸತಾಯಿಸುತ್ತದೆ.



ದೊಡ್ಡ ದೊಡ್ಡ ಐಟಿ ಕಂಪನಿಗಳ (ವಿಪ್ರೊ, ಇನ್ಫೋಸಿಸ್, ಸತ್ಯಂ, ಎಚ್‌ಸಿಎಲ್) ತಮ್ಮ ಬಿಪಿಒ ವಿಭಾಗ ಅಥವಾ ಪ್ರತ್ಯೇಕ ಕಂಪನಿಗಳನ್ನು ಸ್ಥಾಪಿಸಿವೆ. ವಿಪ್ರೊದ 'ಸ್ಪೆಕ್ಟ್ರಾಮೈಂಡ್', ಇನ್ಫೋಸಿಸ್‌ನ 'ಪ್ರೊಜಿಯನ್', ಸತ್ಯಂನ 'ನಿಪುಣ' ಇಂತಹ ಕಂಪನಿಗಳ ಉದಾಹರಣೆಗಳು. ಇವಲ್ಲದೆ ಜನರಲ್ ಇಲೆಕ್ಟ್ರಿಕ್, ಹೆಚ್.ಎಸ್.ಬಿ.ಸಿ. ಅಮೇರಿಕನ್ ಎಕ್ಸ್‌ಪ್ರೆಸ್, ಹೆಚ್.ಇ., ಐಬಿಎಂ. ಸಂತಹ ದೊಡ್ಡ ಕಂಪನಿಗಳು ತಮ್ಮದೇ 'ಬಿಪಿಒ' ವಿಭಾಗಗಳನ್ನು ನಡೆಸುತ್ತವೆ. ಒಳ್ಳೆಯ ಲಾಭ, ವೇಗದ ಬೆಳವಣಿಗೆಯಿಂದಾಗಿ ಬಿಪಿಒ ಕಂಪನಿಗಳು ಈಗಾಗಲೇ ಐಟಿ ಉದ್ಯಮ ನೆಲೆಸಿರುವ ನಗರ ಕೇಂದ್ರಗಳಲ್ಲೇ, ಪ್ರಮುಖವಾಗಿ ನಡೆದಿವೆ. ದೆಹಲಿ-ಮುಂಬಯಿ, ಬೆಂಗಳೂರು, ಹೈದರಬಾದ್, ಚೆನ್ನೈ, ಕೊಲ್ಕತಾ, ಪುಣೆ. ಇತ್ತೀಚೆಗೆ ಇತರ ನಗರಗಳಿಗೆ ಹರಡುವ ಸೂಚನೆಗಳು ಕಾಣುತ್ತಿದೆ. ಸದ್ಯಕ್ಕೆ ಬಿಪಿಒ-ಐಟಿಇಎಸ್ ಉದ್ಯಮದ ಸಿಂಹಪಾಲು ಕಾಲ್ ಸೆಂಟರ್‌ಗಳೇ. ವಹಿವಾಟು ಮತ್ತು ಉದ್ಯೋಗಗಳು ದೊಡ್ಡ ಭಾಗ ಕಾಲ್ ಸೆಂಟರ್ಸ್‌ನಿಂದ ಬರುವಂಥವು.

ಕರ್ನಾಟಕದಲ್ಲಿ ಬಿಪಿಒ-ಐಟಿಇಎಸ್ ಉದ್ಯಮ

ಕರ್ನಾಟಕ ಈ ಉದ್ಯಮದ ತವರೂರು. ಐಟಿ ಸೇವಾಕ್ಷೇತ್ರದಂತೆ. ಮೊದಲ ಬಿಪಿಒ ಕಂಪನಿ ಎಂದು ಹೇಳಲಾದ ಸ್ಪೆಕ್ಟ್ರಾಮೈಂಡ್ (ಈಗ ವಿಪ್ರೊ ಒಡೆತನದ ಕಂಪನಿ)ನ್ನು ರಾಮನ್ ರಾಯ್‌ಸ್ಥಾಪಿಸಿದ್ದು ಬೆಂಗಳೂರಿನಲ್ಲಿ. ಇದಲ್ಲದೆ ಇತರ ಬಿಪಿಒ ಕಂಪನಿಗಳಾದ ಪ್ರೊಜಿಅನ್(ಇನ್ಫೋಸಿಸ್ ಒಡೆತನದ್ದು), ಹೆಚ್.ಎಸ್.ಬಿ.ಸಿ., ಅಮೆರಿಕನ್ ಎಕ್ಸ್‌ಪ್ರೆಸ್, ಹೆಚ್.ಪಿ, ಕನ್ವರ್ಜಿಸ್, ಐಸಿಐಸಿಐ ಒನ್ ಪೋರ್ಟ್, ಎಂಫಸಿಸ್, ಬೆಂಗಳೂರಿನಲ್ಲಿ ನೆಲೆಸಿವೆ. ಮೂರನೇ ಒಂದು ಭಾಗಕ್ಕೂ ಹೆಚ್ಚು ಉದ್ಯೋಗಗಳ, ವಹಿವಾಟು ಕರ್ನಾಟಕದಲ್ಲೇ ಆಗುವುದು. ಇದರಲ್ಲಿ ಸಿಂಹಪಾಲು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರಿಗೆ ಸಣ್ಣ ಭಾಗ ಹೋಗಿದೆ.

ಜಾಗತೀಕರಣ ತಂದ ಹೊಸ 'ಉದ್ಯಮ'

ಜಾಗತೀಕರಣ ಎಲ್ಲರಿಗೂ ಗೊತ್ತಿರುವ ಹಾಗೆ ಮೂರನೇ ಜಗತ್ತಿನ ದೇಶಗಳಲ್ಲಿ ಇರುವ ಉದ್ಯಮಗಳನ್ನು ದುರ್ಬಲಗೊಳಿಸಿ ನಾಶ ಮಾಡುತ್ತದೆ. ಭಾರತದಲ್ಲೂ ಜಾಗತೀಕರಣ ಇದನ್ನೆ ಮಾಡಿ ಈಗಾಗಲೇ ಹಲವು ಕೈಗಾರಿಕಾ ಉತ್ಪಾದನಾ ಕ್ಷೇತ್ರಗಳು ಬಹಳ ದುರ್ಬಲಗೊಂಡಿವೆ ಅಥವಾ ನಾಶವಾಗಿವೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಬಿಪಿಒ ಜಾಗತೀಕರಣವೇ ಹುಟ್ಟಿಹಾಕಿದ 'ಉದ್ಯಮ'. ಆದರೆ ಇದು ನಿಜವಾದ ಅರ್ಥದಲ್ಲಿ 'ಉದ್ಯಮ' ಅಲ್ಲ. ಒಂದು ಸೇವಾಕ್ಷೇತ್ರ. ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿಸಿರುವ ಸೇವಾಕ್ಷೇತ್ರ.

ಈ ಹೊಸ ಉದ್ಯಮದ ಬೆಳವಣಿಗೆ ಉಳಿದು ಕೊಳ್ಳಬಹುದಾದದ್ದೇ?

ಈ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳೇನು? ಸಾಧ್ಯತೆಗಳೇನು? ಈ ಉದ್ಯಮದ ದೊಡ್ಡ ಭಾಗ (ಕಾಲ್‌ಸೆಂಟರ್ ಸೇರಿದಂತೆ ಹಲವು ಭಾಗಗಳು) ಇಂಗ್ಲಿಷ್ (ಮಾತನಾಡ)ಬಲ್ಲ ಶಿಕ್ಷಿತ ಜನರ ಲಭ್ಯತೆ, ಕಡಿಮೆ ವೆಚ್ಚ (ಡಾಲರ್-ರೂಪಾಯಿ ವಿನಿಮಯ ದರ), ಮತ್ತು ಅಮೆರಿಕನ್ - ಯುರೋಪುಗಳ ಹಗಲಿನಲ್ಲಿ (ಅಂದರೆ ನಿಮ್ಮ ರಾತ್ರಿ ಪಾಳಿಯಲ್ಲಿ) ಕೆಲಸ ಮಾಡಲು ಸಿದ್ಧರಿರುವ ಅಗತ್ಯ ಜಾಣ್ಮೆಯ ಜನರ ಲಭ್ಯತೆ ಮೇಲೆ ಮುಖ್ಯವಾಗಿ ಅವಲಂಬಿಸಿದೆ. ಇವೇ ಸಮಸ್ಯೆ-ಸಾಧ್ಯತೆ ಎರಡರ ಮೂಲ ಸಹ.

ನಮ್ಮ ದೇಶದಲ್ಲಿ ಇಂಗ್ಲಿಷ್ ಬಲ್ಲ ಶಿಕ್ಷಿತ ಜನರ ಕೊರತೆ ಇಲ್ಲದಿದ್ದರೂ, ಇಂಗ್ಲಿಷ್ ಮಾತನಾಡಬಲ್ಲ ಅಮೇರಿಕನ್ನರು- ಬ್ರಿಟೀಷರು- ಆಸ್ಟ್ರೇಲಿಯನ್ನರು (ಅವರ ಅಸಂಖ್ಯಾತ ಸ್ಥಳೀಯ ಸೊಗಡು - ಪ್ರಭೇದಗಳ ಜತೆ) ಮಾತನ್ನು ಆಲಿಸಿ ಅರ್ಥ ಮಾಡಿಕೊಳ್ಳಬಲ್ಲವರ ಕೊರತೆ ಇದೆ. ಇದಕ್ಕಾಗಿ ಬಿಪಿಒ ಕಂಪನಿಗಳು ಸಾಮಾನ್ಯವಾಗಿ ತರಬೇತಿ ಕೊಡಬೇಕಾಗುತ್ತದೆ. ಇದನ್ನು ಬಿಪಿಒ ಉದ್ಯಮ ಸಾಕಷ್ಟು ಚೆನ್ನಾಗಿಯೇ ಎದುರಿಸಿದೆ ಎಂದು ಹೇಳಬೇಕು. ಇಂಗ್ಲೀಷ್ ಅಮೇರಿಕನ್ನರ 'ಇಸ್ಟೈಲ್'ನಲ್ಲಿ ಮಾತನಾಡುವುದು ಮಾತ್ರವಲ್ಲ, ಅವರ ಮಾತು ಅರ್ಥ ಮಾಡಿಕೊಳ್ಳಲು ಬೇಕಾದ ಸಾಂಸ್ಕೃತಿಕ ಸಾಮಾಜಿಕ - ಪ್ರಾಕೃತಿಕ ಜ್ಞಾನವನ್ನೂ ಕೊಡಲಾಗುತ್ತದೆ. ನಿಜವಾಗಿಯೂ ಹೇಳಬೇಕಾದರೆ ಬಿಪಿಒ ಉದ್ಯಮ ಇದನ್ನು ಅತಿರೇಕಕ್ಕೆ ತೆಗೆದುಕೊಂಡು ಹೋಗಿ ಸಮಸ್ಯೆಗಳಿಗೆ ಕಾರಣವಾಗಿದೆ. (ವಿವರಗಳಿಗೆ 'ಸೌಮ್ಯ ಸುಸಾನ್ ಆದಾಗ.......' ಬಾಕ್ಸ್ ನೋಡಿ)

'ನಡುರಾತ್ರಿ ಕೂಲಿಗಳು'

ಎಲ್ಲಕ್ಕಿಂತಲೂ ಹೆಚ್ಚಿನ ಗಂಭೀರ ಸಮಸ್ಯೆ ರಾತ್ರಿ ಪಾಳಿಯದ್ದು. ಕಾಲ್‌ಸೆಂಟರ್ ಮತ್ತು ಇತರ ಬಿಪಿಒ ಕೆಲಸಗಳಲ್ಲಿ ಗ್ರಾಹಕರು ಅಥವಾ ಮೂಲ ಕಂಪನಿಯ ಇತರ ವಿಭಾಗಗಳ ಜತೆ ಮಾತನಾಡಬೇಕು - ವ್ಯವಹರಿಸಬೇಕು. ಹೆಚ್ಚಾಗಿ ಅವರ ಹಗಲಲ್ಲಿ, ಅಂದರೆ ನಮ್ಮ ರಾತ್ರಿಯಲ್ಲಿ. ಇದರಿಂದ ಬಹುಪಾಲು ಕೆಲಸ ರಾತ್ರಿ ಪಾಳಿಯಲ್ಲಿ. ಗ್ರಾಹಕರು, ತಮ್ಮ ಕಂಪನಿಯ ವಿಭಾಗಗಳು ಮುಖ್ಯವಾಗಿ ಅಮೆರಿಕ, ಯುರೋಪ್, ಆಸ್ಟ್ರೇಲಿಯಾಗಳಲ್ಲಿ ಇರುವುದರಿಂದ. ಸತತ ರಾತ್ರಿ ಪಾಳಿ ಕೆಲಸ ದೇಹದ ಸ್ವಾಭಾವಿಕ ಕ್ರಮದಲ್ಲಿ ತೀರ ಏರುಪೇರು ಮಾಡುವುದರಿಂದ, ಅಕಾಲಿಕ ನಿದ್ದೆ - ಆಹಾರ ಸೇವನೆಯಿಂದ ತೀವ್ರತರದ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂಬುದು ಹಿಂದಿನಿಂದಲೂ ಗೊತ್ತಿರುವ ಸಂಗತಿ. ಹಿಂದೆ ಯಾವ ಉದ್ಯಮದಲ್ಲೂ ಇಡೀ ಕೆಲಸವೇ ರಾತ್ರಿ ಪಾಳಿಯಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇದ್ದದ್ದಿಲ್ಲ. ಸಾಮಾನ್ಯವಾಗಿ ಅಗತ್ಯ ಸೇವೆ ಅಥವ ಪೂರ್ಣ ಸ್ವಯಂ-ಚಾಲಿತ ಘಟಕಗಳಲ್ಲಿ ಅತ್ಯಗತ್ಯ ಉಸ್ತುವಾರಿಗೆ ಮಾತ್ರ ರಾತ್ರಿ ಪಾಳಿ ಇರುತ್ತಿತ್ತು. ಸೀಮಿತ ಸಂಖ್ಯೆಯಲ್ಲಿ. ಅದೂ ಎರಡು - ಮೂರು ವಾರಕ್ಕೊಮ್ಮೆ ಒಂದು ವಾರ ರಾತ್ರಿ ಪಾಳಿ ಇರುತ್ತಿತ್ತು. ಕಾಲ್ ಸೆಂಟರ್ ಉದ್ಯಮದಲ್ಲಿನ ರಾತ್ರಿ ಪಾಳಿಯ ತೀವ್ರ ಪರಿಣಾಮಗಳು ಒಬ್ಬ ವ್ಯಕ್ತಿ ಮೇಲೆ ಬೀರುವ ಪರಿಣಾಮಗಳು ಈಗಾಗಲೇ ಗೊತ್ತಾಗಿವೆ. ಕಾಲ್ ಸೆಂಟರ್ ಉದ್ಯೋಗದಲ್ಲಿ ಸರಾಸರಿ ಒಂದು ವರ್ಷದ ನಂತರ, ಉದ್ಯೋಗಿಗಳು ಕೆಲಸ ಬಿಡುತ್ತಾರೆ. ಯಾವುದೇ ಅವಧಿಯಲ್ಲಿ ಕೆಲಸ ಬಿಡುವವರ ಸಂಖ್ಯೆ ಶೇಕಡಾ 40-50 ಇದೆ. ಇದು ಈ ಉದ್ಯಮ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಸಹ. ಅಗಾಧ ಜನಸಂಖ್ಯೆ - ನಿರುದ್ಯೋಗ, ಇರುವ ನಮ್ಮ ದೇಶದಲ್ಲಿ ಈ ಉದ್ಯಮಕ್ಕೆ ಹೊಸ 'ಬಕ್ರಾ'ಗಳು ಸಿಗುತ್ತಾರೆ. ಸತತ ರಾತ್ರಿ ಪಾಳಿ ಮಹಿಳೆಯರಲ್ಲಿ ಹಾರ್ಮೋನ್ ವ್ಯತ್ಯಯಗಳನ್ನು ಹಾಗೂ ಇನ್ನಷ್ಟು ಹೆಚ್ಚಿನ ಗಂಭೀರ ಪರಿಣಾಮ ಆರೋಗ್ಯದ ಮೇಲೆ ಬೀರುತ್ತದೆ ಎಂದು ತಿಳಿದು ಬಂದಿದೆ. (ರಾತ್ರಿ ಪಾಳಿ ತರುವ ಹೊಸ ರೋಗ- ಬಾಸ್!-ಬಾಕ್ಸ್ ನೋಡಿ)

ಬಿಪಿಒ ವಿದೇಶಿ ಒಡೆತನದತ್ತ

ಬಿಪಿಒ ಉದ್ಯಮದ ಇನ್ನೊಂದು ನ್ಯೂನ್ಯತೆ ಎಂದರೆ ಅದರ ವಿದೇಶಿ ಒಡೆತನ. ಬಿಪಿಒ ಕಂಪನಿಗಳಲ್ಲಿ ಶೇಕಡಾ 40 ರಷ್ಟು ಬಹುರಾಷ್ಟ್ರೀಯ ಕಂಪನಿಗಳು. ಆದರೆ ಬಿಪಿಒ ವಹಿವಾಟಿನಲ್ಲಿ ಈಗಾಗಲೇ, ಮೂರರಲ್ಲಿ ಎರಡು ಭಾಗ ಬಹುರಾಷ್ಟ್ರೀಯ ಕಂಪನಿಗಳದ್ದು. ಇದು ಇನ್ನೂ ಏರುವ ಲಕ್ಷಣಗಳು ಇವೆ. ಅತಿ ದೊಡ್ಡ ಭಾರತೀಯ ಬಿಪಿಒ ಕಂಪನಿಯಾದ ದಕ್ಷ್ ಐಬಿಎಂ ಕೊಂಡುಕೊಂಡಿತು. ವಿದೇಶಿ ಒಡೆತನ ಇದ್ದರೆ ದೇನು ಎಂದಿರಾ? ಇಲ್ಲಿ ವಹಿವಾಟಿನಲ್ಲಿ ಬರುವ ದೊಡ್ಡ ಲಾಭದ ದೊಡ್ಡ ಭಾಗ ಭಾರತದಲ್ಲಿ ಹೂಡಿಕೆ ಆಗುವುದಿಲ್ಲ. ಆ ಕಂಪನಿಗಳ ಲಾಭ ಹೆಚ್ಚಿಸಲು ಸಹಾಯಕವಾಗುತ್ತದೆ.

ರಾತ್ರಿ ಪಾಳಿ ಮಾತ್ರವಲ್ಲ, ಇನ್ನೂ ಹಲವು ರೀತಿಯಲ್ಲಿ ಕಾಲ್ ಸೆಂಟರ್ - ಬಿಪಿಒ ಉದ್ಯಮ ಅಲ್ಲಿನ ಉದ್ಯೋಗಿಗಳನ್ನು 'ನಡು ರಾತ್ರಿ ಕೂಲಿ'ಯಾಗಿಸಿದೆ. ವೇತನ ಸರಾಸರಿಯಾಗಿ ಉತ್ತಮವಾಗಿದೆ. ಉದ್ಯೋಗಿಗಳಿಗೆ ಸಾರಿಗೆ ಸವಲತ್ತು ಕೊಡುತ್ತಾರೆ (ಇದು ರಾತ್ರಿ ಪಾಳಿ, ಕಾಲ್ ಸೆಂಟರ್‌ಗಳು ದೂರವಿರುವುದರಿಂದ ಅನಿವಾರ್ಯ ಎನ್ನುವುದನ್ನು ಮರೆಯುವಂತಿಲ್ಲ) ಆದರೆ ಹಲವು ಕಾರ್ಮಿಕರ/ ಉದ್ಯೋಗಿಗಳ ಹಕ್ಕು ರಕ್ಷಣೆಗೆ ಇರುವ ಕಾನೂನುಗಳನ್ನು ಉದ್ಯಮ ಉಲ್ಲಂಘಿಸುತ್ತಿದೆ. ಅದನ್ನು ಈಗ ಕಾನೂನು ತಿದ್ದುಪಡಿಗಳಿಂದ ಸಂಭಾಳಿಸಲಾಗಿದೆ.

ದಿನಕ್ಕೆ ಎಂಟು ಗಂಟೆ ಮಿತಿ, ತುಂಡು ಪಾಳಿಗಳು, ರಾಷ್ಟ್ರೀಯ ರಜಾ ದಿನ - ಹಬ್ಬದ ದಿನಗಳಲ್ಲಿ ಕಡ್ಡಾಯ ರಜಾ, ಓವರ್‌ಟೈಮ್ - ಇತ್ಯಾದಿಗಳಿಗೆ ಅನ್ವಯವಾಗುವ ಕಾನೂನನ್ನು ಗಾಳಿಗೆ ತೂರಲಾಗಿದೆ. ಅಥವಾ ಬದಲಿಸಲಾಗಿದೆ. ದಿನಕ್ಕೆ ಪೂರೈಸಬೇಕಾದ ಕರೆಗಳನ್ನು ಸತತವಾಗಿ ಏರಿಸುತ್ತಾ ಎರಡು ಕರೆಗಳ ನಡುವಣ ಅಂತರ ಕಡಿಮೆ ಮಾಡುತ್ತಾ ಹೋಗುವುದು - ಕೆಲಸದ ಒತ್ತಡ ಏರಿಸುವುದು ನಡೆಯುತ್ತಿದೆ. ಕೆಲಸದ ಪರಿಸ್ಥಿತಿ ಮತ್ತು ಇತರ ಹಕ್ಕುಗಳ ಬಗ್ಗೆ ಚರ್ಚೆ, ಸಾಮೂಹಿಕ ಚೌಕಾಶಿಯ ಅಭಾವ - ಕಾಲ್‌ಸೆಂಟರ್ ಉದ್ಯೋಗಿಗಳನ್ನು 'ನಡುರಾತ್ರಿ ಕೂಲಿ'ಗಳಾಗಿಸಿದ ಇತರ ಕಾರಣಗಳು. ಕಾಲ್‌ಸೆಂಟರ್‌ಗಳಲ್ಲಿ



ಮೂರನೇ ಎರಡು ಭಾಗ ಮಹಿಳೆಯರು ದುಡಿಯುತ್ತಿದ್ದು, ಲೈಂಗಿಕ ಕಿರುಕುಳದಂತಹ ಸಮಸ್ಯೆ ಸಹ ವ್ಯಾಪಕವಾಗಿ ಇದೆ.

ಬಿಪಿಒ ಉದ್ಯಮ - ಮುಂದೇನು?

ಇವೆಲ್ಲದರ ನಡುವೆ ಬಿಪಿಒ ಒಂದು ಉದ್ಯಮವಾಗಿ ದಾಪುಗಾಲಿನಲ್ಲಿ ಮುನ್ನಡೆಯುತ್ತಿದೆ. ಬಿಪಿಒ ಕಂಪನಿಗಳು ಅದರ ಮಾಲಕರಿಗೆ ಒಳ್ಳೆ ಲಾಭ ಗಳಿಸುತ್ತಿವೆ. ಜಗತ್ತಿನ ದೊಡ್ಡ ಬಹುರಾಷ್ಟ್ರೀಯ

ಪುಟ 8 ಕ್ಕೆ

ಸೌಮ್ಯ ಸುಸಾನ್ ಆದಾಗ....

ಕಾಲ್‌ಸೆಂಟರ್‌ಗೆ ಕರೆ ಮಾಡುವ ಅಮೆರಿಕನ್ನರಿಗೆ - ಬ್ರಿಟಿಷರಿಗೆ ತಮಗೆ ಅಮೇರಿಕನ್ - ಬ್ರಿಟಿಷರೇ ಉತ್ತರ ಕೊಡುತ್ತಿದ್ದಾರೆ ಎಂಬ 'ಭ್ರಮೆ' ಹುಟ್ಟಿಸಲು ಉದ್ಯೋಗಿಗಳಿಗೆ ಅಮೆರಿಕನ್ ಉಚ್ಚಾರಣೆ ಮಾತ್ರವಲ್ಲ, ಅಮೆರಿಕನ್ ಹೆಸರು, ಮತ್ತು ವ್ಯಕ್ತಿತ್ವ ಸಹ ಹೊರಿಸಲಾಗುತ್ತಿದೆ. ಬಿಪಿಒ ಉದ್ಯಮ ಸೌಮ್ಯಳಿಗೆ ಅಮೆರಿಕನ್ 'ಠಸ್‌ಪುಸ್' ಇಂಗ್ಲೀಷ್ ಕಲಿಸುವುದು ಮಾತ್ರವಲ್ಲ, ಅವಳನ್ನು 'ಸೂಸೇನ್' ಮಾಡಿಬಿಡುತ್ತದೆ. 'ಸೂಸೇನ್'ಗೊಂಡು ಅಮೇರಿಕನ್ ಊರು ಬಾಯ್‌ಫ್ರೆಂಡ್‌ನ ಹೆಸರು, ಕಳೆದ ವಾರಾಂತ್ಯದಲ್ಲಿ ಹೋದ 'ಡಿಸ್ಕೊ', ಇಷ್ಟವಾದ ತಿಂಡಿ/ಡ್ರಿಂಕ್ಸ್, ಇಷ್ಟವಾದ ಹೀರೋ, ರಾಕ್ ಸಂಗೀತಕಾರ ಈ ರೀತಿ ಬೇರೆ ವ್ಯಕ್ತಿತ್ವವೇ ಸೃಷ್ಟಿಸಿಬಿಡುತ್ತದೆ. ಕಾಲ್ ಸೆಂಟರ್‌ಗೆ ಕರೆ ಮಾಡಿದ ಗ್ರಾಹಕರು ಹರಟೆಗಿಳಿದರೆ ಸೌಮ್ಯ ತಾನು 'ಸೂಸಾನ್' ಆಗಿ ಉತ್ತರ ಕೊಡುತ್ತಾಳೆ. ಹಗಲಿನ 'ಸೌಮ್ಯ', ರಾತ್ರಿ 'ಸೂಸೇನ್' ಆಗಿ ಬಿಡುತ್ತಾಳೆ. ಬರಬರುತ್ತಾ 'ಸೌಮ್ಯ'ಳಿಗೆ ತಾನು ಸೌಮ್ಯ ಯಾವಾಗ, ಸೂಸೇನ್ ಯಾವಾಗ (ಬಹುಶಃ ಹಗಲು ಯಾವುದು ರಾತ್ರಿ ಯಾವುದು ಅಂತ ಸಹ) ಎಂಬ ಗೊಂದಲ ಬಂದು ಬಿಡುತ್ತದೆ. ಇದು ಮೊದಲ ನೋಟಕ್ಕೆ ಕಾಣುವಂಥದ್ದಕ್ಕಿಂತ ಗಂಭೀರ ಸ್ವರೂಪದ ಸಮಸ್ಯೆ ಆಗಿದೆ. ಈ 'ದ್ವಂದ್ವ' ಪರಿಹಾರ ಹುಡುಕುತ್ತಾ ಮೂರ್ತಿ 'ಸೂಸಾನ್' ಆದವರೂ ಇದ್ದಾರೆ. ಎರಡೂ ತಾಕಲಾಟ ತಾಳಲಾರದೆ ಕೆಲಸ ಬಿಟ್ಟವರೂ ಇದ್ದಾರೆ.

ಬಾಗೇಪಲ್ಲಿ ಕೊತ್ತಕೋಟೆ

ಕೊಲೆಗಡುಕ ಕಾಂಗ್ರೆಸ್‌ನಿಂದ ಕಾಂ. ರಘು ಕೊಲೆ

ಸಿಪಿಐ(ಎಂ) ಪಕ್ಷದ ಮುನ್ನಡೆಯನ್ನು ಸಹಿಸದೆ ಹತಾಶರಾಗಿರುವ ಕಾಂಗ್ರೆಸ್ ಪಕ್ಷದ ನಾಯಕರು ಬಾಗೇಪಲ್ಲಿ ತಾಲೂಕಿನಲ್ಲಿ ಕೊಲೆಗಡುಕ ರಾಜಕೀಯಕ್ಕೆ ಇಳಿದಿದ್ದಾರೆ. ಅತ್ಯಂತ ಸೌಮ್ಯ ಸ್ವಭಾವದ ಜನಾನುರಾಗಿ, ದಿಟ್ಟತನದ ನಾಯಕ ಕಾಂ. ರಘುರವರ ಕಗ್ಗೊಲೆಯನ್ನು ಸುಫಾರಿ ಕೊಲೆಗಡುಕರಿಂದ ಮಾಡಿಸಿದ್ದಾರೆ. ಕಾಂ. ರಘುರವರನ್ನು ಕೊಂದ ಮಾತ್ರಕ್ಕೆ ಕಮ್ಯುನಿಸ್ಟ್ ಆಂದೋಲನ ನಿಂತು ಹೋಗುವುದೇ? ಇಲ್ಲ. ಹತ್ಯೆಯ ಸಂಚುಗಳ ಬಗ್ಗೆ ವರದಿ

ಬಾಗೇಪಲ್ಲಿ ತಾಲ್ಲೂಕಿನ ಕೊತ್ತಕೋಟೆ ಗ್ರಾಮಪಂಚಾಯತಿ ಪ್ರಗತಿ ಪರ ಚಳುವಳಿ ಎದ್ದುಬಂದ ಪ್ರದೇಶ. ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅತ್ಯಂತ ಬಲಿಷ್ಟವಾಗಿ ಬೆಳೆಯುತ್ತಿರುವ ಪಂಚಾಯತಿ. ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳಲ್ಲಿಯೂ ಪಕ್ಷದ ಶಾಖೆಗಳು, ರೈತ ಸಂಘ, ಯುವಜನ ಸಂಘಟನೆ, ಕೃಷಿಕೂಲಿಕಾರರ ಸಂಘಟನೆಗಳು ಬೆಳೆಯುತ್ತಿವೆ. ಇದನ್ನು ಸಹಿಸಲಾರದ ಕಾಂಗ್ರೆಸ್ ಪಕ್ಷದ ನಾಯಕರು ಇಡೀ ಪಂಚಾಯತಿಯ ಜನತೆಯನ್ನು ಭಯಭೀತಿಗೊಳಿಸಲು ಸಿಪಿಐ(ಎಂ)ನ ಪ್ರಮುಖ ಕಾರ್ಯಕರ್ತರನ್ನು ಕೊಲ್ಲುವ ಕಾರ್ಯಕ್ರಮವನ್ನು ಹಾಕಿಕೊಂಡು ದೌರ್ಜನ್ಯವನ್ನು ಎಸಗುವ ಮುಖಾಂತರ ಪಕ್ಷದ ಮುನ್ನಡೆಯನ್ನು ಕುಂಠಿತ ಗೊಳಿಸಲುವಿಫಲ ಪ್ರಯತ್ನ ನಡೆಸುತ್ತಿದ್ದಾರೆ.

ಅದರ ಪರಿಣಾಮವಾಗಿಯೇ ಕಳೆದ ಜೂನ್ 16 ರಂದು ರಾತ್ರಿ ಸುಮಾರು 12 ಗಂಟೆ ಸಮಯದಲ್ಲಿ ಪಕ್ಷದ ಕೊತ್ತಕೋಟೆ ಗ್ರಾಮ ಶಾಖೆಯ ಅತ್ಯಂತ ನಿಷ್ಟ ಸದಸ್ಯ, ಸೌಮ್ಯ ಸ್ವಭಾವದ ಮುಗ್ಧ ಮನಸ್ಸಿನ ಕಾಂ. ರಾಘವೇಂದ್ರ ಪ್ರಸಾದರನ್ನು ಕಾಂಗ್ರೆಸ್ ಕೊಲೆಪಾತಕಿಗಳು ಸುಫಾರಿ ಕೊಲೆಗಾರರಿಂದ ಕೊಚ್ಚಿ ಕೊಲೆ ಮಾಡಿಸಿದ್ದಾರೆ. ಸೆಖೆಯ ತಾಪಕ್ಕೆ ಮನೆಯ ಮೇಲೆ ಮಲಗಿದ್ದ ಕಾಂ. ರಾಘವೇಂದ್ರರವರನ್ನು ಸುಮಾರು ನಾಲ್ಕೈದು ಜನ ಕೊಲೆಗಾರರು ಮಚ್ಚಿನಿಂದ ಹೊಡೆದು ಕಡಿದಿದ್ದಾರೆ. ಕಾಲು ಹಿಡಿದು ಅಂಗಲಾಚಿದ ಹೆಂಡತಿಯನ್ನು ಸಹ ಮಾರಕಾಸ್ತ್ರಗಳಿಂದ ಗಾಯಗೊಳಿಸಿ ಹೋಗಿದ್ದಾರೆ.

ಅಂದುರಾತ್ರಿಯೇ ಕಾಂ. ರಾಘವೇದ್ರ ಪ್ರಸಾದ್(ರಘು) ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಯಿತು. ಆದರೆ ತೀವ್ರ ಏಟುಗಳಿಂದ ರಕ್ತಸಿಕ್ತವಾಗಿದ್ದ ಸಂಗಾತಿಯನ್ನು ಬದುಕಿಸಲು ಒಂಭತ್ತು ದಿನ ಹೋರಾಟ ನಡೆಸಿದರೂ ಪ್ರಜ್ಞೆ ಕೂಡ ಇಲ್ಲದೆ ಕೊನೆಗೆ ಜೂನ್ 24 ರಂದು ಸಾವು ಬರಸಿಡಿಲಿನಂತೆ ಅಪ್ಪಳಿಸಿ ಅಪಹರಿಸಿಬಿಟ್ಟಿತು.

ಅಂದೇ ರಾತ್ರಿ 10 ಗಂಟೆಗೆ ಕೊತ್ತಕೋಟೆಯ ಗ್ರಾಮಕ್ಕೆ ಕಾಂ. ರಘುರವರ ಶವ ಸೇರಿದಾಗ ಶೋಕಸಾಗರದಲ್ಲಿ ಗ್ರಾಮ ಮುಳುಗಿಹೋಯಿತು. ಈ ಅಮಾನವೀಯ ಕೃತ್ಯವನ್ನು ಖಂಡಿಸುತ್ತಾ ಕೊಲೆಪಾತಕ ಕಾಂಗ್ರೆಸ್ ಪಕ್ಷಧ ಮುಖಂಡರಿಗೆ ಜನತೆಯು ಇಡಿ ಶಾಪ ಹಾಕಿದರು.
ಇಪ್ಪತ್ತೈದರಂದು ಮಧ್ಯಾಹ್ನ 12 ಗಂಟೆಗೆ ಸಾವಿರಾರು ಜನರ ಎದುರು ಅಂತ್ಯಸಂಸ್ಕಾರ ಮಾಡಿ ಹೋರಾಟಗಾರನಿಗೆ ವಿದಾಯಹೇಳಲಾಯಿತು.

ದುಃಖತಪ್ತ ಕುಟುಂಬವನ್ನು ಸಾಂತ್ವನಗೊಳಿಸಲು ಬಾಗೆಪಲ್ಲಿ ಕ್ಷೇತ್ರದ ಸಿಪಿಐ(ಎಂ) ಶಾಸಕರು, ಜಿಲ್ಲಾ ಕಾರ್ಯದರ್ಶಿಗಳೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು, ರಾಜ್ಯ ಸಮಿತಿ ಸದಸ್ಯರಾದ ಕಾಂ. ವೆಂಕಟಸ್ವಾಮಿರೆಡ್ಡಿಯವರು, ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಮುಖಂಡರು ಹಾಜರಿದ್ದರು.

ಉತ್ತಮ ಸಂಗಾತಿ

ಕಾಂ. ರಘು ಅತ್ಯಂತ ಸೌಮ್ಯ ಸ್ವಭಾವದ ಸರಳ ವ್ಯಕ್ತಿ. ಪ್ರಗತಿಪರ ಚಳುವಳಿಗೆ ಆಕರ್ಷಿತರಾಗಿ ಸಿಪಿಐ(ಎಂ) ಪಕ್ಷವನ್ನು ಸೇರಿದವರು. ಪಕ್ಷದ ನಿಷ್ಟಾವಂತ ಕಾರ್ಯಕರ್ತನಾಗಿ ಇಡೀ ಗ್ರಾಮಪಂಚಾಯತಿಯಲ್ಲಿ ಬೆಳೆಯುತ್ತಿದ್ದ ಸಂಗಾತಿ. ಕೇವಲ 36 ವರ್ಷಗ ರಘು ಕೊತ್ತಕೋಟ ಗ್ರಾಮಪಂಚಾಯತ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಪಕ್ಷದ ಹೋರಾಟದಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸುತ್ತಾ, ಮುಂದಿನ ದಿನಗಳಲ್ಲಿ ಪಕ್ಷದ ಉತ್ತಮ ನಾಯಕರಲ್ಲಿ ಒಬ್ಬರಾಗುವ ಲಕ್ಷಣಗಳಿದ್ದ ಸಂಗಾತಿ. ಇಡೀ ಗ್ರಾಮ ಪಂಚಾಯತಿಯಲ್ಲಿ ಪಕ್ಷವನ್ನು ಮುನ್ನಡೆಸುವ, ಹೋರಾಟದ ಕಿಚ್ಚು ಇದ್ದ ಸಂಗಾತಿ. ಇಂತಹ ಭರವಸೆಯ ಸಂಗಾತಿ ರಘುವನ್ನು ಮುಗಿಸಬೇಕೆಂದು ಗ್ರಾಮದ ಕಾಂಗ್ರೆಸ್ ಗೂಂಡಾಗಳು ಸಂಚುಹೂಡಿದ್ದರು. ಸಂಚಿನ ಭಾಗವಾಗಿ ಆಂಧ್ರದ ಸುಫಾರಿ ಕೊಲೆಗಾರರಿಂದ ಕೊಲೆ ಮಾಡಿಸಲು ಮೂವತ್ತು ಸಾವಿರ ರೂ.ಗಳಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಸುಮಾರು ಒಂದು ತಿಂಗಳ ಕಾಲ ಹೊಂಚು ಹಾಕಿದ್ದ ಕೊಲೆಗಡುಕರು ರಘುವಿನ ದಿನಚರಿಯನ್ನು ಅರಿತರು. ರಾತ್ರಿ ಸೆಖೆಯಿಂದಾಗಿ ತನ್ನ ಕುಟುಂಬದ ಜೊತೆ ಮನೆಯ ಮೇಲೆ ಮಲಗುತ್ತಿದ್ದನ್ನು ಕಂಡರು. ಜೂನ್ 15 ರಂದು ರಾತ್ರಿ ಸುಮಾರು 2 ಗಂಟೆ ಸಮಯದಲ್ಲಿ ಪಾತಕಿಗಳು ರಘುವಿನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದರು. ಹೆಂಡತಿ ಮಕ್ಕಳನ್ನು ತಬ್ಬಲಿ ಮಾಡಿದರು. ಪಕ್ಷದ ಪ್ರಮುಖ ಸಂಗಾತಿಯನ್ನುಇಲ್ಲದಂತೆ ಮಾಡಿದರು.

ಎಚ್ಚರಿಕೆ

ಕೊಲೆಗಳಿಂದ, ದೌರ್ಜನ್ಯದಿಂದ ಸಿಪಿಐ(ಎಂ) ಪಕ್ಷವನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಎನ್ನುವುದನ್ನು ಕಾಂಗ್ರೆಸ್ ಪಕ್ಷದ ದುಷ್ಟರು ಅರಿಯಬೇಕು. ಕಾಂ.ರಘುರವರು ಯಾವ ಅಶಯಗಳನ್ನು ಇಟ್ಟುಕೊಂಡು ಕಮ್ಯುನಿಸ್ಟ್ ಪಕ್ಷದಲ್ಲಿ ಶ್ರಮಿಸುತ್ತಿದ್ದರೋ ಅದೇ ಆಶಯಗಳನ್ನು ಮುಂದುವರಿಸುತ್ತೇವೆ ಎಂದು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಸಾವಿರಾರ ಜನರ ಒಕ್ಕೊರಲಿನ ಧ್ವನಿಯಾಗಿತ್ತು.

ಗೂಂಡಾ ಸಂಸತಿ ಎದುರಿಸಿಯೇ ಸಿದ್ಧ

ಕಾಂಗ್ರೆಸ್ ಪಕ್ಷದ ನೀಚ ಸಂಸತಿ, ಹೊಸದಲ್ಲದಿದ್ದಾಗ್ಯೂ ತಾಲ್ಲೂಕಿನಾದ್ಯಂತ ಮತ್ತೊಮ್ಮೆ ಗೂಂಡಾ ಸಂಸತಿಯನ್ನು ತೋರಿಸಿದ್ದಾರೆ. ಕಾಂಗ್ರೆಸ್ ಇಲ್ಲಿ ಹೇಳಹೆಸರಿಲ್ಲದೆ ಆಗುತ್ತದೆಂಬ ಭಯ ಆವರಿಸಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದೌರ್ಜನ್ಯವೆಸಗಲು ಪಿತೂರಿ ನಡೆಸುತ್ತಿದ್ದಾರೆ. ದೇಶದ್ರೋಹಿ ಎಡಿಎಟಿಎಸ್ ಎಂಬ ಸ್ವಯಂಸೇವಾ ಸಂಘಟನೆಯ ಆಶ್ರಯ ಪಡೆದು ಪ್ರಗತಿಪರ ಚಳುವಳಿಗಾರರನ್ನು ಹತ್ತಿಕ್ಕಲು ಕಂಡುಕೊಂಡ ಅತ್ಯಂತ ಹೇಡಿ ದಾರಿ ಇದ್ದ ಕಾಂಗ್ರೆಸ್ ಇಂತಹ ಪಿತೂರಿಗಳನ್ನು ನಡೆಸಿದೆ. ಹೇಗೆ ಇದನ್ನು ಎದುರಿಸಬೇಕೆಂದು ಸಿಪಿಐ(ಎಂ) ಪಕ್ಷಕ್ಕೆ ಗೊತ್ತಿದೆ. ಜನರ ಸಮಸ್ಯೆಗಳನ್ನು ಎತ್ತಿಕೊಂಡು ಜನರನ್ನು ಹೋರಾಟಕ್ಕೆ ಇಳಿಸುವ ಮುಖಾಂತರ ಕಾಂಗ್ರೆಸ್ ಗೂಂಡಾ ಸಂಸತಿಗೆ ತಕ್ಕ ಉತ್ತರ ಹೇಳಬೇಕಾಗುತ್ತದೆ. ಇಂತಹ ಹತ್ಯಾ ರಾಜಕೀಯವನ್ನು ಎದುರಿಸಲು ಜನತೆಯ ಪ್ರಜಾಸತ್ತಾತ್ಮಕ ರಾಜಕೀಯ ಹೋರಾಟವನ್ನು ಬಲಪಡಿಸಬೇಕೆಂದು ಸಿಪಿಐ(ಎಂ) ನಿರ್ಧರಿಸಿದೆ. ಹುತಾತ್ಮ ಸಂಗಾತಿ ಕಾಂ. ರಘುರವರ ತ್ಯಾಗ ಬಲಿದಾನ ವ್ಯರ್ಥವಾಗಲಾರದು. ಜನತೆಯೇ ಅದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ.

ದೈವತ್ವ

ದೈವತ್ವ ಬೇರೆಡೆಗೆ ಹುಡುಕಾಡಬೇಡಿ
ದೈವತ್ವ ಎಂಬುದೇ ಮನುಷ್ಯತ್ವ ನೋಡಿ
ಮಾನವತೆಗಿಂತಲೂ ಹಿರಿದಾದುದಿಲ್ಲ
ಸುಮ್ಮನೇ ಮರುಳಾಗಿ ಕಡಬೇಡಿರೆಲ್ಲ


- ವಿಡಂಬಾರಿ

..............ನಡುರಾತ್ರಿ ಕೂಲಿಗಳು

ಕಂಪನಿಗಳು ತಮ್ಮ ಮುಖ್ಯ ವಹಿವಾಟಿನ ಭಾಗವಲ್ಲದ ಎಲ್ಲಾ ವಿಭಾಗಗಳ ಕೆಲಸವನ್ನು ಹೊರಗುತ್ತಿಗೆಗೆ ಕೊಡಲಾರಂಭಿಸಿದ್ದು, ಇದು ಪ್ರತಿ ವರ್ಷ ಶೇಕಡಾ 75ರ ದರದಲ್ಲಿ ಏರುತ್ತಿದೆಯಂತೆ. ಭಾರತ ಇದರಲ್ಲಿ ಸದ್ಯಕ್ಕೆ ಅರ್ಧಕ್ಕೂ ಹೆಚ್ಚು ಭಾಗ ಹೊಂದಿದ್ದು, ಇದು ಇನ್ನಷ್ಟು ಏರಲಿದೆ ಅಂತ ಗಾರ್ಟ್‌ನರ್ ಎಂಬ ಆರ್ಥಿಕ ಸರ್ವೇಕ್ಷಣ/ ವಿಶ್ಲೇಷಣ ಸಂಸ್ಥೆ ಹೇಳಿದೆ. ಗಾಬ್‌ರ ಅಧ್ಯಯನ ಬರಹದ ಪ್ರಕಾರ ಹೊರಗುತ್ತಿಗೆ ಕೊಡಲ್ಪಡುವ ಬಿಪಿಒ ವಹಿವಾಟು 2008ರ ಹೊತ್ತಿಗೆ 24 ಶತಕೋಟಿ ಡಾಲರ್‌ಗಳಷ್ಟು ಆಗಿ ಅದರಲ್ಲಿ 13 ಶತಕೋಟಿ ಡಾಲರು ಭಾರತ ಗಿಟ್ಟಿಸುವ ಅವಕಾಶ ಇದೆಯಂತೆ. ಅಂದರೆ ಈಗಿನ ಎರಡುವರೆ ಪಟ್ಟು ವಹಿವಾಟು ಈ ಉದ್ಯಮ ಸಾಧಿಸಲಿದೆಯಂತೆ. 2008ರ ಹೊತ್ತಿಗೆ 10 ಲಕ್ಷ ಜನರಿಗೆ ಈ 'ಉದ್ಯಮ' ಉದ್ಯೋಗ ಒದಗಿಸುತ್ತದೆ ಎಂದು ಗಾರ್ಟನರ್ ಅಂದಾಜು ಮಾಡಿದೆ.

ಗಾರ್ಟನರ್ ಅಥವಾ ಇಂತಹ ಇತರ ಸಂಸ್ಥೆಗಳ 'ಭವಿಷ್ಯವಾಣಿ' ಹಲವು ಬಾರಿ ತೀರಾ ಹುಸಿಯಾಗಿದ್ದು ಇದೆ. ಅಲ್ಲದೆ ಅವರು ಈ ಭವಿಷ್ಯವಾಣಿಯಂತೆ ಹಾಕಿಕೊಂಡಿರುವ ಅಂದಾಜುಗಳು ಸುಳ್ಳಾಗಬಹುದು. ಇಂಡಿಯಾಕ್ಕೆ ಈಗ ಇರುವ ಮುನ್ನಡೆ ಮಾಯವಾಗಬಹುದು. ಈಗಾಗಲೇ ಈ ಉದ್ಯಮದಲ್ಲಿ ಇಂಡಿಯಾಕ್ಕೆ ಇರುವ ಮುನ್ನಡೆಯ ಕಾರಣಗಳನ್ನು (ಇಂಗ್ಲೀಷ್‌ಶಿಕ್ಷಿತ ಜನ, ಬೇಕಾದ ಸೀಮಿತ ಜಾಣ್ಮೆ - ತರಬೇತಿ) ಇತರ ದೇಶಗಳು ಅನುಸರಿಸಿ ಸರಿಗಟ್ಟಬಹುದು, ಇದಲ್ಲದೆ ಡಾಲರ್ ಬೆಲೆ ಕಡಿಮೆಯಾಗುತ್ತಿದ್ದು, ಉದ್ಯಮದ ವೆಚ್ಚ ಜಾಸ್ತಿಯಾಗುತ್ತಿದ್ದು - ಎಲ್ಲೋ ಈಗಿನ ಲೆಕ್ಕಾಚಾರಗಳು ತಲೆಕೆಳಗಾಗಬಹುದು.

ಇದಲ್ಲದೆ ಬಿಪಿಒ ಉದ್ಯಮ ಐಟಿ ಅಥವಾ ಇತರ ರಫ್ತು- ಆಧಾರಿತ ಉದ್ಯಮಗಳು ಒಂದು ಕಡೆ ಬಹಳ ತೆಳುವಾದ ನೆಲೆಯ ಮೇಲೆ ನಿಂತಿರುತ್ತದೆ. ಇನ್ನೊಂದು ಕಡೆ ದೇಶದ ಸಮಗ್ರ ಆರ್ಥಿಕ - ಸಾಮಾಜಿಕ ಬೆಳವಣಿಗೆಗೆ ಇವುಗಳ ಕೊಡುಗೆ ಬಹಳ ಸೀಮಿತ. ಇವು ಹಲವು ಅನವಶ್ಯ ವಿಕೃತಿಗಳನ್ನು ತರುತ್ತವೆ. (ರಾತ್ರಿ ಪಾಳಿ, ಕಾರ್ಮಿಕರ ಹಕ್ಕುಗಳ ಮೊಟಕುಗೊಳಿಸುವಿಕೆ, ಸಾಂಸ್ಕೃತಿಕ ಗೊಂದಲ). ಇದಲ್ಲದೆ ಈ ಉದ್ಯಮಕ್ಕೆ ಹಲವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಈಗ ಮಾಡುತ್ತಿರುವಂತೆ ಅತ್ಯಂತ ಹೆಚ್ಚಿನ ಆದ್ಯತೆ ಕೊಡುವುದು, ಉತ್ತಮ ನೀತಿ ಎಂದು ಹೇಳಲು ಸಾಧ್ಯವಿಲ್ಲ. ಬಿಪಿಒ ಉದ್ಯಮ ಬಿಟ್ಟರೆ ಬೇರೆ ಕೈಗಾರಿಕೆ, ಆರ್ಥಿಕ ಕ್ಷೇತ್ರಗಳಲ್ಲಿ ಹೂಡಿಕೆ ಬೇಕಾಗಿಲ್ಲ. ಬಿಪಿಒ ಬೇಕಾದ ಉದ್ಯೋಗ ಸೃಷ್ಟಿಸುತ್ತದೆ ಎಂಬ ನೀತಿ ಖಂಡಿತ ಸರಿಯಾದದ್ದಲ್ಲ. ಬಿಪಿಒ ಸೇರಿದಂತೆ ಬರಿಯ ಐಟಿ ಸೇವಾ ಕ್ಷೇತ್ರವೇ ಭಾರತದ ಆರ್ಥಿಕ -ಸಾಮಾಜಿಕ ಬೆಳವಣಿಗೆ ಸಮಸ್ಯೆ ಬಗೆಹರಿಸಬಲ್ಲುದು ಎಂಬ ಹಳೆಯ ಮೂಢನಂಬಿಕೆಯನ್ನು ಬಿಪಿಒ ಇನ್ನೂ ಗಟ್ಟಿ ಮಾಡುತ್ತಿದೆ. ಬಿಪಿಒ ಕ್ಷೇತ್ರದ ವಿಕೃತಿಗಳು, ಸಮಸ್ಯೆಗಳ ಬಗ್ಗೆ ಎಚ್ಚರ ಮೂಡಿಸುವುದು, ಸಮಗ್ರ ಆರ್ಥಿಕ - ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದ ಅದರ ಪಾತ್ರ ವಿಶ್ಲೇಷಿಸುವುದು ಅತ್ಯಗತ್ಯ.



ಜನರ ಒಡನಾಡಿ ಆನಂದ ದೇವಾಡಿಗ ಇನ್ನಿಲ್ಲ

ಕುಂದಾಪುರ ಪುರಸಭೆಯ ಮಾಜಿ ಕೌನ್ಸಿಲರ್ ಆಗಿರುವ ಕಾಮ್ರೇಡ್ ಆನಂದ ದೇವಾಡಿಗ (53) ಅವರು ಅಲ್ಪಕಾಲದ ಅನಾರೋಗ್ಯದ ನಿಮಿತ್ತ ಜೂನ್ 17 ರಂದು ನಿಧನ ಹೊಂದಿದರು. ಆನಂದ ದೇವಾಡಿಗರವರು ಈ ಹಿಂದೆ ಸಿಪಿಐ(ಎಂ) ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದು ರಿಕ್ಷಾ ಕಾರ್ಮಿಕರ ಸಂಘಟನೆಯನ್ನು ಸ್ಥಾಪನೆ ಮಾಡಿದವರಲ್ಲಿ ಒಬ್ಬರು. ಇವರು ಕುಂದಾಪುರ ಪುರಸಭೆಯಲ್ಲಿ ಎರಡುಬಾರಿ ಸಿಪಿಐ(ಎಂ) ನಿಂದ ಆಯ್ಕೆಯಾಗಿದ್ದರು. ರೈತ, ಕಾರ್ಮಿಕರ ಹಾಗೂ ಜನಸಾಮನ್ಯರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ಸಾಮಾಜಿಕವಾಗಿ ಜನರ ಕಷ್ಟಸುಖಗಳಲ್ಲಿ ತನ್ನನ್ನು ತೊಡಗಿಸಿಕೊಂಡವರು. ಅವರ ಅಕಾಲಿಕ ನಿಧನಕ್ಕೆ ಪಕ್ಷದ ತಾಲ್ಲೂಕು ಸಮಿತಿಯು ಸಂತಾಪ ವ್ಯಕ್ತಪಡಿಸಿದೆ ಮತ್ತು ಅವರ ಕುಟುಂಬಕ್ಕೆ ಸಾಂತ್ವನ ವ್ಯಕ್ತಪಡಿಸಿದೆ.

ಮದುವೆಯಾಗಬೇಕಿರುವ ಯುವತಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪಿಗಳನ್ನು ಬಂಧಿಸಿ ನಿಷ್ಠುರ ಕ್ರಮ ಜರುಗಿಸುವ ಬದಲು ಅತ್ಯಾಚಾರಿಯೊಂದಿಗೆ ಕೈಜೋಡಿಸಿ ರಕ್ಷಣೆಗೆ ನಿಂತಿರುವ ನಾಚಿಕೆಗೇಡಿನ, ಅಮಾನುಷ ಪ್ರಕರಣ ಶಿಡ್ಲಘಟ್ಟದಲ್ಲಿ ನಡೆದಿದೆ. ಜನ ರೊಚ್ಚಿಗೆದ್ದಾಗ ಲಾಠಿ ಚಾರ್ಜ್, ಗೋಲಿಬಾರ್ ಮಾಡಿದ ಪೊಲೀಸರು ಎಂಜಲು ಕಾಸಿಗೆ ಶರಣಾಗಿ, ಸಾರ್ವಜನಿಕ ಸೇವೆ ಬದಲು ಕ್ರಿಮಿನಲ್‌ಗಳ ಸೇವಕರಾದರು. ಒಂದು ಕೇಸ್ ಹಾಕಿದ್ದು ಹೋರಾಟದ ನಂತರವೇ. ಇಲ್ಲಿ ನಾಗರೀಕ ಸರ್ಕಾರ ಎಂಬುದು ಇದೆಯೇ? ಒಟ್ಟು ಘಟನೆಯ ಕುರಿತು ವರದಿ ಇಲ್ಲಿದೆ.

ಶಿಡ್ಲಘಟ್ಟ

ಅತ್ಯಾಚಾರಿಗಳಿಗೆ ಪೊಲೀಸರೇ ರಕ್ಷಕರು

ಮದುವೆ ಮಾಡಿಕೊಂಡು ತನ್ನ ಗಂಡನೊಂದಿಗೆ ನೂರು ವರ್ಷ ಬಾಳಬೇಕೆಂಬ ಅಸಂಖ್ಯಾತ ಕನಸುಗಳನ್ನು ಹೊತ್ತು, ವಿಕೃತಿಕಾಮಿಗಳ ದುಷ್ಕೃತ್ಯಕ್ಕೆ ಬಲಿಯಾಗಿ ಮಾನಸಿಕವಾಗಿ, ದೈಹಿಕವಾಗಿ ಜರ್ಝರಿತಗೊಂಡು ಅಬಲೆಯಾದ ಯುವತಿಯ ಹೃದಯ ವಿದ್ರಾವಕ ಘಟನೆ ಇಂದಿನ ನಾಗರಿಕಸಮಾಜ, ವ್ಯವಸ್ಥೆ ತಲೆ ತಗ್ಗಿಸುವಂತಾಗಿದೆ.

ಹಣ ಮತ್ತು ರಾಜಕೀಯ ಹಿನ್ನಲೆಯ ಪ್ರಭಾವವು ಅತ್ಯಾಚಾರಿಗಳನ್ನು ಕಾನೂನಿನಿಂದ ರಕ್ಷಿಸುತ್ತದೆ ಎನ್ನುವುದಕ್ಕೆ ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಯುವತಿಯ ಅತ್ಯಾಚಾರ ಪ್ರಕರಣ ನಮ್ಮ ಮುಂದಿರುವ ಜೀವಂತ ಸಾಕ್ಷಿಯಾಗಿದೆ. ಪ್ರಕರಣದಲ್ಲಿ ತಾವು ಕೈಗೊಳ್ಳಬೇಕಾದ ಕರ್ತವ್ಯವನ್ನು ಮರೆತ ಪೊಲೀಸರ ಬೇಜವಾಬ್ದಾರಿ ಮತ್ತು ನಿಷ್ಕ್ರಿಯತೆಯ ಕುರುಡು ಜಾಣತನವು ಇಲಾಖೆಯ ಮಾನ ಮರ್ಯಾದೆಯನ್ನು ನಡುಬೀದಿಯಲ್ಲಿ ಹರಾಜು ಹಾಕುವಂತಾಗಿದೆ. ಕಾಂಚಾಣದ ಝಣ ಝಣದಲ್ಲಿ, ಎಸದ ಎಂಜಲಿಗೆ ಅವರ ಪಂಚೇಂದ್ರಿಯಗಳು ನಿಷ್ಕ್ರಿಯವಾಗಿವೆ.

ಅಪಹರಣ - ಅತ್ಯಾಚಾರ

ತನ್ನ ಮದುವೆ ನಿಶ್ಚಯವಾಗಿದ್ದ ಯುವಕನೊಂದಿಗೆ ಜೂನ್ 18ರಂದು ಮಾತುಕತೆ ನಡೆಸುತ್ತಿದ್ದ 17 ವರ್ಷದ ಯುವತಿಯನ್ನು ಪಟ್ಟಣದ ಕಾರ್ಮಿಕ ನಗರದ ಅಮ್ಜದ್(30) ಎಂಬಾತನು ನಿಮ್ಮ ಮನೆಯಲ್ಲಿ ಹೇಳುವುದಾಗಿ ಬೆದರಿಸಿ, ಆಕೆಯನ್ನು ತನ್ನಬೈಕ್‌ನಲ್ಲಿ ಕೂರಿಸಿಕೊಂಡು ಚಿಂತಾಮಣಿ ಮಾರ್ಗವಾಗಿ ಕೊಂಡೊಯ್ದಿದ್ದಾನೆ. ಯುವತಿ ತನ್ನನ್ನು ಕಾಪಾಡಿ ಏನೂ ಮಾಡಬೇಡಿ ಎಂದು ಪರಿಪರಿಯಾಗಿ ವಿನಂತಿಸಿದರೂ ಬಿಟ್ಟಿಲ್ಲ. ತನ್ನ ಸ್ನೇಹಿತರನ್ನು ಸ್ಥಳಕ್ಕೆ ಕರೆಸಿಕೊಂಡ ಈ ಕಾಮಾಂಧ ಅಮ್ಜದ್ ಆಕೆಯನ್ನು ಕಾರಿನಲ್ಲಿ ಬಲವಂತವಾಗಿ ಎತ್ತಿಹಾಕಿಕೊಂಡು ಹೋಗಿ ಶಿಡ್ಲಘಟ್ಟ-ಚಿಂತಾಮಣಿ ಮಾರ್ಗ ಮಧ್ಯೆ ಮೃಗಗಳಂತೆ ವರ್ತಿಸಿದ್ದಾರೆ. ತೀವ್ರವಾದ ದೈಹಿಕ ಹಿಂಸೆಯನ್ನು ನೀಡಿದ್ದಾರೆ. ಈ ಪ್ರಕರಣದಿಂದ ವಿದ್ಯುತ್ ಶಾಕ್ ಹೊಡೆದಂತಾದ ಯುವತಿ ಮಾನಸಿಕವಾಗಿ, ದೈಹಿಕವಾಗಿ ಜರ್ಝರಿತಗೊಂಡಿದ್ದಾಳೆ. ತನ್ನ ಇಡೀ ಜೀವನದಲ್ಲಿ ಎಂದೂ ಚೇತರಿಸಿಕೊಳ್ಳದಂತಹ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾಳೆ.

ದೂರು ಸ್ವೀಕರಿಸದ ಪೊಲೀಸರು - ದೌರ್ಜನ್ಯ ಮಾಡಿದ ಅತ್ಯಾಚಾರಿ

ಇಷ್ಟಾದರೂ ಆರೋಪಿಗಳು ನಿರಾತಂಕವಾಗಿ ರಾಜಾರೋಷವಾಗಿ ಪಟ್ಟಣದಲ್ಲಿ ಸುತ್ತಾಡುತ್ತಿದ್ದಾರೆ. ಯುವತಿಯ ಸಂಬಂಧಿಕರು ಪಟ್ಟಣದ ಠಾಣೆಯಲ್ಲಿ ದೂರು ನೀಡಲು ಹೋದರೆ ಪೊಲೀಸರು ಬೇಜವಾಬ್ದಾರಿತನದಿಂದ ವರ್ತಿಸಿದ್ದಾರೆ. ಆಕೆಯ ಸಂಬಂಧಿಕರು ದೂರು ನೀಡಿದ್ದನ್ನೆ ನೆಪವಾಗಿಟ್ಟುಕೊಂಡ ಆರೋಪಿಗಳು ಅವರ ಮನೆಯ ಮೇಲೆ ದಾಂಧಲೆ ಮಾಡಿದ್ದಾರೆ, ಮಾರಕಾಯುಧಗಳಿಂದ ಹಲ್ಲೆ ಮಾಡಿದ್ದು ಇದರಿಂದ ಶಹಜಾದ್ ಖಾನ್(57)ರವರು ತೀವ್ರವಾಗಿ ಗಾಯಗೊಂಡು, ಸಾವು ಬದುಕಿನ ನಡುವೆ ವಿಲವಿಲ ಒದ್ದಾಡುತ್ತಿದ್ದಾರೆ.

ಪೊಲೀಸರು ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಕುಪಿತಗೊಂಡ ಸಾರ್ವಜನಿಕರು ಆರೋಪಿಯ ಮನೆ ಮುಂದೆ ಜಮಾಯಿಸಿದ್ದಾರೆ. ಕುಪಿತರಾಗಿದ್ದಾರೆ, ಅತ್ಯಾಚಾರಿಯನ್ನುಬಂಧಿಸಿ ಎಂದು ಮನೆಗೆ ನುಗ್ಗಿದ್ದಾರೆ. ಇಷ್ಟಾದರೂ ಏನೂ ನಡೆದಿಲ್ಲ ಎಂಬಂತೆ ಮೈಮರೆತಿದ್ದ ಪೊಲೀಸರು ತತ್‌ಕ್ಷಣ ಕಾರ್ಯಪ್ರವೃತ್ತರಾಗಿದ್ದಾರೆ. ಆರೋಪಿ ಅಮ್ಜದ್‌ನನ್ನು ಬಂಧಿಸು ಅಲ್ಲ, ಅವನ ಮನೆ ಬಳಿ ಜಮಾಯಿಸಿದ್ದ ಜನರ ಗುಂಪನ್ನು ಚದುರಿಸಲು. ಆ ಸಂದರ್ಭದಲ್ಲಿ ಅಲ್ಲೆ ಇದ್ದ ಆರೋಪಿಗಳನ್ನು ಪೊಲೀಸರು ಯಾವುದೇ ಕಾರಣಕ್ಕೂ ಬಂಧಿಸಲಿಲ್ಲ, ಮೇಲಾಗಿ ಕುಪಿತಗೊಂಡಿದ್ದ ಜನತೆಯಿಂದ ಅವರನ್ನು ರಕ್ಷಿಸಿ ಅನಾಯಾಸವಾಗಿ ತಪ್ಪಿಸಿಕೊಳ್ಳಲು ಅವರೇ ಸ್ವತಃ ನೆರವಾಗಿದ್ದಾರೆ.

ಅತ್ಯಾಚಾರ ನಡೆದು ಮೂರು ದಿನವಾದರೂ ಪೊಲೀಸರು ದೂರನ್ನು ದಾಖಲಿಸಿಕೊಂಡಿಲ್ಲ. ಈ ಕುರಿತು ಪೊಲೀಸ್ ಅಧಿಕಾರಿ ರಂಗಸ್ವಾಮಿಯನ್ನು ವಿಚಾರಿಸಿದರೆ "ರೀ ಬಿಡ್ರಿ, ಆಕೆಯನ್ನು ಚಿಂತಾಮಣಿ ಮಾರ್ಗವಾಗಿ ಕರೆದುಕೊಂಡು ಹೋಗಿದ್ದಾರೆ ಕರೆ ತಂದಿದ್ದಾರೆ, ಅಷ್ಟೇ. ಏನು ಮಾಡಿದ್ದಾರೆಂಬುದನ್ನು ಬಿಡಿಸಿ ಹೇಳಬೇಕೇನು" ಎಂದು ದರ್ಪದಿಂದ ಗದರಿಸಿದ್ದಾರೆ.

ಯುವತಿ ಮತ್ತು ಅವರ ಸಂಬಂಧಿಕರ ಕೂಗು ಅರಣ್ಯರೋಧನವಾಗಿದೆ. ದಿಕ್ಕು ಕಾರಣದಂತಾದ ಅವರ ನೆರವಿಗೆ ಆಗಮಿಸಿದ್ದು ಎಸ್.ಎಫ್.ಐ., ಜನವಾದಿ ಮಹಿಳಾ ಸಂಘಟನೆ, ಅಂಗನವಾಡಿ ಮತ್ತು ಅಕ್ಷರ ದಾಸೋಹ ನೌಕರರ ಸಂಘಟನೆಗಳು.

ಕ್ರಮವಹಿಸದಿದ್ದರೆ ಬಿಡೋಲ್ಲ - ಸಂಘಟನೆಗಳ ಸಮರ

ಜನವಾದಿ ಮಹಿಳಾ ಸಂಘಟನೆ ನಾಯಕಿ ಕಾಂ! ಗೀತಾ ಮತ್ತು ಸಿಪಿಎಂ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಎಸ್.ಎಫ್.ಐ. ಮುಖಂಡರಾದ ಮೌಲಾಸಾಬ್ ಮತ್ತು ಎನ್.ಎಸ್.ಚಂದ್ರಕಲಾರವರುಗಳ ನೇತೃತ್ವದಲ್ಲಿ ನೂರಾರು ಮಂದಿ ಜಮಾವಣೆಗೊಂಡು ಜೂನ್ 20ರಂದು ರಾತ್ರಿ 11 ಗಂಟೆವರೆಗೆ ಪೊಲೀಸ್ ಠಾಣೆಯ ಮುಂದೆ ಧರಣಿ ನಡೆಸಿದರು. ಅದರ ಫಲವಾಗಿ ನಂತರ ಪೊಲೀಸರು ಪ್ರಕರಣವನ್ನು




ಪೊಲೀಸರ ಲಾಠಿ ಪ್ರಹಾರದಲ್ಲಿ ಗಾಯಗೊಂಡವರು

ದಾಖಲಿಸಿದ್ದಾರೆ.

21ರಂದು ಬೆಳಿಗ್ಗೆ ಸಹ ಧರಣಿಯನ್ನು ಮುಂದುವರೆಸಿದರು. ಯಾವುದೇ ಬಲಿಷ್ಠವಾದ ಕ್ರಿಮಿನಲ್ ಮೊಕದ್ದಮೆಯನ್ನು ಆರೋಪಿಗಳ ವಿರುದ್ಧ ಪೊಲೀಸರು ದಾಖಲಿಸಿರಲಿಲ್ಲ. ಅತ್ಯಾಚಾರ, ಮಾರಣಾಂತಿಕವಾಗಿ ನಡೆಸಿರುವ ಹಲ್ಲೆಗಳು, ಬೆದರಿಕೆಗಳು ಅವರಿಗೆ ಕ್ರಿಮಿನಲ್ ಅಪರಾಧಗಳಂತೆಯೇ ಕಂಡಿಲ್ಲದಿರುವುದು ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆಯೇ ತಲೆ ತಗ್ಗಿಸುವಂತೆ ಮಾಡಿದೆ. ಅತ್ಯಾಚಾರಿ ಹಾಗೂ ಪೊಲೀಸರ ನಡುವಿನ ನಂಟಿನ ಪ್ರಮಾಣವನ್ನು ತೋರಿಸುತ್ತದೆ.

ಇಷ್ಟಾದರೂ ಜಿಲ್ಲಾ ರಕ್ಷಣಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ. ಮಹಿಳಾ ಸಂಘಟನೆಗಳು ತಮ್ಮ ಹೋರಾಟವನ್ನು ಆರಂಭಿಸುತ್ತಿದ್ದಂತೆ ಎಚ್ಚೆತ್ತುಕೊಂಡ ರಕ್ಷಣಾಧಿಕಾರಿಗಳು ಅನಿವಾರ್ಯವಾಗಿ ಶಿಡ್ಲಘಟ್ಟಕ್ಕೆ ಭೇಟಿ ನೀಡಿದ್ದಾರೆ. ಈ ಮಧ್ಯೆ ಎಸ್‌ಎಫ್‌ಐ ನೇತೃತ್ವದಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳ ಕಛೇರಿ ಮುಂದೆ ಸಾವಿರಾರು ಮಂದಿ



ವಿದ್ಯಾರ್ಥಿನಿಯರು-ಯುವತಿಯರು ಧರಣಿ ನಡೆಸಿ ಪ್ರತಿಭಟನೆಯನ್ನು ಕೈಗೊಂಡರು. ಪ್ರಕರಣವು ರಾಜ್ಯಾದ್ಯಂತ ಪ್ರಚಾರವಾದ ನಂತರ ಡಿಐಜಿ ಶಂಕರ್ ಬಿದರಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಬಂದು ಹೋದಾಗ ಆದದ್ದೇನೆಂದರೆ ಗೋಲಿಬಾರ್ ಮಾತ್ರ.

ಕ್ರಿಮಿನಲ್ ದಾಖಲೆಗಳು

ಅಮ್ಜದ್ ಒಬ್ಬ ಕುಖ್ಯಾತ ರೌಡಿಯಾಗಿದ್ದು ಅವನ ವಿರುದ್ಧ ಈಗಾಗಲೆ ಹಲವಾರು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ. ಹಿಂದೊಮ್ಮೆ ನಡೆದಿದ್ದ ಹೆಣ್ಣು ಮಕ್ಕಳ ಮಾರಾಟ ದುಷ್ಕೃತ್ಯದಲ್ಲಿ ಅತ್ಯಾಚಾರ ಪ್ರಕರಣದ ಆರೋಪಿ ಹಾಗೂ ಅಮ್ಜದ್‌ನ ಸ್ನೇಹಿತನು ಭಾಗಿಯಾಗಿದ್ದು ಇವನ ವಿರುದ್ಧದ ಮೊಕದ್ದಮೆ ಇನ್ನೂ ವಿಚಾರಣೆಯಲ್ಲಿದೆ. ಹೆಣ್ಣು ಮಕ್ಕಳ ಮಾರಾಟ ಜಾಲದಲ್ಲಿ ಆರೋಪಿ ಅಮ್ಜದ್‌ನ ಕೈವಾಡವಿರುವುದಾಗಿ ಶಂಕಿಸಲಾಗಿದೆ ಕಾನೂನು ಚೌಕಟ್ಟನ್ನು ಮೀರಿ ನ್ಯಾಯಾಂಗ, ಪೊಲೀಸ್ ವ್ಯವಸ್ಥೆಯನ್ನು ನಿರ್ಲಕ್ಷಿಸಿ ಆತ-ಆತನ ಗ್ಯಾಂಗ್ ನಡೆಸುತ್ತಿರುವ ಸಮಾಜಘಾತುಕ ಕೃತ್ಯಗಳು ಶಿಡ್ಲಘಟ್ಟದಲ್ಲಿ ಸರ್ಕಾರಿ ವ್ಯವಸ್ಥೆ ಇದೆಯೇ ಎಂಬ ಶಂಕೆಯನ್ನು ಎಲ್ಲರಲ್ಲೂ ಮೂಡಿಸುತ್ತದೆ.

ಬಾಗೇಪಲ್ಲಿ ಶಾಸಕರು ಹಾಗೂ ಸಿಪಿಎಂನ ಜಿಲ್ಲಾ ಕಾರ್ಯದರ್ಶಿಗಳೂ ಆದ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಮಹಿಳಾ ಜನವಾದಿ ಸಂಘಟನೆಯ ಗೀತಾ, ಎಸ್‌ಎಫ್‌ಐನ ಚಂದ್ರಕಲಾ, ಮೌಲಾಸಾಬ್ ಮತ್ತಿತರರು ಜೂನ್ 19ರಂದು ರಾತ್ರಿ 12 ಗಂಟೆಯವರೆಗೂ ಠಾಣೆಯ ಮುಂದೆ ಧರಣಿ ಮತ್ತಿತರ ಪ್ರತಿಭಟನೆಗಳನ್ನು ನಡೆಸದಿದ್ದರೆ ಪೊಲೀಸರು ಆರೋಪಿಗಳ ವಿರುದ್ಧ ಕನಿಷ್ಟ ದೂರನ್ನು ಸಹ ಸ್ವೀಕರಿಸುವುದು ಅನುಮಾನವಾಗುವಷ್ಟು ಪ್ರಭಾವಶಾಲಿಗಳಾಗಿದ್ದಾರೆ ಈ ಅತ್ಯಾಚಾರಿಗಳು.

ಅಮ್ಜದ್ ಒಬ್ಬ ಸಮಾಜಘಾತುಕ, ಗೂಂಡಾ ಮತ್ತು ರೌಡಿ ಮಾತ್ರವಾಗಿರದೆ ಒಬ್ಬ ಹಣ ಲೇವಾದೇವಿಗಾರನಾಗಿರುವುದು ಅವನ ಪ್ರಭಾವಕ್ಕೆ ಪ್ರಮುಖ ಕಾರಣವಾಗಿದೆ ಎಂಬುದು ಬಹಿರಂಗ ಸತ್ಯವಾಗಿದೆ. ಈತನು ಸಂಕಷ್ಟದಲ್ಲಿರುವ ಯಾರಾದರೂ ಹಣವನ್ನು ಕೇಳಿದರೆ ನೀಡಿ ಮನಸ್ಸಿಗೆ ಬಂದಂತೆ ಬಡ್ಡಿಯನ್ನು ವಿಧಿಸುತ್ತಾನೆ. ಅಂದರೆ ಶೇ.10-20ರಿಂದ ಇನ್ನೂ ಹೆಚ್ಚಿನ ಬಡ್ಡಿಯನ್ನು ವಸೂಲಿ ಮಾಡುತ್ತಾನೆ. ಬಡ್ಡಿ ಮತ್ತು ಅಸಲಿನ ಹಣ ನೀಡುವುದು ಒಂದು ದಿನ ವಿಳಂಬವಾದರೂ ದುಪ್ಪಟ್ಟು ಅಸಲು ಬಡ್ಡಿಯನ್ನು ವಸೂಲಿ ಮಾಡುತ್ತಾನೆ. ಇಲ್ಲದಿದ್ದಲ್ಲಿ ಅವರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ನಡೆಸುತ್ತಾನೆ. ಅತ್ಯಾಚಾರಕ್ಕೆ ಒಳಗಾಗಿರುವ ಹುಡುಗಿಯ ತಂದೆಗೆ ಇದೇ ರೀತಿ ಹಣ ನೀಡಿ ಅವರಿಂದ ಹಿಂತಿರುಗಿಸಲು ಸಾಧ್ಯವಾಗದಿದ್ದಾಗ ಅವರ ಮನೆಯನ್ನು ದೌರ್ಜನ್ಯವಾಗಿ ತನ್ನ ಹೆಸರಿಗೆ ಬರೆಸಿಕೊಂಡು ಅವರನ್ನು ಬೀದಿಪಾಲು ಮಾಡಿದ್ದಾನೆ. ಇಂತಹ ಹಲವಾರು ದುಷ್ಕೃತ್ಯಗಳು ಈತನ ನಿತ್ಯಕಾಯಕವಾಗಿದ್ದರೂ ಅವನನ್ನು ನಿಯಂತ್ರಿಸಲು ಪೊಲೀಸರು ಕ್ರಮಕೈಗೊಳ್ಳದಿರುವುದು ಅವರ ಹೇಡಿತನ ಮತ್ತು ಶಾಮೀಲುತನಕ್ಕೆ ಸಾಕ್ಷಿಯಾಗಿದೆ. ಮಾತ್ರವಲ್ಲದೆ ಇಲಾಖೆಯನ್ನು ರೌಡಿಗಳಿಗೆ ಒತ್ತೆಯಿಟ್ಟಂತಾಗಿದೆ. ಆರೋಪಿ ಅಮ್ಜದ್ ಇಲ್ಲಿನ ಗ್ರಾಮಾಂತರ ಮತ್ತು ಪುರ ಪೊಲೀಸ್ ಠಾಣೆಗಳ ಎಲ್ಲ ಸಿಬ್ಬಂದಿಗೆ ಹಣಕಾಸು ನೆರವನ್ನು ಒದಗಿಸಿದ್ದಾನೆ. ಪೊಲೀಸರ ಹಣಕಾಸಿನ ಎಲ್ಲ ಅಗತ್ಯಗಳನ್ನು ಇವನೆ ಪೂರೈಸುವುದರಿಂದ ಈತ ಪೊಲೀಸ ಠಾಣೆ ಕಾನೂನು ಮತ್ತು ಅಲ್ಲಿನ ಅಧಿಕಾರಿಗಳನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದಾನೆ. ಅವನು ಎಸೆಯುವ ಎಂಜಲು ಕಾಸಿಗೆ ಕೈಚಾಚುವ ಪೊಲೀಸರು ತಮ್ಮ ಸ್ವಾಭಿಮಾನವನ್ನು, ಕರ್ತವ್ಯವನ್ನು ಮರೆತು ಅವನ ನಾಯಿಗಳಂತೆ ವರ್ತಿಸುತ್ತಿದ್ದಾರೆ. ಆದ ಕಾರಣದಿಂದಲೇ ಅವನು ಇನ್ನೂ ಕಾನೂನಿನಿಂದ ತಲೆ ಮರೆಸಿಕೊಳ್ಳಲು ಸಾಧ್ಯವಾಗಿದೆ ಎಂದು ಸಾರ್ವಜನಿಕರ ಖಚಿತ ಹೇಳಿಕೆಯಾಗಿದೆ.

ಎಲ್ಲಿದ್ದಾರೆ ಶಾಸಕರು?

ಶ್ರೀರಾಮರೆಡ್ಡಿ ಅವರು ಠಾಣೆಯಲ್ಲಿ ನಡೆಸಿದ ಒತ್ತಾಯ, ಧರಣಿಗಳ ಪೂರ್ಣ ವರದಿಗಳನ್ನು ಮತ್ತು ಅಲ್ಲಿ ನಡೆಯುವ ಎಲ್ಲ ಆಗುಹೋಗುಗಳನ್ನು ಅವನಿಗೆ ಕ್ಷಣದಿಂದ ಕ್ಷಣಕ್ಕೆ ಪ್ರತಿ ವಿಷಯವನ್ನು ರವಾನಿಸುವ ಪೊಲೀಸ್ ಚೇಲಾಗಳಿದ್ದಾರೆ. ಇಷ್ಟು ಮಾತ್ರವಲ್ಲದೆ ಆರೋಪಿ ಪ್ರಭಾವಯುತ ರಾಜಕೀಯ ಪಕ್ಷದ ಬೆಂಬಲಿಗನಾಗಿದ್ದಾನೆ. ಮಾಜಿ ಸಚಿವರಾದ ಇವರ ರಾಜಕೀಯ ಗಾಡ್‌ಫಾದರ್‌ಗಳು ಇವನನ್ನು ಪರೋಕ್ಷವಾಗಿ ರಕ್ಷಿಸುವುದರಲ್ಲಿ ಪೂರ್ಣಾವಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳ ಮೇಲೆ ಅವರು ಹೇರುತ್ತಿರುವ ಒತ್ತಡಗಳು ಅಮಾಯಕ ಹೆಣ್ಣು ಮಗುವಿನ ಜೀವನವನ್ನು ಮರುಭೂಮಿಯಲ್ಲಿ ಕೂಡಿಹಾಕಿದಂತಾಗಿದೆ. ಮಾನ ಮರ್ಯಾದೆ ಬಿಟ್ಟು, ಕೇವಲ ಓಟಿನಾಸೆಗೆ ರಾಜಕಾರಣ ಮಾಡುತ್ತಾ ಆರೋಪಿಗಳನ್ನು ರಕ್ಷಿಸಲು ಮುಂದಾಗಿರುವ ಇವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪ್ಪಿತಪ್ಪಿಯೂ ಒಂದು ಮಾತನ್ನೂ ಇದುವರೆಗೂ ಆಡಿಲ್ಲ. ಇನ್ನೂ ಶಿಡ್ಲಘಟ್ಟ ಕ್ಷೇತ್ರದ ಹಾಲಿ ಶಾಸಕರಾದ ಮುನಿಶಾಮಪ್ಪನವರು ಅಬಲೆಯ ರಕ್ಷಣೆಗಿಲ್ಲದಂತಾಗಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಏನೂ ನಡೆದೇ ಇಲ್ಲ ಎಂಬಂತೆ ಇದ್ದಾರೆ. ಬಡ ಕುಟುಂಬದ ಅಮಾಯಕ ಹೆಣ್ಣುಮಗುವಿನ ರಕ್ಷಣೆಗೆ ನಿಂತಿರುವ ಏಕೈಕ ಪಕ್ಷ ಸಿಪಿಎಂ ಪಕ್ಷವಾಗಿದೆ. ಹಂತ ಹಂತವಾಗಿ ಹೋರಾಟಗಳನ್ನು ರೂಪಿಸಲು ಪಕ್ಷವು ಮುಂದಾಗಿದೆ. ಎಷ್ಟೇ ಕಷ್ಟವಾದರೂ ಸರಿ ಯುವತಿಗೆ ನ್ಯಾಯ ದೊರಕಿಸಲು ಹೋರಾಟವನ್ನು ಕೈಗೊಳ್ಳುವುದಾಗಿ ನಿರ್ಧರಿಸಲಾಗಿದೆ. ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ, ಡಿವೈಎಫ್‌ಐ ಅಂಗನವಾಡಿ ಮತ್ತು ಅಕ್ಷರದಾಸೋಹ ನೌಕರರ ಸಂಘಟನೆಗಳು ಹೋರಾಟ ತೀವ್ರಗೊಳಿಸಲು ನಿರ್ಧರಿಸಿವೆ.

28 ವರ್ಷಗಳ ಸತತ ಆಡಳಿತ ಆದರೂ ಜನರು ಎಡರಂಗದತ್ತ

ಜೂನ್ 21. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಸತತ ಆಡಳಿತ ನಡೆಸುತ್ತಾ ಬಂದಿರುವ 28 ವರ್ಷಗಳ ಆಚರಣೆಯ ನೆನಪಿಗೆ ಎಂಬಂತೆ ಒಂದು ಕೋಟಿಗೂ ಮಿಗಿಲು ಜನಸಂಖ್ಯೆಯನ್ನು ಹೊಂದಿರುವ ಕೊಲ್ಕತ್ತ ನಗರದ ಮಹಾನಗರಪಾಲಿಕೆ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸ್ಪಷ್ಟ ಬಹುಮತ ಸಾಧಿಸಿದೆ. ಒಟ್ಟು 141 ವಾರ್ಡುಗಳ ಪೈಕಿ 74 ವಾರ್ಡುಗಳಲ್ಲಿ ಗೆದ್ದ ಎಡರಂಗದಲ್ಲಿ ಸಿಪಿಐ(ಎಂ)ನ ಸಿಂಹಪಾಲು 62. ಕಳೆದ ಐದು ವರ್ಷಗಳಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿಕೂಟದ ದುರಾಡಳಿತದಿಂದ ಬೇಸತ್ತ ಜನ ಅಭಿವೃದ್ಧಿಯ ಪರ, ಸಾಮರಸ್ಯದ ಸಂಕೇತವಾಗಿರುವ ಎಡರಂಗಕ್ಕೆ ಬಹುಮತ ನೀಡಿ ಗೆಲ್ಲಿಸಿದರು.

ಕೊಲ್ಕತ್ತ ನಗರಕ್ಕೆ ಹತ್ತಿರದಲ್ಲಿರುವ ಬಿಧಾನ್ ನಗರ (ಸಾಲ್ಟ್‌ಲೇಕ್) ದಲ್ಲಿಯೂ ಎಡರಂಗವು ಅಧಿಕಾರವನ್ನು ಉಳಿಸಿಕೊಂಡಿರುವುದು ಮಾತ್ರವಲ್ಲದೆ 23 ಸ್ಥಾನಗಳ ಪೈಕಿ 18 ಸ್ಥಾನಗಳನ್ನು ಗೆಲ್ಲುವುದರ ಮೂಲಕ ಭರ್ಜರಿ ಬಹುಮತ ಸಾಧಿಸಿದೆ.

ಕೊಲ್ಕತ್ತ ನಗರದ ಚುನಾವಣೆ ದೇಶದೆಲ್ಲೆಡೆ ಜನರ ಗಮನ ಸೆಳೆದಿತ್ತು. ಕಳೆದ ವರ್ಷದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಭರ್ಜರಿ ಜಯಗಳಿಸಿದ ಎಡರಂಗ ಇತ್ತೀಚೆಗೆ ನಡೆದ ಮುನಿಸಿಪಾಲಿಟಿ ಚುನಾವಣೆಗಳಲ್ಲೂ ಬಹುತೇಕ ಕಡೆಗಳಲ್ಲಿ ವಿಜಯ ಸಾಧಿಸಿತ್ತು. ಪುನಃ ಕೊಲ್ಕತ್ತ ನಗರ ಮತ್ತು ಬಿಧಾನ ನಗರ ಗಳಲ್ಲಿ ಜಯಗಳಿಸುವ ಮೂಲಕ ಜನತೆಯ ಬೆಂಬಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ನಗರ ಪ್ರದೇಶಗಳಲ್ಲಿ ಇದೆ ಎಂಬುದನ್ನು ಇನ್ನೊಮ್ಮೆ ಸಾಬೀತು ಪಡಿಸಿದೆ.

ಸರಕಾರಿ ವಿರೋಧಿ ಅಲೆ ಇಲ್ಲ: ಜಾಗತೀಕರಣ, ಉದಾರೀಕರಣ ನೀತಿ ಜಾರಿಗೆ ಬಂದ ಬಳಿಕ ಬಂಡವಾಳಶಾಹಿ ಪಕ್ಷಗಳ ನೇತೃತ್ವದಲ್ಲಿ ಎಲ್ಲಾ ಸರ್ಕಾರಗಳು ಜನಪ್ರಿಯತೆ ಕಳೆದುಕೊಳ್ಳುತ್ತಿರುವಾಗ ಎಡರಂಗದ ಸರ್ಕಾರ ಮುನ್ನಡೆ ಸಾಧಿಸಿರುವುದು ವಿರೋಧಿಗಳು ಮೂಗಿನ ಮೇಲ ಬೆರಳಿಡುವಂತೆ ಆಗಿದೆ. ಪಶ್ಚಿಮ ಬಂಗಾಳ ಸರ್ಕಾರದ ಜನಪರ ನೀತಿಯಿಂದಾಗಿ ವಿಶೇಷವಾಗಿ ಅತ್ಯಂತಹಿಂದುಳಿದ ಬಡಜನರ ಪರ ನೀತಿಯಿಂದ ಇದು ಸಾಧ್ಯವಾಗಿದೆ. ಎಲ್ಲಾ ಅಧಿಕಾರಗಳು ಕೇಂದ್ರಸರ್ಕಾರದಲ್ಲೇ ಕೇಂದ್ರೀಕೃತಗೊಂಡಿದ್ದರೂ ತನ್ನ ಇತಿಮಿತಿಯೊಳಗೆ ಸಾಕಷ್ಟು ಕೆಲಸವನ್ನು ಮಾಡಿದೆ.



ಬೆಂಗಳೂರಿನಂತಹ ನಗರಗಳಲ್ಲಿ ದಿನ ಬೆಳಗಾದರೆ, ಕೊಲೆ, ಸುಲಿಗೆಗಳು ನಡೆಯುತ್ತಿದ್ದರೆ, ರಸ್ತೆ ಅಪಘಾತ, ವಿದ್ಯುತ್ ಅಪಘಾತದಿಂದ ಜನ ಸಾಯುತ್ತಿದ್ದರೆ, ಜನನಿಬಿಡ ಕೊಲ್ಕತ್ತದಲ್ಲಿ ಕಾನೂನು, ಸುವ್ಯವಸ್ಥೆ ಉತ್ತಮಗೊಂಡಿದೆ. ಕಳೆದ 3 ದಶಕಗಳಲ್ಲಿ ಕೊಲ್ಕತ್ತ ನಗರವು ಭಾರತದಲ್ಲೇ ಅತ್ಯಂತ ಸುರಕ್ಷಿತವಾದ ನಗರ ಎಂದು ಹೆಸರುವಾಸಿಯಾಗಿದೆ. ಕೋಮುವಾದಿ ರಾಜಕೀಯಕ್ಕೆ ಇಲ್ಲಿ ಅವಕಾಶವಿಲ್ಲ.

ಹಾಗೆ ನೋಡಿದರೆ, ಕೊಲ್ಕತ್ತ ನಗರದಲ್ಲಿ ಬಂಗಾಳಿ ಭಾಷಿಕರು ಕೇವಲ ಶೇ 38 ಮಾತ್ರ. ಅಂದರೆ ಹೊರ ರಾಜ್ಯಗಳಿಂದ ಬಂದವರು ಇಲ್ಲಿ ಮೆಜಾರಿಟಿ. ಆದರೂ ಇಲ್ಲಿ ಜಾತಿ ಜಗಳವಾಗಲೀ, ಕೋಮುಜಗಳವಾಗಲೀ ಇಲ್ಲ. ಮುಂಬೈ ಮಹಾನಗರ ಬೃಹತ್ತಾಗಿ ಬೆಳೆದಿದ್ದರೂ ಕೋಮುಗಲಭೆಗಳು ಆಗಾಗ ಸಂಭವಿಸುತ್ತಿರುವುದು ಮಾತ್ರವಲ್ಲದೆ, ಮಣ್ಣಿನ ಮಕ್ಕಳಿಗೆ ಉದ್ಯೋಗ ಘೋಷಣೆಗೆ ಬೆಂಬಲ ಸಿಗುತ್ತಿದೆ. ಶಿವಸೇನೆಯಂತಹ ರಾಜಕೀಯ ಪಕ್ಷಗಳು ತಮ್ಮ ಬೆಂಬಲವನ್ನು ಹೆಚ್ಚಿಸಿ ಕೊಳ್ಳುವುದಕ್ಕೆ ಪರಭಾಷಿಕರ ಮೇಲೆದೌರ್ಜನ್ಯ ನಡೆಸಿದ ಹಲವಾರು ಉದಾಹರಣೆಗಳಿವೆ.

ಮಾಧ್ಯಮಗಳ ಅಪಪ್ರಚಾರ : ದೊಡ್ಡ ವ್ಯಾಪಾರಸ್ಥರ ಹಿಡಿತದಲ್ಲಿರುವ ಎಲೆಕ್ಟ್ರಾನಿಕ್ ಮತ್ತು ಪತ್ರಿಕಾ ಮಾಧ್ಯಮಗಳು ಎಡರಂಗದ ವಿರುದ್ಧ ಅಪಪ್ರಚಾರವನ್ನೇ ಹರಿಯಬಿಟ್ಟರು. ಜನರಿಂದ ತಿರಸತಗೊಂಡ ತೃಣಮೂಲ ಕಾಂಗ್ರೆಸ್ ಮತ್ತು ಮಮತಾ ಬ್ಯಾನರ್ಜಿಯನ್ನು 'ಅಭಿವೃದ್ಧಿಯ ಪರ' ಎಂದು ಹಾಡಿಹೊಗಳಿದರು. ಆದರೆ ಜನತೆಯ ದೃಢತೆಯ ಮುಂದೆ ಯಾವ 'ಗಿಮಿಕ್ಕೂ' ನಡೆಯಲಿಲ್ಲ. ಜನರ ಪರವಾಗಿ ಕೆಲಸ ಮಾಡದ ತೃಣಮೂಲ ತಂಡವನ್ನು ಜನತೆ ತಿರಸ್ಕರಿಸಿದರು.

ಅಸೆಂಬ್ಲಿ ಚುನಾವಣಾ ವಿಜಯದ ಮುನ್ಸೂಚನೆ: ಇನ್ನೊಂದು ವರ್ಷದಲ್ಲಿ ಪಶ್ಚಿಮ ಬಂಗಾಳ ಅಸೆಂಬ್ಲಿಗೆ ಚುನಾವಣೆ ನಡೆಯಲಿದೆ. 2004ರ ಲೋಕಸಭೆ ಚುನಾವಣೆಯಿಂದ ಮೊದಲ್ಗೊಂಡು ಎಲ್ಲಾ ಚುನಾವಣೆಗಳಲ್ಲಿ ಬಹುಮತ ಪಡೆಯುತ್ತಾ ಬಂದಿರುವ ಹಿನ್ನೆಲೆಯಲ್ಲಿ ಮುಂದಿನ ಅಸೆಂಬ್ಲಿ ಚುನಾವಣೆಯಲ್ಲೂ ಬಹುಮತ ಸಾಧ್ಯ ಎಂದು ಅಭಿಪ್ರಾಯ ಪಡಲಾಗಿದೆ. ಹಿರಿಯ ನಾಯಕ ಮತ್ತು ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿಬಸುರವರು ಮೂರನೇ ಎರಡರ ಬಹುಮತದಿಂದ ಆಯ್ಕೆಯಾಗಬಹುದು ಎಂದಿದ್ದಾರೆ.

ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಯವರು ಚುನಾವಣಾ ಫಲಿತಾಂಶಕ್ಕೆ ಪ್ರತಿಕ್ರಿಯಿಸುತ್ತಾ 'ನಗರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ವಿಸ್ತರಿಸುವ ನಮ್ಮ ಜವಾಬ್ದಾರಿ ಹೆಚ್ಚಿದೆ' ಎಂದುಹೇಳಿದ್ದಾರೆ. ಮುಂದಿನ ಮೇಯರ್ ಎಂದು ಭಾವಿಸಲಾಗಿರುವ ಹೈಕೋರ್ಟ್ ವಕೀಲರಾದ ಬಿಕಾಶ್ ಭಟ್ಟಾಚಾರ್ಯರವರು ಬಸ್ತಿ(ಸ್ಲಂ) ಯ ಜನರ ಬವಣೆಯನ್ನು ನೀಗಲು ಶ್ರಮಿಸುವುದಾಗಿ ಹೇಳಿದ್ದಾರೆ.

ವಿರೋಧಿಗಳ ಕುತಂತ್ರದ ನಡುವೆಯೂ ಎಡರಂಗವನ್ನು ಬೆಂಬಲಿಸಿದ ಕೊಲ್ಕತ್ತ ಮತ್ತು ಸಾಲ್ಟ್‌ಲೇಕ್ ಪ್ರಜ್ಞಾವಂತ ನಾಗರಿಕರಿಗೆ ಲಾಲ್‌ಸಲಾಂ!

ಅಲಿಗಢ ವಿ.ವಿ: ಮೀಸಲಾತಿ ಕುರಿತು

ಅಲಿಘಡ ಮುಸ್ಲಿಂ ವಿಶ್ವ ವಿದ್ಯಾಲಯವು ಸ್ನಾತಕೋತ್ತರ ವಿಭಾಗದ ಶೇ 50ರಷ್ಟು ಪ್ರವೇಶಾವಕಾಶವನ್ನು ಮುಸ್ಲಿಂ ವಿದ್ಯಾರ್ಥಿಗಳಿಗೆ ಮೀಸಲಿಡುವ ನಿರ್ಧಾರ ಕೈಗೊಂಡಿದೆ. ಈ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯವು ಸಂಸತ್ತಿನಲ್ಲಿ ಅಂಗೀಕರಿಸಿದ ಕಾಯ್ದೆಯವುಮೂಲಕ ನಿರ್ವಹಿಸಲ್ಪಡುತ್ತಿದೆ. ಇತರ ಕೇಂದ್ರೀಯ ವಿಶ್ವ ವಿದ್ಯಾಲಯಗಳಂತೆ ಇದೂ ಒಂದು ಕೇಂದ್ರೀಯ ವಿಶ್ವ ವಿದ್ಯಾಲಯವಾಗಿದೆ. ಹೀಗಾಗಿ ಇಂತಹ ವಿಶ್ವ ವಿದ್ಯಾಲಯವೊಂದರಲ್ಲಿ ಕೋಮು ಆಧಾರಿತ ಮೀಸಲಾತಿ ನೀಡುವುದು ಸರಿಯಾದ ಕ್ರಮವಲ್ಲ.

ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿದಿರುವುದು ಮುಸ್ಲಿಂ ಸಮುದಾಯಕ್ಕೆ ಶೈಕ್ಷಣಿಕ ಸೌಲಭ್ಯಗಳು ದಕ್ಕುತ್ತಿಲ್ಲ ಎಂಬ ವಿಚಾರಗಳು ಎಲ್ಲರಿಗೂ ತಿಳಿದದ್ದೇ ಆಗಿದೆ. ಸಂವಿಧಾನದ 30ನೇ ವಿಧಿಯಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಸಂವಿಧಾನಾತ್ಮಕ ರಕ್ಷಣೆ ಒದಗಿಸಲಾಗಿದೆ. ಈ ಅವಕಾಶವನ್ನು ಬಳಸಿಕೊಂಡು ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತ ವಿಭಾಗದ ವಿದ್ಯಾರ್ಥಿಗಳಿಗೆ ಕೋಟಾ ನಿಗದಿ ಮಾಡಬಹುದಾಗಿದೆ.

ಆದರೆ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ ಈ ರೀತಿಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ. 1981 ರಲ್ಲಿ ಈ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ತಂದಾಗಲೇ ಈ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಕಾಯ್ದೆಯ ಕಲಂ 8 ರಲ್ಲಿ ವಿಶ್ವವಿದ್ಯಾಲಯದ ಪರಂಪರೆಯು ಏನೇ ಇದ್ದರೂ ಯಾವುದೇ (ಧಾರ್ಮಿಕ) ನಂಬಿಕೆಯನ್ನು ಪರಿಗಣಿಸದೇ ಪ್ರವೇಶದ ಅವಕಾಶ ಎಲ್ಲರಿಗೂ ಮುಕ್ತವಾಗಿರಬೇಕು' ಎಂದು ಹೇಳಲಾಗಿದೆ.

ಇದೇ ಕಾಯ್ದೆಯ ಕಲಂ 5 ರಲ್ಲಿ ಮುಸ್ಲಿಂ ಸಮುದಾಯದ ಶೈಕ್ಷಣಿಕ ಮತ್ತು ಸಾಂಸತಿಕ ಮುನ್ನಡೆಗೆ ಪ್ರೋತ್ಸಾಹ ನೀಡುವ ಅಧಿಕಾರವನ್ನು ವಿಶ್ವ ವಿದ್ಯಾಲಯಕ್ಕೆ ನೀಡಿರುವುದು ನಿಜವಾದರೂ ಸಹ ಅದನ್ನು ಕೋಮು ಆಧಾರಿತ ಮೀಸಲಾತಿ ಅಲ್ಲದ ಬೇರೆ ವಿಧಾನಗಳಿಂದ ಸಾಧಿಸುವುದು ಸಾಧ್ಯವಿದೆ. ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೂ ಆಧುನಿಕ ಶಿಕ್ಷಣವನ್ನು ನೀಡಬೇಕಾದ ಗಂಭೀರ ಹೊಣೆಗಾರಿಕೆ ಸರ್ಕಾರಗಳಿಗಿದೆ. ಕೇಂದ್ರ ಸರ್ಕಾರವೂ ಈ ನಿಟ್ಟಿನಲ್ಲಿ ಗಂಭೀರ ಕ್ರಮವಹಿಸಬೇಕಿದೆ. ಆದರೆ ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ ಈ ನೈಜ ಪ್ರಶ್ನೆಗಳು ಕೋಮು ಬಣ್ಣ ಪಡೆಯುವುದನ್ನು ತಪ್ಪಿಸಬೇಕೆಂಬುದೇ ಸಿಪಿಐ(ಎಂ)ನ ಕಾಳಜಿಯಾಗಿದೆ.

ಬಿಜಾಪುರ: ಅಂಗಡಿಗಳ ತೆರವು ವಿರುದ್ಧ ಯಶ್ವಸಿ ಹೋರಾಟ

ಬಿಜಾಪೂರ ಜಿಲ್ಲಾ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ 25-30 ವರ್ಷಗಳಿಂದ ಚಹಾ, ಪಾನಶಾಪ್, ಹಣ್ಣು ಹಂಪಲ, ಬ್ರೆಟ್ ಬಿಸ್ಕೇಟ್ ಹೀಗೆ 15 ಪೆಟ್ಟಿಗೆ ಅಂಗಡಿಗಳು ಇದ್ದವು. ಇವುಗಳನ್ನು ಜೂನ್ 5 ರಂದು ಬಲವಂತವಾಗಿ ಕಿತ್ತು ಹಾಕಿದ್ದಾರೆ. ಇದರ ವಿರುದ್ಧ ಪ್ರಾಂತ ರೈತಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ಜೂನ್ 7 ರಿಂದ ಅನಿರ್ದಿಷ್ಟ ದರಣಿ ನಡೆಸಿದರು.

ಜಿಲ್ಲಾ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಸರ್ವೆ ನಂ 689 ರ ಸರ್ಕಾರಿ ಜಾಗದಲ್ಲಿ 15 ಸಣ್ಣ ವ್ಯಾಪಾರಸ್ಥರು ಕಳೆದ 30 ವರ್ಷಗಳಿಂದ ಪೆಟ್ಟಿಗೆ ಅಂಗಡಿ ನಡೆಸುತ್ತಿದ್ದರು. 1977-78 ರಲ್ಲಿ ಆಗಿನ ಜಿಲ್ಲಾ ಸರ್ಜನ್ ರವರು ಲೋಕೋಪಯೋಗಿ ಇಲಾಖೆಯ ಮಂಜೂರು ಪಡೆದು 7 ಜನರಿಗೆ ಈ ಜಾಗವನ್ನು ಬಾಡಿಗೆಗೆ ಮಂಜೂರು ಮಾಡಿದ್ದರು. ವ್ಯಾಪಾರಸ್ಥರು ಭೂ ಬಾಡಿಗೆಯನ್ನೂ ತುಂಬುತ್ತಾ ಬಂದಿದ್ದರು.

ನಂತರ ಬಂದ ಸರ್ಜನ್ ಅಲ್ಲಿಂದ ಅಂಗಡಿ ಎತ್ತಿಸುವ ಪ್ರಯತ್ನ ಮಾಡುತ್ತಾ ಬಂದರು.ಬಡ ವ್ಯಾಪಾರಸ್ಥರು ಇದರ ವಿರುದ್ಧ ಕೋರ್ಟಿಗೆ ಹೋದರು.

ಲೋಕಾಯುಕ್ತರು, ಇತೀಚಿಗೆ ಆಸ್ಪತ್ರೆಗೆ ಭೇಟಿ ನೀಡಿದಾಗ ಅಂಗಡಿ ತೆರವುಗೊಳಿಸದಂತೆ ವ್ಯಾಪಾರಸ್ಥರು ಅವರಿಗೆ ಮನವಿ ಸಲ್ಲಿಸಿದರು. ಲೋಕಾಯುಕ್ತರು ಸಹ ಇವರಿಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ಆಯುಕ್ತರಿಗೆ ಸೂಚಿಸಿದರು. ಅದರಂತೆ ಮಾರ್ಚ್ 21 ರಂದು ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದೆಂದು ಆಯುಕ್ತರು ಪತ್ರ ಸಹ ಬರೆದರು. ಇದರ ಮಧ್ಯೆ ಜಿಲ್ಲಾಧಿಕಾರಿಗಳು ಹಾಗೂ ಸಿವಿಲ್ ಸರ್ಜನ್ ರವರು ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಲಬೇಕೆಂದು ಒತ್ತಡ ಹೇರುತ್ತಿದ್ದರು.

ಎಪ್ರಿಲ್ 25 ರಂದು ಪ್ರಾಂತ ರೈತಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಈ ಬಡ ವ್ಯಾಪಾರಿಗಳು ಜಿಲ್ಲಾ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿ ಅಂಗಡಿ ತೆರವುಗೊಳಿಸದಂತೆ ಜಿಲ್ಲಾ ಸರ್ಜನ್ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಹ ಸಲ್ಲಿಸಿದರು. ಆಗಲು ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು.

ಅಂಗಡಿಗಳನ್ನು ತೆರವುಗೊಳಿಸುವುದರ ವಿರುದ್ಧ ಕೋರ್ಟ್‌ನಿಂದ ತಡೆಯಾಜ್ಞೆ ಇದ್ದರೂ,ಜೂನ್ 5 ರ ಬಾನುವಾರ ಪೊಲೀಸರು ಮತ್ತು ನಗರ ಸಭೆಯ ಗುತ್ತಿಗೆದಾರರ ಗೂಂಡಾಪಡೆ ಅಂಗಡಿಗಳ ಮೇಲೆ ದಾಳಿ ಮಾಡಿ ಹೆಂಗಸರನ್ನೂ ಎಳೆದಾಡಿ ಅಂಗಡಿಗಳನ್ನು ನೆಲಸಮಗೊಳಿಸತೊಡಗಿದರು. ತಡೆಯಾಜ್ಞೆಯನ್ನು ಪೊಲೀಸರಿಗೆ ತೋರಿಸಿದರು ಸಹ ಈ ಬಡ ವ್ಯಾಪಾರಸ್ಥರನ್ನೇ ಪೊಲೀಸರು ದಬಾಯಿಸಿದ್ದಾರೆ. ವಿಷಯ ತಿಳಿದ ರೈತಸಂಘದ ಭೀಮಶಿ ಕಲಾದಗಿ, ವಿ.ಎಮ್.ಸೊನ್ನದ, ಸುರೇಖಾ ರಜಪೂ, ಲಕ್ಷ್ಮಿ ಮೈಲಾರ, ಬಸಲಿಂಗ ಕಪಾಲಿ, ಸ್ಥಳಕ್ಕೆ ದಾವಿಸಿ ಪ್ರತಿಭಟಿಸಿ, ಧ್ವಂಸವನ್ನು ತಡೆಸಿದ್ದಾರೆ. ನಂತರ ಇಡೀ ರಾತ್ರಿ ಮಳೆಯಲ್ಲಿಲೇ ಪ್ರತಿಭಟನೆ ನಡೆಸಿದ್ದಾರೆ. ಜೂನ್ 7 ರಂದು ಗಾಂಧಿ ಚೌಕದಲ್ಲಿ ಅನಿರ್ದಿಷ್ಟಾವದಿ ಸತ್ಯಾಗ್ರಹ ಪ್ರಾರಂಭಿಸಿದರು. ಈ ಹೋರಾಟಕ್ಕೆ ಅನೇಕ ಸಂಘ ಸಂಸ್ಥೆಗಳು ಬೆಂಗಲ ನೀಡದವು.



ಜಿಲ್ಲಾಡಳಿತಕ್ಕೆ ಸವಾಲಾಗಿ ನಿಂತ ಈ ಹೋರಾಟಕ್ಕೆ ಮಣಿದ ಜಿಲ್ಲಾಧಿಕಾರಿಗಳು ಜೂನ್ 11 ರಂದು ಮಾತುಕತೆಗೆ ಕರೆದು, ಪರ್ಯಾಯ ವ್ಯವಸ್ಥೆ ಮಾಡುವ ಭರವಸೆ ನೀಡಿದರು. ಮತ್ತು ವ್ಯಾಪಾರಸ್ಥರಿಗೆ ಅನುಕೂಲವಾಗುವ ಸ್ಥಳ ಗುರುತಿಸುವಂತೆ ಉಪವಿಭಾಗಾಧಿಕಾರಿಗಳಿಗೆ, ಪೌರ ಆಯುಕ್ತರಿಗೆ ಸೂಚಿಸಿದರು.

ಪರ್ಯಾಯ ವ್ಯವಸ್ಥೆ

ಜೂನ್ 13 ರಂದು ನಗರ ಸಭೆಯ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಶಾಸಕರಾದ ಅಪ್ಪುಪಟ್ಟಣ ಶೆಟ್ಟಿ, ಉಪ ವಿಭಾಗಾಧಿಕಾರಿ ಬಿ.ಎಸ್.ಪತ್ರಿ, ಪೌರಾಯುಕ್ತ ಸಿ.ಕೆ.ದಶವಂತ, ಸರ್ಕಲ್ ಇನ್ಸಪೆಕ್ಟರ್ ನಿಂಗುಪಾಟೀಲ್, ರೈತಸಂಘದ ಭೀಮಶಿ ಕಲಾದಗಿ, ಜನವಾದಿ ಮಹಿಳಾ ಸಂಘಟನೆಯ ಲಕ್ಷ್ಮಿ ಮೈಲಾರ, ಸುರೇಖಾ ರಜಪೂತ, ಕಾರ್ಮಿಕ ಮುಖಂಡ ವಿ.ಎಮ್.ಸೊನ್ನದ ಡಿವೈಎಫ್ಐನ ಬಸಲಿಂಗ ಕಪಾಲಿ, ಸಂತ್ರಸ್ತರಾದ ಪಕೀರ ಸ್ವಾಮಿ ಹುಬ್ಬಳ್ಳಿ ಮತ್ತಿತರರು ಭಾಗವಹಿಸಿದರು. ಈ ಎಲ್ಲಾರೂ ಒಮ್ಮತಕ್ಕೆ ಬಂದು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಆವರಣ ಗೋಡೆ ಈಶಾನ್ಯಕ್ಕೆ 7 ಜನರಿಗೆ, ಬಾಗಲಕೋಟ ರಸ್ತೆ ಇಬ್ರಾಹಿಂಪೂರ ರಸ್ತೆಕಡೆ 4 ಜನರಿಗೆ ಜಾಗ ಮಂಜೂರು ಮಾಡಿ, 6 ಜನರಿಗೆ ನಿವೇಶನ ಮಂಜೂರು ಮಾಡಲು ಒಪ್ಪಿ, ಉಪವಿಭಾಗಾಧಿಕಾರಿ ಧರಣಿ ಸ್ಥಳಕ್ಕೆ ದಾವಿಸಿ ಲಿಖಿತ ಪತ್ರ ನೀಡಿದರು. ಹೋರಾಟದಿಂದ ಸಂದ ಈ ಜಯಕ್ಕೆ ನಿರಾಶ್ರಿತರು ಹರ್ಷಗೊಂಡು ಪಟಾಕಿ ಸಿಡಿಸಿ ಜಯಘೋಷಣೆ ಹಾಕಿದರು.

ಬೀದಿಗಳಿದ ಮೆಕ್ಸಿಕೊ ಜನತೆಯ 'ಕ್ಷಿಪ್ರ ಪ್ರತಿರೋಧ'

'ಮೇಯರ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿಬಿಡಿ.'

ಜಗತ್ತನ್ನೊಂದು ಸುತ್ತು

ಶರತ್‌ಚಂದ್ರ

ದಕ್ಷಿಣ ಅಮೆರಿಕದ ದೇಶಗಳಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿಗಳ ಬದಲು, 'ಜನತಾ ಕ್ಷಿಪ್ರಕ್ರಾಂತಿ'ಗಳಾಗಲು ಆರಂಭಿಸಿವೆ. ದೇಶದ ಉಳ್ಳವರ ಆಳ್ವಿಕೆ ದುರ್ಭರವಾದಾಗ, ಅವರ ನಿಯಮಗಳನ್ನು ಲೆಕ್ಕಿಸದೆ 'ಚುನಾಯಿತ' ಅಧ್ಯಕ್ಷರೂ ತಮ್ಮ ಆಶ್ವಾಸನೆ ಪೂರೈಸದಿದ್ದರೆ, ಬಹುಸಂಖ್ಯಾತ ಜನರ ಹಿತಾಸಕ್ತಿ ವಿರುದ್ಧ ವರ್ತಿಸಿದರೆ ಅವರನ್ನು ಗದ್ದುಗೆಯಿಂದ ಇಳಿಸಿದ್ದಾರೆ. ಇಂತಹ ಸಂದರ್ಭ ಬಂದಾಗ ಉಳ್ಳವರ ಕಾನೂನಿನ ನಾಜೂಕುಗಳು, ನಿಯಮಾವಳಿಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇತ್ತೀಚೆಗೆ ಇಕ್ವಡೋರ್ ಮತ್ತು ಬೊಲಿವಿಯಾಗಳಲ್ಲಿ 'ಜನತಾ ಕ್ಷಿಪ್ರಪ್ರತಿರೋಧ'ಗಳು ಆಗಿವೆ ಎಂದು ಎಲ್ಲರಿಗೂ ಗೊತ್ತು. ಈಗ ಇಂತಹುದೇ ಇನ್ನೊಂದು ಘಟನೆ ಮೆಕ್ಸಿಕೊದಿಂದ ವರದಿಯಾಗಿದೆ.

ಈಗಿನ ಮೆಕ್ಸಿಕೊ ಅಧ್ಯಕ್ಷ ಉಳ್ಳವರ ಕಣ್ಮಣಿ. ಸಾಮ್ರಾಜ್ಯಶಾಹಿ ಜಾಗತೀಕರಣ- ಪರ. ಜನ ಸರ್ಕಾರದ ಹಲವಾರು ನೀತಿಗಳ ಬಗ್ಗೆ ಕುದಿಯುತ್ತಿದ್ದಾರೆ. ಇದೇ ಸಮಯದಲ್ಲಿ ಮೆಕ್ಸಿಕೊ ನಗರ(ಮೆಕ್ಸಿಕೊ ದೇಶದ ರಾಜಧಾನಿ) ಮೇಯರ್ ತಮ್ಮ ಜನಪರ ನೀತಿಗಳಿಂದ ಜನಪ್ರಿಯರಾಗಿದ್ದಾರೆ. ಮುಂದಿನ ವರ್ಷ ಮೆಕ್ಸಿಕೊದಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆಯಲಿದ್ದು, ಮೆಕ್ಸಿಕೊದ ಜನಪ್ರಿಯ ಮೇಯರ್ ಲೋಫೆರಝು ಎಡ-ಪ್ರಗತಿಪರ ಪಕ್ಷಗಳ ಅಭ್ಯರ್ಥಿಯಾಗಲಿದ್ದಾರೆ. ಪ್ರಸ್ತುತ ಅಧ್ಯಕ್ಷರು ಮತ್ತು ಅವರ ಪಕ್ಷ ಜನಬೆಂಬಲ ಕಳೆದುಕೊಂಡಿದ್ದು ಎಡ ಪ್ರಗತಿಪರ ಅಭ್ಯರ್ಥಿ ಅಧ್ಯಕ್ಷೀಯ ಚುನಾವಣೆ ಗೆಲ್ಲುವ ಎಲ್ಲಾ ಲಕ್ಷಣಗಳು ಕಂಡಿದ್ದವು. ಅವರು ಜನಮತ ಸಂಗ್ರಹದಲ್ಲಿ 10 ಪಾಯಿಂಟುಗಳಿಂದ ಮುಂದಿದ್ದಾರೆ.

ಲೋಫೆರ್ಝು ಅಧ್ಯಕ್ಷೀಯ ಅಭ್ಯರ್ಥಿಯಾಗಲು ತಡೆ

ಇದನ್ನು ನೋಡಿ ಬೆದರಿದ ಆಳುವ ಪಕ್ಷದ ಸರ್ಕಾರ ಏನಾದರೂ ಮಾಡಿ ಲೋಫೆರ್ಝು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸದಂತೆ ಮಾಡುವ ಪ್ರಯತ್ನ ಮಾಡಿತು. ಹಳೆಯ ಒಂದು ಕೋರ್ಟಿನ ಕೇಸು ದುರ್ಬಳಕೆಗೆ ಪ್ರಯತ್ನ ನಡೆಯಿತು. ಒಂದು ಸಾರ್ವಜನಿಕ ಆಸ್ಪತ್ರೆಗೆ ದಾರಿ ಮಾಡುವುದಕ್ಕೆ ಕೋರ್ಟು ಕೊಟ್ಟ ತಡೆಯಾಜ್ಞೆಯನ್ನು ಉಲ್ಲಂಘಿಸಿದ ಕೇಸು ಅದು. ಒಳ್ಳೆಯ ಉದ್ದೇಶಕ್ಕೆ ಕೋರ್ಟಿನ ಉಲ್ಲಂಘನೆ ಮಾಡಿದ್ದು ಅದು. ಲೋಫೆರ್ಝು ಅವರ ಮೇಲೆ ಕೇಸು ಹಾಕಲಾಯಿತು. ಇದು ಯಾವುದೇ ರೀತಿಯಲ್ಲಿ ಗಂಭೀರ ಭ್ರಷ್ಟಾಚಾರವಾಗಲಿ, ರಾಜಕೀಯ ಮಹತ್ವದ ಕೇಸು ಅಲ್ಲದಿದ್ದರೂ, ಮೇಯರ್‌ಗೆ ಎಲ್ಲಾ ಉನ್ನತ ರಾಜಕೀಯ ಅಧಿಕಾರಿಗಳಿಗೆ ಇರುವ ಕಾನೂನು ಕ್ರಮದಿಂದ ವಿನಾಯಿತಿಯನ್ನು ಕೊಡದಿರಲು ಅಧ್ಯಕ್ಷರು ನಿರ್ಧರಿಸಿದರು. ಈ ಕ್ಷುಲ್ಲಕ ಕೇಸ್‌ನಲ್ಲಿ ಲೋಫೆರ್ಝ್‌ರನ್ನು ಜೈಲಿಗೆ ಕಳಿಸುವುದು. ಯಾವುದೇ ಕೇಸ್‌ನಲ್ಲಿ ಬಂಧನವಾಗಿ ಜೈಲಿಗೆ ಹೋಗಿದ್ದರೆ, ಅಧ್ಯಕ್ಷೀಯ ಚುನಾವಣೆಯಲ್ಲಿ ಅಭ್ಯರ್ಥಿಯಾಗು ವಂತಿಲ್ಲ ಎಂಬ ನಿಯಮ ಬಳಸಿ ಲೋಫೆರ್ಝ್ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡುವುದು - ಇದು ಮೆಕ್ಸಿಕೊ ಆಳುವ ಪಕ್ಷಗಳ ಹುನ್ನಾರವಾಗಿತ್ತು.

'ಲೋಫೆರಝು ವಿರುದ್ಧ ಕೇಸ್ ವಾಪಸು ಪಡೆಯಿರಿ!

ಈ ಬಗ್ಗೆ ಸುದ್ದಿ ಹರಡುತ್ತಿದ್ದಂತೆ ಜನತೆಯ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಹಲವಾರು ಪ್ರತಿಭಟನೆ ನಂತರ ಏಪ್ರಿಲ್‌ನಲ್ಲಿ ಮೆಕ್ಸಿಕೊದಲ್ಲಿ ನಡೆದ ಬೃಹತ್ ಪ್ರದರ್ಶನ ಸರ್ಕಾರವನ್ನು ಗಾಬರಿಗೊಳಿಸಿತು. ಆ ಪ್ರದರ್ಶನದಲ್ಲಿ ಹತ್ತು ಲಕ್ಷ ಮೆಕ್ಸಿಕನ್ನರು ಭಾಗವಹಿಸಿದ್ದರು ಎನ್ನಲಾಗಿದೆ. ಮೇಯರ್ ಲೋಫೆರ್ಝು ವಿರುದ್ಧ ಕೇಸ್ ವಾಪಸು ತೆಗೆದುಕೊಳ್ಳಬೇಕೆಂದು ಈ ಬೃಹತ್ ರ್‍ಯಾಲಿ ಅಧ್ಯಕ್ಷರನ್ನು ಒತ್ತಾಯಿಸಿತು. ಪ್ರತಿಭಟನಾ ಪ್ರದರ್ಶದಲ್ಲಿ ಜನತೆಯ ಕೆಚ್ಚು, ಸ್ಥೈರ್ಯ, ರೋಷ ಕಂಡ ಅಧ್ಯಕ್ಷರು ಗಾಬರಿಯಾಗಿ, ತತ್‌ಕ್ಷಣ ಲೋಫೆರ್ಝು ವಿರುದ್ಧ ಕೇಸ್ ವಾಪಸು ತೆಗೆದುಕೊಂಡರು. ಇದುಬಹಳ ಅನಿರೀಕ್ಷಿತ ಬೆಳವಣಿಗೆಯಾಗಿತ್ತು. ಲ್ಯಾಟಿನ್ ಅಮೆರಿಕದ ತುಂಬಾ ನಡೆಯುತ್ತಿರುವ ಜನತಾ ಕ್ಷಿಪ್ರಕ್ರಾಂತಿಗಳ ಪ್ರಭಾವ ಈ ಘಟನೆ ಮೇಲೆ ಖಂಡಿತ ಇದೆ.

ಈ ಎಲ್ಲಾ ಬೆಳವಣಿಗೆಗಳು ಲ್ಯಾಟಿನ್ ಅಮೆರಿಕದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿದೆ. ಆಳುವ ವರ್ಗಗಳ ಬೂರ್ಜ್ವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಮ್ಮ ವರ್ಗ ಆಡಳಿತಕ್ಕೆ 'ಮುಖವಾಡ' ಆಗಿ ಬಳಸಲು ಬಿಡುವುದಿಲ್ಲ. ಜನತೆಯ ಸಂಘಟಿತ ರಾಜಕೀಯ ಶಕ್ತಿ (ಅದರಲ್ಲೂ ಎಡಕ್ಕೆ ವಾಲಿದಾಗ) ಅಧಿಕಾರ ಹಿಡಿಯಲು ಮುಂದೆ ಬಂದಾಗ ಪ್ರಜಾಪ್ರಭುತ್ವವನ್ನು ಹಲವು 'ಕಾನೂನುಬದ್ಧ - ಕಾನೂನು ಬಾಹಿರ' ಕ್ರಮಗಳಿಂದ ಮೊಟಕುಗೊಳಿಸು ವುದು ಸಾಧ್ಯವಾಗುವುದಿಲ್ಲ. ಅಧ್ಯಕ್ಷರು ಬಹುಸಂಖ್ಯಾತ ಜನತೆಯ ಇಚ್ಛೆ ಜಾರಿ ಮಾಡಬೇಕು. ಇಲ್ಲವೆ ನ್ಯೂಯಾರ್ಕ್‌ಗೆ ಓಡಿ ಹೋಗಲು ಹೆಲಿಕ್ಯಾಪ್ಟರ್ ಸಿದ್ಧವಾಗಿಡಬೇಕು - ಇದು ಲ್ಯಾಟಿನ್ ಅಮೆರಿಕದ ಆಳುವವರಿಗೆ ಕೊಡುತ್ತಿರುವ ಸಂದೇಶ - ಜಾಗತಿಕ ರಾಜಕೀಯ ಬೆಳವಣಿಗೆಯಲ್ಲಿ ಮಹತ್ವದ ತಿರುವು.

O

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಲು ಇರಬೇಕಾದ ಅರ್ಹತೆಗಳು


ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಚುನಾವಣೆಗೆ ಚಾಲನೆ ದೊರೆತಿದೆ. ಹಾಲಿ ಅಧ್ಯಕ್ಷರಾದ ಜನಾರ್ಧನ ಪೂಜಾರಿ ಅವರನ್ನು ಬದಲಾಯಿಸಬೇಕೆಂಬ ಕಾಂಗ್ರೆಸ್ ಒಳಗಿನ ಹಲವರ "ಇಚ್ಛೆ"ಗೆ ಉಪಚುನಾವಣಾ ಫಲಿತಾಂಶ ಆತ್ಮವಿಮರ್ಶೆಗೆ ಒಡ್ಡುವ ಬದಲು ಗುಂಪುರಾಜಕಾರಣಕ್ಕೆ ಉತ್ಸಾಹ ಮೂಡಿಸಿದೆ.

ಈ ಅಧ್ಯಕ್ಷರ "ಆಯ್ಕೆ" ಎಂಬುವುದು ಹೈ ಕಮಾಂಡಿನ ನೇಮಕಾತಿ ಎಂಬುವುದನ್ನು ಬೇರೆ ಹೇಳಬೇಕಿಲ್ಲ. 'ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವವಾದಿ' ಎಂಬ ಈ ಪಕ್ಷದಲ್ಲಿ ಅಧ್ಯಕ್ಷರಾಗಬೇಕಾದವರ ಅರ್ಹತೆ ಜಾತಿ ಮತ್ತು ನಾಯಕರಿಗೆ ನಿಷ್ಠೆ. ಸ್ವಯಂ ನಿರ್ಧಾರ ತೆಗೆದುಕೊಳ್ಳದ ಸರ್ಕಾರ ಸೂತ್ರ ಹಿಡಿದ ಅಧಿಕಾರಸ್ಥರ ಸುತ್ತ ಬಾಲಗ ಸುಡಿಸುವ ಕಾಯಕ, ಕುಶಲತೆ ಅಗತ್ಯವೆಂಬುವುದು ಬೇರೆ ಹೇಳಬೇಕಾಗಿಲ್ಲ. ಇದು ಕಾಂಗ್ರೆಸ್ ಅಲ್ಲವೇ! ಕಾದು ನೋಡೋಣ.

ಲೆಬನಾನ್ - ಸಿರಿಯಾ ಬಿಕ್ಕಟ್ಟು : ಅಮೆರಿಕನ್ ಮೂಗುತೂರಿಸಲು ನೆಲ ತಯಾರಿ


ಲೆಬನಾನ್ ಮಾಜಿ ಪ್ರಧಾನಿ ರಫಿಕ್ ಹರಿರಿ ಅವರ ಹತ್ಯೆ ಮತ್ತು ಆಮೇಲೆ ಲೆಬನಾನ್-ಸಿರಿಯಾಗಳಲ್ಲಿ ಕಂಡುಬಂದ ಬಿಕ್ಕಟ್ಟು-ಪ್ರಕ್ಷೋಭೆ ಮೊದಲ ನೋಟಕ್ಕೆ ಪಶ್ಚಿಮ ಏಶ್ಯಾದ ಅರಬ್ ದೇಶಗಳ ಗೊಂದಲಮಯ ರಾಜಕೀಯದಂತೆ ಕಾಣುತ್ತದೆ. ಆದರೆ ನಿಜವಾಗಿಯೂ ಅದು ಈ ದೇಶಗಳಲ್ಲಿ ಅಮೆರಿಕ ಮೂಗು ತೂರಿಸಲು ನೆಲ ತಯಾರಿಸುವ ಹುನ್ನಾರ. ಲೆಬನಾನ್ ಮಾಜಿ ಪ್ರಧಾನಿ ರಫಿಕ್ ಅವರ ಹತ್ಯೆಯನ್ನು ಸಿರಾಯದ ಮೇಲೆ ಹಾಕಲು ಸಾಕಷ್ಟು ಅಮೆರಿಕನ್ ಪ್ರಯತ್ನಗಳು ನಡೆದಿವೆ. ವಿಶ್ವಸಂಸ್ಥೆ ತನಿಖಾ ವರದಿ ಮೂಲಕ ಈ ಪ್ರಯತ್ನ ನಡೆದಿದೆ.

ಸೆಪ್ಟೆಂಬರ್ 2004 ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಸಮಿತಿ ಅಂಗೀರಿಸಿದ ನಿರ್ಣಯ 1559 ಇವೆಲ್ಲಾ ಬಿಕ್ಕಟ್ಟಿನ ಮೂಲ ಎಂದು ಸಿರಿಯಾ ಮತ್ತು ಹಲವು ಸ್ವಾತಂತ್ರ ಅರಬ್ ರಾಜಕೀಯ ವೀಕ್ಷಕರ ಅಭಿಪ್ರಾಯ. ಈ ನಿರ್ಣಯ ಅಮೆರಿಕದ, ಸಿರಿಯಾ ಜವಾಬ್ದಾರಿ ಮತ್ತು ಲೆಬನಾನ್ ಸಾರ್ವಭೌಮತ್ವ ಪುನಃ ಸ್ಥಾಪನೆ ಕಾನೂನು-2003' ರ ಕಾಪಿ.



ಅಮೆರಿಕದ ಈ ಕಾನೂನು ಮೂಲಕ ಸಿರಿಯಾವನ್ನು ಬಲಹೀನ ಮಾಡಿ ಲೆಬನಾನ್ - ಸಿರಿಯಾಗಳಲ್ಲಿ ಮಧ್ಯ ಪ್ರವೇಶ ಮಾಡಿ ಅದರ ಪಶ್ಚಿಮ ಏಶ್ಯಾ ಅರಬ್ ದೇಶಗಳಲ್ಲಿ ಸಂಪೂರ್ಣ ಸಾಮ್ರಾಜ್ಯಶಾಹಿ ನಿಯಂತ್ರಣಹೊಂದುವ ಹುನ್ನಾರ ನಡೆಸಿತು. ಅದನ್ನೇ ವಿಶ್ವಸಂಸ್ಥೆ ನಿರ್ಣಯ 1559 ರ ಮೂಲಕ ಮುಂದುವರೆಸಲು ಪ್ರಯತ್ನಿಸಿದೆ. ಈ ನಿರ್ಣಯ ಉದ್ದೇಶ ಸಿರಿಯಾ ತನ್ನೆಲ್ಲಾ ಸೈನ್ಯವನ್ನು ಏಪ್ರಿಲ್ ಒಳಗೆ ವಾಪಾಸು ತರಿಸಿಕೊಳ್ಳುವುದು, ಲೆಬನಾನ್‌ನಲ್ಲಿ ಚುನಾವಣೆ, ಎಲ್ಲಾ ಲೆಬನಾನ್ ಗೆರಿಲ್ಲಾಗಳ್ನ ನಿಶ್ಯಸ್ತ್ರಗೊಳಿಸುವುದು. ಸಿರಿಯಾ ಈ ನಿರ್ಣಯ ಜಾರಿ ಆರಂಭಿಸಿತ್ತು. ಒಂದು ಕಡೆ ಸಿರಿಯಾದ ಸೈನ್ಯ ವಾಪಸು ಹೋಗುತ್ತಿರುವುದರಿಂದ ಲೆಬನಾನ್‌ನಲ್ಲಿ ಅರಾಜಕತೆ ಉಂಟಾಗಿದೆ. ಅಥವಾ ಇಸ್ರೇಲ್-ಅಮೆರಿಕನ್ ಕೂಟ ಅರಾಜಕತೆ ಉಂಟು ಮಾಡಲು ಈ ಹತ್ಯೆ ನಡೆಸಿದೆ ಎಂಬುದು ಹಲವು ಅರಬ್ ವೀಕ್ಷಕರ ಅಭಿಪ್ರಾಯ.

ನಿಜವಾಗಿಯೂ ಹೇಳಬೇಕಾದರೆ ಲೆಬನಾನ್‌ನಲ್ಲಿ ಸಾಮ್ರಾಜ್ಯಶಾಹಿ ಮಾಧ್ಯಮ ಹೇಳುವಂತೆ ಸಿರಿಯ-ವಿರೋಧಿ ಭಾವನೆ ವ್ಯಾಪಕವಾಗಿಲ್ಲ. ಸಿರಿಯಾ ಈಗಿನ ನಾಜೂಕಿನ ಸ್ಥಿತಿಯಲ್ಲಿ ಸೈನ್ಯ ವಾಪಸು ಕರೆಸಿಕೊಳ್ಳಲಾಗದು ಎಂದು ಬಹಳ ಜನರ ಅಭಿಪ್ರಾಯ. ಐದು ಲಕ್ಷ ಜನ ಭಾಗವಹಿಸಿದ ಬೃಹತ್ ರ್‍ಯಾಲಿಯೊಂದು ಸಾಮ್ರಾಜ್ಯಶಾಹಿ-



ಝಿಯೋನಿಸ್ಟ್ ಇಸ್ರೇಲ್ ಲೆಬನಾನ್‌ನಲ್ಲಿ ಮಧ್ಯಪ್ರವೇಶ ಮಾಡಬಾರದು. ಪ್ರದರ್ಶನಕಾರರು 'ಸಿರಿಯಾ ಡಾಲರ್ಸ್', 'ಸಿರಿಯಾ-ಲೆಬನಾನ್ ಸೋದರರು', 'ಅಮೆರಿಕಾ ಎಲ್ಲಾ ಭಯೋತ್ಪಾದನೆಯ ಕೇಂದ್ರ', 'ನಮ್ಮೆಲ್ಲಾ ಸಂಕಟಗಳ ಮೂಲ ಅಮೆರಿಕಾ' 'ಅಮೆರಿಕನ್ ಝಿಯೋನಿಸ್ಟ್ ಮೂಗು ತೂರಿಕೆ ಬೇಡ'.

ಈ ಭಾರಿ ಪ್ರದರ್ಶನಕ್ಕೆ ಸಾಮ್ರಾಜ್ಯಶಾಹಿ ಮಾಧ್ಯಮಗಳು ಯಾವುದೇ ಪ್ರಚಾರ ನೀಡಲಿಲ್ಲ. ಇದಕ್ಕಿಂತ ಬಹಳ ಸಣ್ಣದಿದ್ದ ಸಿರಿಯಾ-ವಿರೋಧಿ ಪ್ರದರ್ಶನಕ್ಕೆ ಭಾರಿ ಪ್ರಚಾರ ನೀಡಿತು. ಈ ಪ್ರದರ್ಶನವನ್ನು ಹಲವು 'ವಿದೇಶಿ ಸಂಘಟನೆಗಳು ಸಂಘಟಿಸಿದ್ದವು ಎಂದು ವೀಕ್ಷಕರು ಹೇಳಿದ್ದಾರೆ. ಬೇರೆಲ್ಲೆಡೆಯಿಂದ ಸಿರಿಯಾ - ಲೆಬನಾನ್ ಸಹ ವಸಾಹತುಶಾಹಿ - ಸಾಮ್ರಾಜ್ಯಶಾಹಿ ಚರಿತ್ರೆಯ ಪಳೆಯುಳಿಕೆ. ಸಿರಿಯಾವನ್ನು ಆಳುತ್ತಿದ್ದ ಫ್ರಾನ್ಸ್ ಲೆಬನಾನನ್ನು ಪ್ರತ್ಯೇಕಿಸಿ ಧಾರ್ಮಿಕ - ಜನಾಂಗೀಯ ಒಡಕು ಮೂಡಿಸಲು ಪ್ರಯತ್ನಿಸಿತ್ತು. ಆಮೇಲೂ ಸಾಮ್ರಾಜ್ಯಶಾಹಿ ಮೂಗು ತೂರಿಕೆ ವಿವಿಧ ರೂಪದಲ್ಲಿ ಮುಂದುವರೆದಿತ್ತು.

ನಾಯಕ-ನಾಯಕಿಯರ ಹುಚ್ಚಾಟಕ್ಕೆ, ಅಂಗಾಂಗ ಪ್ರದರ್ಶನಕ್ಕೆ ಸಂಪೂರ್ಣ ಅವಕಾಶವಿರುವ ಕಥಾ ಹಂದರ! ರವಿಚಂದ್ರನ್ ಸ್ಪೆಷಾಲಿಟಿಯೇ ಅದು. ಕಥೆಯಲ್ಲಿ ಗಟ್ಟಿತನವಿಲ್ಲದಿದ್ದರೆ, ಯಾವ ತಂತ್ರಜ್ಞಾನವೂ ಉಪಯೋಗಕ್ಕೆ ಬರುವುದಿಲ್ಲವೆಂಬುದನ್ನು ಸಿನಿಮಾ ಪಂಡಿತರು ಅರಿತುಕೊಳ್ಳಬೇಕು.

ಅಹಂ ಪ್ರೇಮಾಸ್ಮಿ : ರವಿಚಂದ್ರನ್ ಬದಲಾಗೋಲ್ಲ

ಕನಸುಗಾರನ ಒಂದು ಕನಸು ಎಂದೇ ಪ್ರತಿಬಿಂಬಿತವಾಗಿ, ಸೋದರ ಬಾಲಾಜಿಯನ್ನು ನಾಯಕನ್ನಾಗಿಸಿ ತೆಗೆದಿರುವ 'ಅಹಂ ಪ್ರೇಮಾಸ್ಮಿ' ರವಿಚಂದ್ರನ್‌ರವರು 'ಪ್ರೇಮಲೋಕ'ದ ಗುಂಗಿನಿಂದ ಹೊರಬಂದಿಲ್ಲ ಎಂಬುದನ್ನು ತೋರಿಸುತ್ತದೆ. ಈಗಿನ ಕಾಲದ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ ಯೆಂಬುದನ್ನು ಬಿಟ್ಟರೆ, ಉಳಿದೆಲ್ಲ ಅದೇ ವರಸೆಯೇ! ಯಾವಾಗಲೂ ತುಂಡುಡುಗೆಯಲ್ಲೇ ಇರುವ ನಾಯಕಿ, ನಾಯಕನಾರೆಂದು ತಿಳಿಯದೆ 'ಯಾರಿವನು?' ಎಂದು ಭ್ರಮಾಲೋಕದಲ್ಲಿ ತೇಲಾಡುವುದು. ರವಿಚಂದ್ರನ್ ಸಿನಿಮಾಗಳಲ್ಲಿ ನಾಯಕಿ ಭ್ರಮಾಲೋಕಕ್ಕೆ ಇಳಿದರೇ ಮುಗಿದೇ ಹೋಯಿತು, ಶೃಂಗಾರಭರಿತ ದೃಶ್ಯಗಳಿಗೆ ಕೊರತೆಯೇ ಇರುವುದಿಲ್ಲ!.

ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡು ಓದುತ್ತಿರುವ ನಾಯಕ ಈಶ್ವರ್ ಪ್ರೀತಿ ಪ್ರೇಮಗಳಿಂದ ದೂರವಿರುವವನು. ತಾನು ಬಲೆಗೆ ಬೀಳುವವನಲ್ಲ ಎಂಬುದು ಅವನ ನಿಲುವು. ಆದರೆ ಅವನ ಹೃದಯ ಅವನ ಮಾತು ಕೇಳುವುದಿಲ್ಲ. ಈ ಚಿತ್ರದಲ್ಲಿನ ವಿಶೇಷತೆ ಇರುವುದು ಇಲ್ಲೇ. ಈ ಹೃದಯದ ಪಾತ್ರವನ್ನೇ ರವಿಚಂದ್ರನ್ ನಿರ್ವಹಿಸಿದ್ದಾರೆ.

ಹೃದಯದೊಂದಿಗೆ ಮುಖಾಮುಖಿಯಾಗುವ ನಾಯಕ ಪ್ರೀತಿಗೆ ತಲೆ ಬಾಗೊಲ್ಲವೆಂಬ ಹಠವನ್ನು ಮಣಿಸಿ ಅವನನ್ನು ಪ್ರೀತಿಯ ಬಲೆಗೆ ಬೀಳಿಸುತ್ತದೆ ಹೃದಯ. ಇಲ್ಲಿ ರವಿಚಂದ್ರನ್‌ರ ಪ್ರೀತಿ - ಪ್ರೇಮದ ಬಗ್ಗೆ ಭಾಷಣಕ್ಕೆ ಕೊನೆಯೇ ಇಲ್ಲ - ಜೊತೆಗೇ ಅತಿರೇಕದ ಕುಣಿತವೂ! ಇದೇ ಚಿತ್ರದ ಮೈನಸ್ ಪಾಯಿಂಟ್. ನೋಡುಗನ ತಲೆಚಿಟ್ಟು ಹಿಡಿಸುತ್ತಾರೆ ರವಿಚಂದ್ರನ್. ಈ ಪಾತ್ರವಿಲ್ಲದಿದ್ದಲ್ಲಿ ಚಿತ್ರದಲ್ಲಿ ಸ್ವಲ್ಪವಾದರೂ ಜೀವಂತಿಕೆ ಇರುತ್ತಿತ್ತೇನೋ?

ಹೃದಯದ ಮಾತನ್ನು ಮೀರಲಾಗದ ನಾಯಕ ಕೊನೆಗೂ ತನ್ನ ಸಹಪಾಠಿಯಲ್ಲಿ ಅನುರಕ್ತನಾಗುತ್ತಾನೆ. ತನ್ನ ಪ್ರೇಮವನ್ನು ಅವಳಲ್ಲಿ ಹೇಳಿಕೊಳ್ಳಬೇಕೆನ್ನುವಷ್ಟರಲ್ಲಿ, ಆಕೆ ಪ್ರೀತಿಸಬೇಕೆಂದಾದಲ್ಲಿ ತಾನು ನೀಡುವ ಐದು ಶರತ್ತುಗಳನ್ನು ಪೂರೈಸಬೇಕೆಂದು ಇಡೀ ಕಾಲೇಜಿಗೆ ಸವಾಲೊಡ್ಡುತ್ತಾಳೆ. ಅವಳ ಸವಾಲುಗಳೆಂದರೆ ಮೊದಲನೆಯದಾಗಿ ತನಗೆ ಮುತ್ತುಕೊಡಬೇಕು.ಆದರೆ ಅದನ್ನು ಆಕೆ ನೋಡಬಾರದು, ಬೇರೆಯವರೂ ನೋಡಬಾರದು, ಎರಡನೆದು ಅವಳ ಮನೆಯಲ್ಲಿ ಅತಿಥಿಯಾಗಿರಬೇಕು, ಅದು



ಅವಳಿಗೆ ತಿಳಿಯಬಾರದು, ಮೂರನೇಯದು ತನ್ನ ಮೈಮೇಲೆ ಮಚ್ಚೆಯೆಲ್ಲಿದೆಯೆಂದು ಹೇಳಬೇಕು ಹೀಗೆ.... ಇಷ್ಟೇ ಸಾಕಲ್ಲ! ನಾಯಕ-ನಾಯಕಿಯರ ಹುಚ್ಚಾಟಕ್ಕೆ, ಅಂಗಾಂಗ ಪ್ರದರ್ಶನಕ್ಕೆ ಸಂಪೂರ್ಣ ಅವಕಾಶವಿರುವ ಕಥಾ ಹಂದರ! ರವಿಚಂದ್ರನ್ ಸ್ಪೆಷಾಲಿಟಿಯೇ ಅದು. ನಾಯಕಿಯನ್ನು ಇಂಚಿಂಚೂ ದೊಡ್ಡ ಪರದೆಯ ಮೇಲೆ ತೆರೆದಿಟ್ಟಿದ್ದಾರೆ. ಇದೇ ಏನೋ ಅವರ ಕನಸು! ಅವರ ಟೇಸ್ಟ್!

ನಾಯಕ ಕೊನೆಗೆ ನಾಯಕಿ ಒಡ್ಡಿದ ಸವಾಲುಗಳನ್ನೆಲ್ಲಾ ತನ್ನ ಹೃದಯದ ಸಹಕಾರ, ಸಲಹೆಗಳಿಂದ ಗೆಲ್ಲುತ್ತಾನೆ, ಪ್ರೀತಿಗೆ ಸೋಲಿಲ್ಲ ಎಂಬುದನ್ನು ಕೊನೆಗೂ ಸಾಬೀತು ಪಡಿಸುತ್ತಾನೆ.

ನಾಯಕ ಬಾಲಾಜಿ ಮೊದಲ ಚಿತ್ರದಲ್ಲಿಯೇ ಲವಲವಿಕೆಯಿಂದ ನಟಿಸಿದ್ದಾರೆ. ನಾಯಕಿ ಅಭಿನಯದಲ್ಲೂ ಚುರುಕು ತೋರಿದ್ದಾರೆ. ಸಂಗೀತ ರವಿಚಂದ್ರನ್‌ರವರದ್ದೇ ಆಗಿದ್ದು ಪರವಾಗಿಲ್ಲವೆನ್ನುವಂತಿದೆ. ಆದರೆ ತಂತ್ರಜ್ಞಾನ ಬಳಕೆಯ ಹೆಸರಿನಲ್ಲಿ ಕಿವಿಗಡಚಿಕ್ಕುವ ಸದ್ದಿನಿಂದ ಕಿರಿಕಿರಿಯಾಗುತ್ತದೆ. ಕಥೆಯಲ್ಲಿ ಗಟ್ಟಿತನವಿಲ್ಲ ದಿದ್ದರೆ, ಯಾವ ತಂತ್ರಜ್ಞಾನವೂ ಉಪಯೋಗಕ್ಕೆ ಬರುವುದಿಲ್ಲವೆಂಬುದನ್ನು ಸಿನಿಮಾ ಪಂಡಿತರು ಅರಿತುಕೊಳ್ಳಬೇಕು. ವರ್ಷದ ಹಿಟ್ ಚಿತ್ರ ಎಂದು ಪ್ರಚಾರ ಕೊಡುತ್ತಿದ್ದರೂ ಚಿತ್ರಮಂದಿರ ಖಾಲಿ ಯಿದ್ದು, ಪ್ರೇಕ್ಷಕ ನೊಣಹೊಡೆಯುತ್ತಿದ್ದಾನೆ.

- ನಕುಲ

......ಜಿನ್ನಾ: ಬಹಿರಂಗ-ಅಂತರಂಗ

ಪುಟ 12 ರಿಂದ

ಪ್ಯಾಲೆಸ್ತೀನನ್ನು ವಿಮೋಚಿಸುವುದಕ್ಕಾಗಿ ಅರಬ್ಬರಿಗೆ ನೆರವಾಗಲು ವಿಮೋಚನಾ ಸೇನೆ ಕಳಿಸುವುದಾಗಿ ಉತ್ಸಾಹದಿಂದ ಹೇಳುತ್ತಿದ್ದರು. ಆದರೆ ಈ ಮಾತಿನಲ್ಲಿ ಖಚಿತತೆ ಏನೂ ಇರಲಿಲ್ಲ. ತರಬೇತಾದ ಮಾಜೀ ಯೋಧರನ್ನು ಈ ಪವಿತ್ರ ಕೆಲಸಕ್ಕೆ ವಿನಿಯೋಗಿಸ ಬೇಕೆಂದು ಮುಸ್ಲಿಂ ಮುತ್ಸದ್ದಿಗಳು ಹೇಳಿದರು. ಸರ್ಕಾರದ ಅಧಿಕೃತ ವೃತ್ತಪತ್ರಿಕೆಯಾದ 'ಡಾನ್', ಈ ಜ್ಯೂಯಿಷ್ ರಾಜ್ಯವನ್ನು ವಿರೋಧಿಸಿ ಬರೆಯಿತು. ಮಿಲಿಟರಿ ಮತ್ತು ಧಾರ್ಮಿಕ ದೃಷ್ಟಿಯಿಂದ ಮುಸ್ಲಿಂ ದೇಶಗಳದೇ ಒಂದು ಸುಸಜ್ಜಿತ ಬಲ ಇರಬೇಕು. ಹೀಗೆ ಮಾಡಿದಾಗ ಮಾತ್ರ ಇಸ್ಲಾಮಿನ ಉದ್ಧಾರ ಎಂದು ಅದರ ಸಂಪಾದಕೀಯದಲ್ಲಿ ಬರೆಯಲಾಯಿತು.

ಯಾರಾದರೂ ಮೂವತ್ತು ನಲವತ್ತು ವರ್ಷಗಳ ಕೆಳಗೆ ಜಿನ್ನಾ ಅವರನ್ನು 'ಇಸ್ಲಾಂ ಧರ್ಮೋದ್ಧಾರಕ' ಎಂದು ಕರೆದಿದ್ದರೆ ಬೇರೆಲ್ಲರಿಗಿಂತ ಸ್ವತ: ಜಿನ್ನಾಗೇ ಹೆಚ್ಚು ಅಚ್ಚರಿಯಾಗುತ್ತಿತ್ತೇನೊ? ಆ ದಿನಗಳಲ್ಲಿ ಯಾರಾದರೂ ಧರ್ಮದ ಬಗ್ಗೆ ಮಾತಾಡಿದರೆ ಜಿನ್ನಾ ಸಿನಿಕತನದ ನಗೆ ನಕ್ಕು ಸುಮ್ಮನಾಗುತ್ತಿದ್ದರು. ಧಾರ್ಮಿಕ ವಿದ್ವೇಷದ ಮಾತುಗಳನ್ನು ಅವರು ಖಂಡಿಸುತ್ತಿದ್ದರು. ಸ್ವಾತಂತ್ರ್ಯ ಚಳುವಳಿ ತೀವ್ರವಾಗಿ ಇಡೀ ದೇಶ ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದಾಗ ಜಿನ್ನಾ ಅವರು ಹಿಂದೂ ಮುಸ್ಲಿಂ ಏಕತೆಯ ಪ್ರತೀಕ ಎಂಬ ಶ್ಲಾಘನೆಗೆ ಪಾತ್ರರಾಗಿದ್ದರು. ಕಾಂಗ್ರೆಸ್ಸಿನಲ್ಲಿ ಬಹು ಪ್ರಮುಖರಾಗಿದ್ದ ಶ್ರೀಮತಿ ಸರೋಜಿನಿ ನಾಯ್ಡು ಜಿನ್ನಾರ ಆತ್ಮೀಯ ಗೆಳತಿ. ಜನರನ್ನು ಒಗ್ಗೂಡಿಸುವಲ್ಲಿ ಜಿನ್ನಾ ವಹಿಸಿದ ಪಾತ್ರ ಕುರಿತು, ಹೊಗಳುವ ಪದ್ಯಗಳನ್ನು ಆಕೆ ಬರೆದಿದ್ದರು. ರಾಷ್ಟ್ರೀಯ ಹೋರಾಟದ ಬಿಕ್ಕಟ್ಟಿನ ದಿನಗಳಲ್ಲಿ ಭಾರತವನ್ನು ಉದ್ಧರಿಸಿದ ಅಮರ ನಾಯಕ ಎಂದು ಭವಿಷ್ಯದ ಹೊತ್ತಿಗೆಯಲ್ಲಿ ಈತನ ಹೆಸರು ಇರುತ್ತದೆ ಎಂಬ ಸಾಲುಗಳು ಅವರ ಪದ್ಯದಲ್ಲಿದ್ದವು. ಮುಂದೆ ಜಿನ್ನಾರ ಹೆಸರು ತೀವ್ರ ಬಿಕ್ಕಟ್ಟಿನ ಸಮಯದಲ್ಲಿ ಹೋರಾಡಿದ ಅಮರ ನಾಯಕ ಎಂದೇ ದಾಖಲಾಯಿತು. ಆದರೆ ಅದರ ಅರ್ಥ ಮಾತ್ರ ಬದಲಾಗಿತ್ತು. ಆತ ಈಗ ಏಕತೆಯ ರಾಯಭಾರಿ ಎಂಬುದಕ್ಕೆ ಬದಲಾಗಿ ವೈಷಮ್ಯವನ್ನು ಹುಟ್ಟುಹಾಕಿದ ದೂತನಾಗಿ ಪ್ರಸಿದ್ಧರಾಗಿದ್ದರು. ತಮ್ಮ ಬದುಕಿನ ಬಹುತೇಕ ವರ್ಷಗಳನ್ನು ಏಕೀಕೃತ ಭಾರತದ ಕನಸಿಗಾಗಿಯೇ ಮುಡಿಪಾಗಿಟ್ಟಿದ್ದ ಜಿನ್ನಾ ಹೀಗೆ ಬದಲಾಗಿದ್ದು ಹೇಗೆ? ಅದರ ಕಾರಣ ಖಚಿತವಾಗಿ ಯಾರಿಗೂ ಗೊತ್ತಿಲ್ಲ.

ಮೂವತ್ತೆ ದಶಕದ ಮಧ್ಯಭಾಗದಲ್ಲಿ ಈ ವೈಮನಸ್ಯದ ಚಿಹ್ನೆ ಮೊದಲ ಬಾರಿಗೆ ಪ್ರಕಟವಾಯಿತು. ಗಾಂಧೀಜಿಯವರ ಅಸಹಕಾರ ಚಳುವಳಿಯ ಕಾರ್ಯಕ್ರಮ ಜಿನ್ನಾರಿಗೆ ಇಷ್ಟವಾಗಲಿಲ್ಲ. ನೆಹರೂ ಪ್ರಕಾರ, ಕಾಂಗ್ರೆಸ್ಸಿನಲ್ಲಿ ತುಂಬಿಕೊಂಡಿದ್ದ ಕೊಳಕು ಉಡುಪಿನ ಸಾಮಾನ್ಯ ಜನ ಜಿನ್ನಾರಿಗೆ ಇಷ್ಟವಾಗುತ್ತಿರಲಿಲ್ಲ. ಗಾಂಧಿಯವರ ಅಯಸ್ಕಾಂತದಂತಹ ವ್ಯಕ್ತಿತ್ವದ ಪ್ರಭಾವದಿಂದ ಜನಸಾಮಾನ್ಯರು ಹೊಸ ಚೇತನ ಉತ್ಸಾಹಗಳಿಂದ ತಲೆ ಎತ್ತಿದ್ದು ಅವರಿಗೆ ಸಹಿಸಲಾಗ ಲಿಲ್ಲ. ಇನ್ನೂ ಕೆಲವರ ಪ್ರಕಾರ ಗಾಂಧಿಯವರ ಕಾನೂನುಭಂಗ ಕಾರ್ಯಕ್ರಮ ಜಿನ್ನಾರ ಕಾನೂನು ಪ್ರಜ್ಞೆಗೆ ಸಮ್ಮತವಾಗಲಿಲ್ಲ. ಆದರೆ ಒಂದು ಮಾತು ಮಾತ್ರ ನಿಶ್ಚಿತ. ಅವರು ಗಾಂಧಿ, ನೆಹರೂ ಮತ್ತು ಇನ್ನಿತರ ಕಾಂಗ್ರೆಸ್ ಲೀಡರುಗಳಿಂದ ದುರವಾಗುವುದಕ್ಕೆ ಹಿಂದೂ ಮುಸ್ಲಿಂ ಭೇದ ಭಾವನೆ ಮಾತ್ರ ಕಾರಣವಲ್ಲ ಎಂಬುದು. ಇದೇನೇ ಇದ್ದರೂ, ಜಿನ್ನಾರವರು ಸುಮಾರು ಮೂವತ್ತು ವರ್ಷಗಳಿಂದ ಹೆಸರಿದ್ದೂ ಇಲ್ಲದಂತಿದ್ದ ನಿರ್ಜೀವ ಮುಸ್ಲಿಂಲೀಗನ್ನು 1936ರಲ್ಲಿ ಪುನರುಜ್ಜೀವನಗೊಳಿಸಿ ಅದನ್ನು ಧಾರ್ಮಿಕ ವೇದಿಕೆಯಾಗಿ ಮಾಡಿದರು. ಸಹಸ್ರಾರು ಮುಸ್ಲಿಮರ ದರಿದ್ರಾವಸ್ಥೆಗೆ ಹಿಂದೂಗಳು ಮೇಲುಗೈಯಾಗಿರು ವುದೇ ಕಾರಣ ಎಂದು ಜಾತಿ ಬಾಂಧವರ ಕಿವಿಗಳಲ್ಲಿ ಊದಲಾರಂಭಿಸಿದರು. ಈ ಪ್ರಚಾರ ಆರಂಭವಾಗುವುದಕ್ಕೆ ಮೊದಲು ಹಿಂದೂ ಮುಸ್ಲಿಮರ ನಡುವೆ ಹಿಂದೆಂದೂ ಇಲ್ಲದಷ್ಟು ಒಗ್ಗಟ್ಟು ಉಂಟಾಗಿತ್ತು. ಬ್ರಿಟೀಷರು ಒಡೆದು ಆಳುವ ನೀತಿಯನ್ನು ಜಾರಿಗೆ ತಂದು ಈ ಒಗ್ಗಟ್ಟನ್ನು ಹಾಳುಗೆಡವಿದರು. ಉನ್ನತ ಸ್ಥಾನಗಳಲ್ಲಿದ್ದ ಕೆಲವು ಭಾರತೀಯರೂ ಸಹ ಹಿಂದೂ ಮುಸ್ಲಿಂ ಒಗ್ಗಟ್ಟನ್ನು ಕುರಿತು ಹೆದರುತ್ತಿದ್ದರು. ಒಗ್ಗಟ್ಟಿನಿಂದ ನಡೆಯುವ ಚಳುವಳಿಯಿಂದ ತಮ್ಮ ವಿಶೇಷ ಸ್ಥಾನಮಾನಗಳಿಗೆ ಧಕ್ಕೆಯಾಗುತ್ತದೆ ಎಂಬ ಭಯ ಅವರಲ್ಲಿತ್ತು. ಆಮೇಲೆ ಇನ್ನೊಂದು ನಿರ್ಣಾಯಕ ಕಾರಣ ಉದ್ಭವಿಸಿತು. ಕೈಗಾರಿಕಾ ಕ್ಷೇತ್ರದಲ್ಲಿ ಹಿಂದೂಗಳೂ ಯಾವಾಗಲೂ ಮುಸ್ಲಿಮರಿಗಿಂತ ಮುಂದೆ ಇದ್ದರು. ಕೆಲವು ಖ್ಯಾತ ಮುಸ್ಲಿಂ ಭೂಹಿಡುವಳಿದಾರರಿಗೆ ಈಗ ಕೈಗಾರಿಕಾ ಕ್ಷೇತ್ರದಲ್ಲಿ ಮಿಂಚುವ ಆಸಕ್ತಿ ಬೆಳೆಯಿತು. ಚೆನ್ನಾಗಿ ಸ್ಥಾಪಿತಗೊಂಡಿರುವ ಹಿಂದೂ ಕೈಗಾರಿಕೋದ್ಯಮಿಗಳ ಮೇಲೆ ಹಗೆಯ ಭಾವನೆ ಹೊಂದಿರುವ ಶ್ರೀಮಂತ ಮುಸ್ಲಿಮರು ತನಗೆ ಪ್ರಬಲ ಬೆಂಬಲಿಗರಾಗುತ್ತಾರೆ ಎಂದು ಜಿನ್ನಾ ಕಂಡುಕೊಂಡರು.

ಜಿನ್ನಾ ಅವರ ಹೋರಾಟದ ಉದ್ದೇಶ ದರಿದ್ರಾವಸ್ಥೆಯಲ್ಲಿದ್ದ ಮುಸ್ಲಿಮರನ್ನು ವಿಮೋಚಿಸುವುದಾಗಿತ್ತೋ ಅಥವಾ ಶ್ರೀಮಂತ ಮುಸ್ಲಿಮರಿಗೆ ಮೀಸಲು ಕ್ಷೇತ್ರಗಳನ್ನು ಗಳಿಸಿಕೊಡುವುದಾಗಿತ್ತೋ ಗೊತ್ತಾಗುವುದಿಲ್ಲ. ಆದರೆ ಪಾಕಿಸ್ತಾನದ ಮುಂದಿನ ಘಟನಾವಳಿಗಳನ್ನು ನೋಡಿದರೆ, ಜಿನ್ನಾ ತಾವು ಹೇಳಿಕೊಂಡಂತೆ ಮುಸ್ಲಿಂ ಜನಸಾಮಾನ್ಯರ ಉದ್ಧಾರಕ್ಕೆ ಹೋರಾಡುವ ಬದಲಾಗಿ ಮುಸ್ಲಿಂ ಶ್ರೀಮಂತ ವರ್ಗದ ಹಿತಾಸಕ್ತಿಗಳಿಗೆ ಹೋರಾಡಿದರು ಎಂಬುದನ್ನು ಕಂಡುಕೊಳ್ಳಬಹುದು. ಹೀಗೆ ಮಾಡುವಲ್ಲಿ ಅವರು ಯಾವುದೇ ಐಹಿಕ ಲಾಭವನ್ನು ನಿರೀಕ್ಷಿಸಿರಲಿಲ್ಲ.

(ಮುಂದುವರಿಯುವುದು)

ಗಜಲ್

ವೇದನೆ ಸ್ವರ ನಮ್ಮದಾದರೂ
ನಮ್ಮ ಗೀತೆಯದು ಮಧುರ
ಹರಿಯುವ ನಮ್ಮ ಕಂಬನಿಯಲ್ಲಿದೆ
ಕಾಮನ ಬಿಲ್ಲದು ಬಂಧುರ

ಹೊತ್ತು ಜಗದ ನೋವ, ನಕ್ಕು ನಗಿಸಲು ಕಲಿಸುವೆವು
ಹೃದಯ ರಕುತದಿ ಬೆಳೆಸುವೆವು
ಕೆಂಪು ಗುಲಾಬಿಯದು ಸುಂದರ

ಕಾಲದ ಜೊತೆ ನಾವು ಕಾಲು ಹಾಕುವೆವು
ಸೂರ್ಯನ ಸಂಗಡ ಮೇಲೇಳುವೆವು
ಬರುವ ಬಿರುಗಾಳಿಗಳಿಗೆ ಹೇಳಿ
ಉರಿದಿದೆ ಹೋರಾಟ ದೀಪವದು ಸುಸ್ಥಿರ

ಜಗದ ಕಷ್ಟ ಜೀವಿಗಳೆಲ್ಲಾ ಒಂದು
ಕೇಳಿ, ಕಷ್ಟಗಳ ಹುಟ್ಟುಹಾಕುವವರೇ
ಕೆಡಹುವ ವಿಚಾರ ನಿಮ್ಮದಿರಬಹುದು
ಕಟ್ಟುವೆವು ನಾವು ಭವಿಷ್ಯದಮಂದಿರ

- ಜಂಬಣ್ಣ ಅಮರಚಿಂತ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH